
ಹೊಲಕ್ಕೆ
ವಿಬಿಎಸ್
ಹೋಗೋಣ
"ನಾನೇ ದ್ರಾಕ್ಷಿಬಳ್ಳಿ ನೀವು ಕೊಂಬೆಗಳು. . ." ಯೋಹಾನ ೧೫:೫
ನಿರ್ದೇಶಕ ಕೈಪಿಡಿ

# ಹೊಲಕ್ಕೆ ಹೋಗೋಣ

# ವಿಬಿಎಸ್




"ನಾನೇ ದ್ರಾಕ್ಷೆಬಳ್ಳಿ ನೀವು ಕೊಂಬೆಗಳು. . ." ಯೋಹಾನ ೧೫:೫

ಮುಖ್ಯ ಸಂಪಾದಕರು : ಕ್ರಿಸ್ಟಿನಾ ಕ್ರಾಸ್

ಸೃಜನಾತ್ಮಕ ತಂಡ : ಡ್ವೈಟ್ ಕ್ರಾಸ್, ಫ್ಲೋರ್ ಬೋಲ್ಡೋ, ಜೆನ್ನಿಫರ್ ಸಾಂಚೆಜ್ ನೀಟೋ, ಜೂಲಿಯೋ ಸಾಂಚೆಜ್ ನೀಟೋ, ಮೈಕ್ ಕಂಗಾಸ್, ಮನ್ಸೆರೆತ್ ದುರನ್ ಡಿಯಾಜ್, ಸುಕಿ ಕಂಗಾಸ್, ವೆರೋನಿಕಾ ಟೋಜ್ ಮತ್ತು ವಿಕ್ಕಿ ಕಂಗಾಸ್.

ಈ ವಿಬಿಸ್ ಕಾರ್ಯಕ್ರಮಕ್ಕೆ ಅದ್ಭುತವಾದ ಹೊಸ ಹಾಡುಗಳನ್ನು ಬರೆದಿರುವ ಜಾಶುವಾ ಮೆಂಡೋಜಾ ಮತ್ತು ಮೈಕೆಲ್ ಕಂಗಾಸ್ ರವರಿಗೆ ವಂದನೆಗಳು.

ಅನುವಾದಕರ ತಂಡ:

ಆಲಿ ಅಟುಹಾ, ಅಲೆನ್ ಗ್ಜೆವಿಯರ್, ಅನ್ನುಪಮ ವಾಂಕೆಡ್, ಅರೋಮ ಪಬ್ಲಿಕೇಷನ್ಸ್, ಬ್ಲೆಸ್ಸಿ ಜೆತೆಂದರ್, ಬ್ಲೆಸ್ಸಿ ಜೇಕಬ್, ಚಾರ್ಲ ಮಯೂಮಿ, ಡೇವಿಡ್ ರಾಜು, ಎಫ್ರಾಯಿಮ್ ಜುಗುಣ ಮೆರೋಬಿ, ಫಿನ್ನಿ ಜೇಕೊಬ್, ಜೇಕೊಬ್ ಕುರುವಿಲ್ಲ, ಜೆತೆಂದರ್ ಸಿಂಗ್, ಮಾರ್ಕೊಸ್ ರೋಕಾ, ಮ್ಯಾಥ್ಯು ದಾಸ್, ನಸ್ಸಿಂ ಬೋಗ್ವಯ, ಪಾಲ್ ವಾಂಗಿ, ಪಾಲ್ ಸೇಪ್ತನ್, ರುಬಿನ್ ರಾಜ್, ಸಬ್ರಿನಾ ಬೆನ್ನಿ ಜಾನ್ ಮತ್ತು ಇನ್ನೂ ಹಲವಾರು.

# ಸ್ವಾಗತ!

“ಹೊಲಕ್ಕೆ ಹೋಗೋಣ” ವಿಬಿಎಸ್ ಗೆ ಸ್ವಾಗತ, ಇಲ್ಲಿ ನಾವು ಪೇತ್ರನ ಜೀವಿತ ಮತ್ತು ಜೀವಿತದಲ್ಲಿ ಒಳ್ಳೆಯ ಆಯ್ಕೆಗಳನ್ನು ಮಾಡಿಕೊಳ್ಳುವದರ ಬಗ್ಗೆ ಕಲಿತುಕೊಳ್ಳೋಣ! ದ್ರಾಕ್ಷೇತೋಟದ ಆಟಗಳು, ಹೊಲದ ಕರಕುಶಲಗಳು, ಸಿಲೋ ತರಗತಿಗಳು ಮತ್ತು ಪೇತ್ರನೊಂದಿಗಿನ ಪ್ರವಾಸದ ಮೂಲಕ ಹೊಲದಲ್ಲಿ ಸಂತೋಷಿಸೋಣ! ಯೇಸು ಕ್ರಿಸ್ತನು ಮತ್ತು ಪೇತ್ರನನ್ನು ನೀವು ನಿಮ್ಮ ಸಭೆಗೆ ಆಹ್ವಾನಿಸಬಹುದು. ಸತ್ಯವೇದ ಸಮಯದನುಸಾರವಾದ ವಸ್ತ್ರಾಲಂಕಾರಗಳನ್ನು ಸೃಷ್ಟಿಸುವದು ಸುಲಭವಾದ ಕಾರ್ಯವಾಗಿದೆ.

ಯೇಸು ಕ್ರಿಸ್ತನೇ ದ್ರಾಕ್ಷೇಬಳ್ಳಿ ಮತ್ತು ನಾವು ಕೊಂಬೆಗಳು ಎಂಬದನ್ನು ಮನವರಿಕೆ ಮಾಡಿಕೊಂಡವರಾಗಿ; ಸ್ನೇಹಿತರ ನಡುವೆ ಚಪ್ಪಾಳೆಗಳ ಮೂಲಕ ಅದ್ಭುತವಾಗಿ ಸ್ವಾಗತಿಸಿಕೊಳ್ಳುವದು, ಕ್ರಿಯೆಗಳೊಂದಿಗೆ ಹೊಸ ಹಾಡುಗಳು, ಆಧುನಿಕ ಕಾಲದ ಕೆಲವು ತಮಾಷೆಯ ನಾಟಕಗಳು ಮತ್ತು ಹೊಸ ಸ್ನೇಹಿತರನ್ನು ಮಾಡಿಕೊಳ್ಳಲು ಅವಕಾಶಕ್ಕಾಗಿ, ನಿಮ್ಮ ಸಭೆಯಲ್ಲಿ ನಡೆಯುವ ದೊಡ್ಡ ಕಾರ್ಯಕ್ಕಾಗಿ ಸಿದ್ಧಗೊಳ್ಳಿರಿ. ಜೆನ್ನಿಯವರು ಸಿದ್ಧಪಡಿಸಿರುವ ನಾಲ್ಕು ಹೊಸ ವಿದ್ಯಾರ್ಥಿ ಪುಸ್ತಕಗಳಲ್ಲಿರುವ ಐದು ಪ್ರಮುಖ ಅಂಶಗಳ ಮೂಲಕ ಒಳ್ಳೆಯ ಆಯ್ಕೆಗಳನ್ನು ಮಾಡಿಕೊಳ್ಳುವದು ಹೇಗೆ ಎಂಬದನ್ನು ಇಡೀ ಸಭೆ ಮಕ್ಕಳೊಂದಿಗೆ ತಿಳಿದುಕೊಳ್ಳಬಹುದಾಗಿದೆ:
೧. ನಾನು ನಂಬುವ ಆಯ್ಕೆ ಮಾಡಿಕೊಂಡಿದ್ದೇನೆ. ೨. ನಾನು ಬದಲಾಗುವ ಆಯ್ಕೆ ಮಾಡಿಕೊಂಡಿದ್ದೇನೆ. ೩. ನಾನು ವಿಧೇಯನಾಗುವ ಆಯ್ಕೆ ಮಾಡಿಕೊಂಡಿದ್ದೇನೆ. ೪. ನಾನು ಕ್ರಿಯೆ ಮಾಡುವ ಆಯ್ಕೆ ಮಾಡಿಕೊಂಡಿದ್ದೇನೆ
೫. ನಾನು ಆತುಕೊಳ್ಳುವ ಆಯ್ಕೆ ಮಾಡಿಕೊಂಡಿದ್ದೇನೆ

ಜೂಲಿಯೊರವರು ಸಿದ್ಧಪಡಿಸಿರುವ ಸ್ವಾದಿಷ್ಟವಾದ ತಿನಿಸುಗಳು, ಮಾನ್ಸೆರವರ ಕ್ರಿಯಾತ್ಮಕ ಕರಕುಶಲಗಳು, ಜೆನ್ನಿಯವರ ನಿಮ್ಮ ಸಭೆಗೆ ಬೇಕಾಗುವ ಸುಂದರವಾದ ಅಲಂಕಾರಗಳು, ಸುಕಿಯವರ ಮನಮೋಹಕ ಯೋಚನೆಗಳು, ರೂಬೇನ್, ಮೈಕ್, ಕ್ರಿಸ್ಟಿ ಮತ್ತು ಸುಕಿರವರ ಚಲಿಸುವ ಹಾಡುಗಳು, ಸುಕಿ ಮತ್ತು ಮಾನ್ಸೆರವರ ಹೊಸ ನೃತ್ಯ ಸಂಯೋಜನೆಗಳು, ಕ್ರಿಸ್ಟಿಯವರ ಆಶ್ಚರ್ಯಕರ ಉಪಾಯಗಳು, ಪಾಠಗಳು, ಆಧುನಿಕ ನಾಟಕಗಳು, ಆಟಗಳು ಮತ್ತು ಸ್ವಾಗತಗಳು ಮತ್ತು ಸುಕಿಯವರು ವಿನ್ಯಾಸ ಮಾಡಿರುವ ಸುಂದರವಾದ ಚಿಹ್ನೆಗಳಿಂದ ಕೂಡಿರುವ ಈ ವಿಬಿಎಸ್ ವಿವಿಧ ವಿಶಿಷ್ಠತೆಗಳಿಂದ ಕೂಡಿದೆ.

ನಿಮ್ಮ ವಿಬಿಎಸ್ ಗೆ ಭೇಟಿಕೊಡುವ ಎರಡು ವ್ಯಕ್ತಿತ್ವಗಳ ವಿಷಯದಲ್ಲಿ ನಾವು ಆಸಕ್ತರಾಗಿದ್ದೇವೆ: ಕುದುರೆ ಮತ್ತು ಸಾಕಿದ ಹುಂಜದ ಕೈಗೊಂಬೆ!!! ಫ್ಲೋರ್ ಬರೆದಿರುವ ಕೈಗೊಂಬೆ ಮಾತುಗಳನ್ನು ನೋಡಿ ಕೇಳಿಸಿಕೊಳ್ಳುವಾಗ ಮಕ್ಕಳಿಗೆ ನಗು ತಡೆಯಲಾಗುವದಿಲ್ಲ. ವಿಕ್ಕಿ ಸೃಷ್ಟಿಸಿರುವ ಕೈಗೊಂಬೆಯ ವಿನ್ಯಾಸವನ್ನು ಸುಲಭವಾಗಿ ಮಾಡಬಹುದು ಮತ್ತು ಅದು ನಿಮ್ಮ ವಿಬಿಎಸ್ ಗೆ ಜೀವ ತುಂಬುತ್ತದೆ.

ವಿಬಿಎಸ್ ಗೆ ಅದರದೇ ಆದ ವಿಶೇಷತೆ ಇದೆ. ವಿಬಿಎಸ್ ದಿನ ಹತ್ತಿರವಾಗುವಾಗ ಕುತೂಹಲ ಹೆಚ್ಚಾಗುತ್ತದೆ, ಅಲಂಕಾರಗಳನ್ನು ಸಿದ್ಧಪಡಿಸಲಾಗುತ್ತದೆ, ಮಕ್ಕಳು ಸಹನೆಯನ್ನು ಕಳೆದುಕೊಳ್ಳುತ್ತಾರೆ ಮತ್ತು ಇಡೀ ಸಭೆಗೆ ದೊಡ್ಡ ಕಾರ್ಯಕ್ರಮದ ಅರಿವು ಇರುತ್ತದೆ. ನಾವು ಇದನ್ನು ಯಾಕೆ ಮಾಡುತ್ತೇವೆ? ಅದ್ಭುತವಾದ ವಿಬಿಎಸ್ ಕಾರ್ಯಕ್ರಮವನ್ನು ನಡೆಸಲು ನಾವು ಯಾಕೆ ಕಷ್ಟಪಡುತ್ತೇವೆ? ಯಾಕಂದರೆ ದೇವರು ಮಕ್ಕಳನ್ನು ಪ್ರೀತಿಸುತ್ತಾನೆ, ಆತನು ಅವರನ್ನು ವಿಶೇಷವಾದವರೆಂದು ಪರಿಗಣಿಸುತ್ತಾನೆ ಮತ್ತು ಅವರು ದೇವರ ವಾಕ್ಯಗಳನ್ನು ಕೇಳಿಸಿಕೊಳ್ಳಬೇಕಾಗಿದೆ. ಮತ್ತೊಂದು ಪ್ರಾಮುಖ್ಯವಾದ ಕಾರಣವೇನೆಂದರೆ ಅನೇಕ ಮಕ್ಕಳಿಗೆ ಯೇಸು ಕ್ರಿಸ್ತನ ಬಗ್ಗೆ ತಿಳಿಸಲು ಸಾಧ್ಯವಾಗುತ್ತದೆ! ನಿಮ್ಮ ಸಮುದಾಯದಲ್ಲಿರುವ ಕುಟುಂಬಗಳನ್ನು ನಿಮ್ಮ ಸಭೆಯ ಕಡೆಗೆ ಸೆಳೆಯಲು ಈ ಕಾರ್ಯಕ್ರಮವನ್ನು ಸಾಧನವಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. ಇದನ್ನು ಕೇವಲ ನಿಮ್ಮ ಸಭೆಯ ಮಕ್ಕಳಿಗೆ ಮಾತ್ರವೇ ಸೀಮಿತಗೊಳಿಸಬೇಡಿರಿ ಬದಲಾಗಿ ಸಮುದಾಯವನ್ನು ಆಹ್ವಾನಿಸಿರಿ, ಸಭೆಯ ಸದಸ್ಯರನ್ನು ಉಪಯೋಗಿಸಿಕೊಳ್ಳಿರಿ ಮತ್ತು ಸಮುದಾಯವನ್ನು ನೆನಪಿನಲ್ಲಿಟ್ಟುಕೊಳ್ಳುವ ರೀತಿಯಲ್ಲಿ ನಡೆಸಿರಿ!

"ಮಕ್ಕಳೇ ಪ್ರಮುಖರು" ತಂಡದಲ್ಲಿರುವ ಸದಸ್ಯರೆಲ್ಲರೂ ನೀವು ಮಾಡುವ ಈ ಪ್ರಾಮುಖ್ಯವಾದ ಕಾರ್ಯದಲ್ಲಿ ನಿಮ್ಮೊಂದಿಗಿರುತ್ತಾರೆ. ನಿಮ್ಮ ವಿಬಿಎಸ್ ಆಶೀರ್ವಾದ ನಿಧಿಯಾಗಿರಲಿ!!!

- ಸಹೋದರಿ ಕ್ರಿಸ್ಟಿನಾ ಕ್ರಾಸ್



# ಈ ಸಾಮಗ್ರಿಯನ್ನು ಉಪಯೋಗಿಸುವದು ಹೇಗೆ

## ಈ ಸಾಮಗ್ರಿಯನ್ನು ಉಪಯೋಗಿಸುವದು ಹೇಗೆ

"ಮಕ್ಕಳೇ ಪ್ರಮುಖರು" ತಂಡದಲ್ಲಿರುವ ಸಿಬ್ಬಂದಿಗಳು ಪ್ರತಿ ವರ್ಷ ನಿಮಗಾಗಿ ಹೊಸ ವಿಬಿಎಸ್ ಅನ್ನು ಸಂತೋಷವಾಗಿ ಸಿದ್ಧಪಡಿಸುತ್ತಾರೆ ಮತ್ತು ಈ ವರ್ಷವು ಅದಕ್ಕಿಂತ ಭಿನ್ನವಾಗಿಲ್ಲ. ನೀವು ತರಗತಿಗಳನ್ನು ಸರದಿ ಅಥವಾ ಅನುಕ್ರಮವಾಗಿ ನಡೆಸಬಹುದು. ವಿಬಿಎಸ್ ನಿಮ್ಮದಾಗಿದೆ ಮತ್ತು ನಮ್ಮ ಹಾಗೆಯೇ ನೀವೂ ಇದರಲ್ಲಿ ಸಂತೋಷಿಸಬಹುದು ಹಾಗೂ ಒಟ್ಟಾಗಿ ಕಾರ್ಯಮಾಡುವ ಮೂಲಕ ನಿಮ್ಮ ಸಭೆಯಲ್ಲಿ  ಹೆಚ್ಚು ಐಕ್ಯತೆಯನ್ನು ಗಳಿಸಬಹುದು ಎಂಬದು ನಮ್ಮ ನಿರೀಕ್ಷೆಯಾಗಿದೆ. ಎಂಟು ಹಾಡುಗಳು ಮತ್ತು ಅವುಗಳಿಗೆ ಮಾಡಿರುವ ನೃತ್ಯ ಸಂಯೋಜನೆಯ ಡಿವಿಡಿ ಉಪಯೋಗ ಮಾಡುವದನ್ನು ಮರೆಯಬೇಡಿರಿ. ಇಲ್ಲಿ ಕೊಡಲಾಗಿರುವ ವೇಳಾಪಟ್ಟಿಯು ಆಯ್ಕೆಯಾಗಿದೆಯಷ್ಟೆ ಆದರೆ ನಿಮ್ಮ ಕಾರ್ಯಕ್ರಮವನ್ನು ಹೇಗೆ ನಡೆಸಬೇಕು ಎಂಬದರ ಬಗ್ಗೆ ನಿಮಗೆ ಇದರಿಂದ ಆಲೋಚನೆಗಳು ದೊರೆಯುತ್ತವೆ. ಜನರನ್ನು ಆಹ್ವಾನಿಸಲು ಕರಪತ್ರಗಳು ಮತ್ತು ಭಿತ್ತಿಪತ್ರಗಳನ್ನು ಉಪಯೋಗಿಸಿರಿ ಮತ್ತು ನಿಮ್ಮ ಸಮುದಾಯದಲ್ಲಿರುವ ಮಕ್ಕಳನ್ನು ಆಹ್ವಾನಿಸಲು ಮರೆಯದಿರಿ. ಈ ಕಾರ್ಯಕ್ರಮದಲ್ಲಿ ನಿಮಗೆ ಸಂತೋಷವಾಗುವದು ಎಂಬದು ನಮ್ಮ ನಿರೀಕ್ಷೆಯಾಗಿದೆ!!

## ಪ್ರಾರಂಭ

ನೀವು ಪ್ರತಿಯೊಂದು ದಿನವನ್ನು ಹಾಡುಗಳು ಮತ್ತು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಬೇಕು. ನಂತರ ಪಾಠದ ಹೆಸರು ಮತ್ತು ಕಂಠಪಾಠ ವಚನವನ್ನು ತಿಳಿಸಿರಿ. ಮಕ್ಕಳು ಒಟ್ಟಾಗಿರುವಾಗಲೇ, ಉಪಾಯದೊಂದಿಗೆ ಮುಖ್ಯ ಪಾಠಕ್ಕೆ ಹೋಗಿರಿ. ಪಾಠವಾದ ನಂತರ ಮತ್ತೊಮ್ಮೆ ನಿಮ್ಮ ಕುದುರೆ ಮತ್ತು ಹುಂಜದ  ಕೈಗೊಂಬೆಯೊಂದಿಗೆ ಹಾಡು ಹಾಡಿಸಿರಿ. ಅಂತಿಮವಾಗಿ ಮಕ್ಕಳನ್ನು ಅವರ ವಯಸ್ಸಿನಗುಸಾರವಾಗಿ ವಿಭಜಿಸಿರಿ ಠಾಣೆಗಳಿಗೆ ಕಳುಹಿಸಿಕೊಡಿರಿ.

## ಪಾಠದಲ್ಲಿರುವ ಉಪಾಯಗಳು

ಈ ವರ್ಷ ನಮ್ಮಲ್ಲಿರುವ ವಿಶಿಷ್ಟವಾದ ಸಂಗತಿಯು ನಿಮ್ಮ ಮುಖ್ಯವಾದ ವಿಬಿಎಸ್ ಪಾಠಗಳಿಗೆ ಅಮೋಘವಾದ ಸ್ಪರ್ಶವನ್ನು ಕೊಡುತ್ತದೆ. ಇವುಗಳು ಸಂದೇಶಗಳಿರುವ ಉಪಾಯಗಳಾಗಿವೆ ಅಂದರೆ, ಮ್ಯಾಜಿಕ್ ಶೋ ಆದರೆ ಮ್ಯಾಜಿಕ್ ಇಲ್ಲದೆ.:) ನೀವು ಈ "ಉಪಾಯದಲ್ಲಿ" ಪರಿಣಿತಿ ಹೊಂದುವ ತನಕ ಮತ್ತೆಮತ್ತೆ ಅಭ್ಯಾಸ ಮಾಡಬೇಕು. ಉಪಾಯಗಳಿಗೆ ಕೊಡಲಾಗಿರುವ ಸೂಚನೆಯು ರಹಸ್ಯವಾಗಿರುತ್ತವೆ, ನೀವು ಅವುಗಳನ್ನು ಯಾರಿಗೂ ತಿಳಿಸಬಾರದು. ಕೆಲವು ಉಪಾಯಗಳು ದೃಶ್ಯಮಾಧ್ಯಮದ ಆಶ್ಚರ್ಯವಾಗಿದ್ದು ಪಾಠಕ್ಕೆ ಜೀವ ತುಂಬುತ್ತದೆ. ನೀವು ಸಿದ್ಧರಾಗಿರುವದು, ಉಪಾಯವನ್ನು ಅರ್ಥಮಾಡಿಕೊಳ್ಳುವದು ಮತ್ತು ಉತ್ತಮವಾಗಿ ಅಭ್ಯಾಸ ಮಾಡುವದು ಅತ್ಯಂತ ಪ್ರಾಮುಖ್ಯವಾಗಿದೆ. ದೃಶ್ಯಗಳನ್ನು ನೋಡಿ ಉಪಾಯಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ ನಮ್ಮ ಯೂ ಟ್ಯೂಬ್ ಚಾನೆಲ್ ವೀಕ್ಷಿಸಿರಿ!

## ವೇಳಾಪಟ್ಟಿ: (೨-೪ ತಾಸುಗಳು)

**ಪ್ರಾರಂಭ:**

**(೨೦-೪೦ ನಿಮಿಷಗಳು)**

- ಸ್ವಾಗತ ಮತ್ತು ಪಾಠದ ಹೆಸರು
- ಹಾಡು
- ಮುಖ್ಯ ಪಾಠ
- ಉಪಾಯ

**೪ ಠಾಣೆಗಳ ಸರದಿ:**

**(ಪ್ರತಿಯೊಂದು ೨೦-೪೦ ನಿಮಿಷಗಳು)**

೧. ಸಿಲೊ ತರಗತಿ

- ವಿದ್ಯಾರ್ಥಿ ಪುಸ್ತಕಗಳು

೨. ಪೇತ್ರನೊಂದಿಗೆ ವನಭೋಜನ

- ನಾಟಕ/ಪೇತ್ರ ಮತ್ತು ಯೇಸು ಕ್ರಿಸ್ತನೊಂದಿಗಿರುವ ಚಿತ್ರ ಬಿಡಿಸಿರಿ
- ತಿಂಡಿ

೩. ದ್ರಾಕ್ಷೇತೋಟದ ಆಟಗಳು

- ಆಟಗಳು

೪. ಹೊಲದ ಕರಕುಶಲಗಳು

- ವಿಶೇಷವಾದ ಸ್ವಾಗತ
- ಕರಕುಶಲಗಳು

**ಮುಕ್ತಾಯ:**

**(೨೦-೪೦ ನಿಮಿಷಗಳು)**

- ಕೈಗೊಂಬೆ ಆಟ (ಹುಂಜ ಮತ್ತು ಕುದುರೆ)
- ಹಾಡುಗಳು
- ಪ್ರಕಟನೆಗಳು



# ಠಾಣೆಗಳು

## ಸಿಲೋ ತರಗತಿ




ಈ ಠಾಣೆಯಲ್ಲಿ, ನಿಮ್ಮ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಪುಸ್ತಕಗಳಿಂದ ಖುಷಿಪಡುವರು. ಮತ್ತು ಪ್ರಥಮ ಬಾರಿಗೆ, ಪ್ರೌಢ ವಯಸ್ಕರು ಮತ್ತು ಯೌವನಸ್ಥರಿಗೆ ನಾವು ಪುಸ್ತಕಗಳನ್ನು ಒದಗಿಸಿದ್ದೇವೆ! ಈ ಠಾಣೆಯಲ್ಲಿ ನೀವು ಪಾಠ ಹೇಳುವ ಅವಶ್ಯಕತೆ ಇರುವದಿಲ್ಲ ಯಾಕಂದರೆ ಪೇತ್ರನೊಂದಿಗಿನ ಪ್ರವಾಸದಲ್ಲಿ ಅವರಿಗೆ ಪಾಠ ಇರುತ್ತದೆ. ನೀವು ವೆಬ್ ನಿಂದ ವಿದ್ಯಾರ್ಥಿ ಪುಸ್ತಕಗಳನ್ನು ಡೌನ್ ಲೋಡ್ ಮಾಡಿಕೊಂಡು ಅದರ ಪ್ರತಿಗಳನ್ನು ತೆಗೆಸಿಕೊಳ್ಳಬಹುದು. ಚಿಲ್ಡ್ರನ್ ಆರ್ ಇಂಪಾರ್ಟೆಂಟ್ ಎಂಬ ನಮ್ಮ ವೆಬ್ ಸೈಟ್ ಗೆ ಹೋಗಿರಿ ಮತ್ತು ವಿಬಿಎಸ್ ಆಯ್ಕೆ ಮಾಡಿಕೊಳ್ಳಿರಿ, ನಂತರ ಪುಸ್ತಕಗಳನ್ನು ಡೌನ್ ಲೋಡ್ ಮಾಡಿಕೊಳ್ಳಲು "ಹೊಲಕ್ಕೆ ಹೋಗೋಣ" ಆಯ್ಕೆ ಮಾಡಿಕೊಳ್ಳಿರಿ. ನಿಮ್ಮ ಮಾತೃಭಾಷೆ ಆಯ್ಕೆ ಮಾಡುವದನ್ನು ಮರೆಯಬೇಡಿರಿ.

## ಪೇತ್ರನೊಂದಿಗೆ ವನಭೋಜನ




"ಪೇತ್ರನೊಂದಿಗೆ ವನಭೋಜನ" ಠಾಣೆಯಲ್ಲಿ ನಾವು ಪೇತ್ರ, ಯೇಸು ಕ್ರಿಸ್ತನು ಮತ್ತು ಇತರೆ ಶಿಷ್ಯರೊಂದಿಗೆ ಸತ್ಯವೇದದ ಕಥೆಯನ್ನು ನಾಟಕೀಯ ಹಾಗೂ ಅಧುನಿಕ ರೀತಿಯಲ್ಲಿ ನೋಡಿಕೊಳ್ಳೋಣ. (ನಟನೆ ಮಾಡಲು ಎಷ್ಟು ಮಂದಿ ಯೌವನಸ್ಥರು ನಿಮ್ಮ ಬಳಿಯಲ್ಲಿದ್ದಾರೆ?). ಪ್ರತಿದಿನ ನಾಟಕ ಮಾಡಿಸಲು ಮುಂಚಿತವಾಗಿಯೇ ಅವರಿಗೆ ಸೂಕ್ತವಾದ ತರಬೇತಿ ಕೊಡಿರಿ. ಯೇಸು ಕ್ರಿಸ್ತನು ವಾಟ್ಸಪ್ ಕಳುಹಿಸುವದು ಅಥವಾ ಪೇತ್ರನು ಸೆಲ್ಫೀ ತೆಗೆದುಕೊಳ್ಳುವದನ್ನು ನೋಡುವಾಗ ಮಕ್ಕಳು ಖುಷಿಪಡಲಿ ಎಂಬ ಕಾರಣಕ್ಕೆ ಕೆಲವು ಆಧುನಿಕ ಸಂಗತಿಗಳನ್ನು ಸೇರಿಸಿಕೊಂಡು ಕಥೆಯನ್ನು ಬದಲಾಯಿಸಿದ್ದೇವೆ. ನಂತರ ಸ್ವಾದಿಷ್ಟವಾದ ತಿಂಡಿಯನ್ನು ಮಾಡಿ ಪೇತ್ರನೊಂದಿಗೆ



ವನಭೋಜನ ಮಾಡೋಣ. ಸತ್ಯವೇದದ ಕಾಲದನುಸಾರವಾಗಿ ವಸ್ತ್ರ ವಿನ್ಯಾಸಗೊಳಿಸಿರಿ ಮತ್ತು ಆ ದಿನದ ತಿಂಡಿ ಸಿದ್ಧಪಡಿಸಲು ಸಹಾಯ ಮಾಡುವ ಮನೋಭಾವನೆಯಿರುವ ಸಹೋದರಿಯನ್ನು ಆಹ್ವಾನಿಸಿರಿ.

## ಹೊಲದ ಕರಕುಶಲತೆ



ಮಕ್ಕಳು ತಮ್ಮ ಪ್ರತಿದಿನದ ಕರಕುಶಲವನ್ನು ಮಾಡುವದರಲ್ಲಿ ಮತ್ತು ಅದನ್ನು ಮನೆಗೆ ತೆಗೆದುಕೊಂಡು ಹೋಗಿ ಅದರ ಮೇಲೆ ಮುದ್ರಣಗೊಂಡಿರುವ ತಾವು



ಕಲಿತುಕೊಂಡ ವಾಕ್ಯವನ್ನು ತೋರಿಸುವದರಲ್ಲಿ ಸಂತೋಷಪಡುತ್ತಾರೆ. “ಹೊಲದಲ್ಲಿ ಕರಕುಶಲತೆ” ಎಂಬ ಈ ಅವಧಿಯಲ್ಲಿ, ಕರಕುಶಲಗಳನ್ನು ಮಾಡುವದರೊಂದಿಗೆ, ಸಂತೋಷವಾಗಿ ಸ್ವಾಗತಿಸುವದನ್ನು ಕಲಿತುಕೊಳ್ಳುತ್ತೇವೆ!!! ನಮ್ಮ ಯೂ ಟ್ಯೂಬ್ ಚಾಲನ್ ನಲ್ಲಿರುವ ದೃಶ್ಯಗಳನ್ನು ನೋಡುವ ಮೂಲಕ ಸ್ವಾಗತಿಸುವದನ್ನು ಸುಲಭವಾಗಿ ಕಲಿತುಕೊಳ್ಳಬಹುದು ಆದರೆ ನೀವು ಕ್ರಿಯೆಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯ ಮಾಡುವ ಸಲುವಾಗಿ ಸ್ವಾಗವನ್ನು ಬರವಣಿಗೆಯ ರೂಪದಲ್ಲಿಯೂ ನಾವು ಕೊಟ್ಟಿದ್ದೇವೆ. ೫ ದಿವಸಗಳ ಕ್ರಿಯೆಗಳನ್ನು ಕಲಿತುಕೊಳ್ಳಲು ಸಮಯ ಮಾಡಿಕೊಳ್ಳಿರಿ ಮತ್ತು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಂತೋಷಿಸಿರಿ! ಕರಕುಶಲಗಳಿಗೆ ಸಾಮಗ್ರಿಗಳನ್ನು ಒದಗಿಸುವಾಗ ಮೊದಲು ಸ್ವಾಗತಿಸುವದು ಉತ್ತಮ ಎಂಬದು ನಮ್ಮ ಅಭಿಪ್ರಾಯವಾಗಿದೆ.

## ದ್ರಾಕ್ಷಾತೋಟದ ಆಟಗಳು




ನಮ್ಮ ಮಕ್ಕಳಿಗಿರುವ ಸಾಮರ್ಥ್ಯಗಳನ್ನು ಕೆಲವು ಆಟಗಳ ಮೂಲಕ ಉಪಯೋಗಿಸಿಕೊಳ್ಳದೆ ಹೋದರೆ ನಮ್ಮ ವಿಬಿಎಸ್ ಪೂರ್ತಿಯಾಗುವದಿಲ್ಲ. ಅಧ್ಯಾಪಕರು ತಮ್ಮ ಬಾಯಲ್ಲಿ ವಿಶಲ್ ಹಿಡಿದುಕೊಂಡು ವೀಕ್ಷಿಸುವಾಗ, ಮಕ್ಕಳು ಓಡಲು ಸಹಾಯವಾಗುವ ರೀತಿಯಲ್ಲಿ ಈ ಆಟಗಳನ್ನು ಏರ್ಪಡಿಸಲಾಗಿದೆ. ಮಕ್ಕಳಿಗೆ ಆಟವಾಡುವದು ಬಹಳ ಪ್ರಾಮುಖ್ಯವಾಗಿದೆ, ಆದ್ದರಿಂದ ಆಟಗಳನ್ನು ಕಡೆಗಣಿಸಬೇಡಿರಿ!

## ಕೈಗೊಂಬೆಗಳು



ನಮ್ಮ ವಿಬಿಎಸ್ ಭೇಟಿ ಮಾಡುವ ೨ ವ್ಯಕ್ತಿತ್ವಗಳ ಬಗ್ಗೆ ನಾವು ಅತ್ಯಂತ ಕುತೂಹಲವುಳ್ಳವರಾಗಿದ್ದೇವೆ: ಕುದುರೆ ಮತ್ತು ಹುಂಜದ ಕೈಗೊಂಬೆ!!! ಪ್ರತಿದಿನದ ಮುಕ್ತಾಯದ ಸಮಯದಲ್ಲಿ ಮಕ್ಕಳು ಕೈಗೊಂಬೆಯಾಟದ ಸಮಯದಲ್ಲಿ ನಗುತ್ತಿರುತ್ತಾರೆ. ನಿಮ್ಮ ವಿಬಿಎಸ್ ನ ಪ್ರತಿಯೊಂದು ದಿವಸವನ್ನು ಪ್ರಾರಂಭಿಸುವ ಮೊದಲು ನೀವು ನಿಮ್ಮ ಕೈಗೊಂಬೆಗಳನ್ನು ಹಾಡುಗಳಲ್ಲಿ ಉಪಯೋಗಿಸಬಹುದು ಯಾಕಂದರೆ ಹಾಡುಗಳನ್ನು ರೆಕಾರ್ಡ್ ಮಾಡುವಾಗ ಇವುಗಳು ಸಹಾಯ ಮಾಡಿವೆ. ಹಾ ಹಾ!
ಕೈಗೊಂಬೆಗಳನ್ನು ಮಾಡಬೇಕೆಂದರೆ, ನಮ್ಮ ವೆಬ್ ಸೈಟ್ ನಲ್ಲಿರುವ ವಿಧಾನಗಳನ್ನು ಡೌನ್ ಲೋಡ್ ಮಾಡಿರಿ ಮತ್ತು ಅವುಗಳನ್ನು ಒಟ್ಟಾಗಿ ಗಟ್ಟಿಮುಟ್ಟಾದ ವಸ್ತ್ರ ಅಥವಾ ನಿಮ್ಮ ಕ್ಷೇತ್ರದಲ್ಲಿ ಲಭ್ಯವಿರುವ ಸಾಧನದ ಮೇಲೆ ಹೊಲೆಯಿರಿ. ಕೈಗೊಂಬೆಯನ್ನು ಮಾಡಿ ಮುಗಿಸಲು, ನೀವು ಕತ್ತರಿಗಳು, ಪೆನ್ಸಿಲ್, ಸಿಲಿಕೋನ್ ಅಥವಾ ಹಾಟ್-ಗ್ಲೂ ಗನ, ಗಾಳಿ ಊದುವ ಸಾಧನ, ಕಾರ್ಡ್ ಬೋರ್ಡ್, ಅಂಟಿಸುವ ಟೇಪ್, ಸೂಜಿ ಮತ್ತು ದಾರವನ್ನು ಒಟ್ಟುಗೂಡಿಸಬೇಕು. ಇದೇ ಪ್ರಕಾರ ಪಿವಿಸಿ ಪೈಪ್ ಥೇಟರ್ ಮಾಡಲು ನಿಮಗೆ ಸಲಹೆಗಳು ದೊರೆಯುತ್ತವೆ ಅಥವಾ ಹೊಲದ ದೃಶ್ಯದ ಉಪಯೋಗದೊಂದಿಗೆ ನೀವೇ ನಿಮ್ಮ ಥೇಟರ್ ಮಾಡಿರಿ. ವಿನ್ಯಾಸವು ನಮ್ಮ ವೆಬ್ ಸೈಟ್ ನಲ್ಲಿ ದೊರೆಯುತ್ತದೆ:www.childrenareimportant.com/farm.

ಪ್ರತಿದಿನ ೪ ಜನರ ಸಹಾಯದಿಂದ ನಿಮ್ಮ ಕೈಗೊಂಬೆಯಾಟವನ್ನು ಸುಲಭವಾಗಿ ಮಾಡಬಹುದು. ಕುದುರೆ ಮತ್ತು ಹುಂಜದ ಹಾಗೆ ಮಾತನಾಡಲು ಇಬ್ಬರಿಗೆ ಮೈಕ್ರೋಫೋನ್ ಕೊಡಿರಿ ಮತ್ತು ಗೊಂಬೆಗಳನ್ನು ಆಡಿಸಲು ಇಬ್ಬರು

ಥಿಯೇಟರ್ ಹಿಂದಿರಬೇಕು. ವೆಬ್ ನಲ್ಲಿ “ಮೈಸಿಎಮ್ ಯು” (ಮೈ ಚಿಲ್ಡ್ರನ್ ಮಿನಿಸ್ಟ್ರಿ ಯೂನಿವರ್ಸಿಟಿ) ಎಂಬ ಭಾಗವಿದೆ ಎಂಬದನ್ನು ಮರೆಯಬೇಡಿರಿ, ಅಲ್ಲಿ ಕೈಗೊಂಬೆಗಳನ್ನು ಯಾವ ರೀತಿ ಉಪಯೋಗಿಸಬೇಕು ಎಂಬುದರ ಬಗ್ಗೆ ನಿಮ್ಮ ತರಬೇತಿ ಹಾಗೂ ಆಲೋಚನೆಗಳು ದೊರೆಯುತ್ತವೆ.

## ಮುಕ್ತಾಯ


ನಿಮ್ಮ ಕೈಗೊಂಬೆಯಾಟದ ನಂತರ, ಹಾಡುಗಳನ್ನು ಮತ್ತೆ ಹಾಡಿಸುವ ಮತ್ತು ನಾಳೆಯ ಪ್ರಕಟನೆಗಳನ್ನು ತಿಳಿಸುವ ಮೂಲಕ ನೀವು ಆಯಾ ದಿನಗಳನ್ನು ಕೊನೆಗೊಳಿಸಬಹುದು. ಕರಕುಶಲದ ಸಮಯದಲ್ಲಿ ಅಭಿನಂದನೆಯನ್ನು ಮುಗಿಸಲು ಆಗದೆ ಹೋಗಿದ್ದರೆ, ಮುಕ್ತಾಯದ ಸಮಯದಲ್ಲಿ ಮಾಡಿರಿ. ಅಧ್ಯಾಪಕರ ಅತ್ಯುತ್ತಮವಾದ ಕಾರ್ಯಗಳ ಶ್ಲಾಘನೆ ಮಾಡುವದನ್ನು ಮರೆಯಬೇಡಿರಿ!!

## ಹೆಚ್ಚಿನ ಆಲೋಚನೆಗಳು

ಬಾಗಿಲನ್ನು ಅಲಂಕರಿಸುವದು

ನಿಮ್ಮ ತರಗತಿಗೆ ಪ್ರವೇಶಿಸುವ ಬಾಗಿಲನ್ನು ಬಣ್ಣಬಣ್ಣದ ಕರಕುಶಲ ಹಾಳೆಗಳಿಂದ ಅಲಂಕರಿಸಿರಿ.






ಸಿಲೊ



ನಿಮ್ಮ ಸಭೆಯ ಮೂಲೆಯಲ್ಲಿ ದೊಡ್ಡ ಹಳ್ಳವನ್ನು ನಿರ್ಮಿಸಿರಿ. ಈ ಉದಾಹರಣೆಯಲ್ಲಿ ವೃತ್ತಾಕಾರದಲ್ಲಿರುವ ಮೇಲ್ಭಾಗವು ಮಗುವಿನ ಈಜಿನ ಕೊಳವಾಗಿರುತ್ತದೆ. ಗುಂಡಗಿರುವ ಗೋಡೆಗಳಿಗೆ ಪಿವಿಸಿ ಪೈಪ್ ಗಳ ಸುತ್ತಲು ಹಾಳೆಯಿಂದ ಸುತ್ತಿರಿ.




ಕೋಳಿ ಮರಿಗಳ ಜನನ

ಹಾಳೆಯ ಮೇಲೆ ಮೊಟ್ಟೆಯನ್ನು ಬರೆಯಿರಿ ಮತ್ತು ಅದಕ್ಕೆ ಹಳದಿ ಬಣ್ಣವನ್ನು ಹಚ್ಚಿರಿ. ಕಣ್ಣುಗಳಿಗೆ ಗೋಂದು ಹಚ್ಚಿರಿ ಮತ್ತು ಮುಖದ ಮೇಲೆ ಕೊಕ್ಕು ಇಡಿರಿ. ಇದೇ ಆಕಾರವನ್ನು ಕಂದು ಬಣ್ಣದ ಹಾಳೆಯ ಮೇಲೆ ಕತ್ತರಿಸಿರಿ ಮತ್ತು ಮೊಟ್ಟೆಯ ಮೂಲೆಗಳು ಹಾಗೂ ಕಂದು ಬಣ್ಣದ ಮೊಟ್ಟೆಯ ಸಿಪ್ಪೆಗೆ ಗೋಂದು ಹಾಕಿ ಒಟ್ಟಾಗಿ ಅಂಟಿಸಿರಿ. ತೋರಿಸಿರುವ ಹಾಗೆ ಮಧ್ಯದಲ್ಲಿ ರಂಧ್ರ ಮಾಡಿರಿ.



ದ್ರಾಕ್ಷೇತೋಟದ ಗೋಡೆ

ಗೋಡೆಯ ಒಂದು ಭಾಗಕ್ಕೆ ಬಿಳೀ ಹಾಳೆಯನ್ನು ಸುತ್ತಿರಿ. ನಿಮ್ಮ ಕೈಗಳಿಗೆ ಹಸಿರು ಬಣ್ಣ ಹಚ್ಚಿಕೊಂಡು ಗೋಡೆಗೆ ಅಂಟಿಸಿರಿ ಅದು ಎಲೆಗಳ ಹಾಗೆ ಕಾಣಿಸುವದು. ದ್ರಾಕ್ಷೆಗಳಿಗೆ, ಕ್ಯಾರೆಟ್ ನಂಥಹ ವೃತ್ತಾಕಾರದಲ್ಲಿರುವ ಪದಾರ್ಥಗಳನ್ನು ಬಳಸಿರಿ. ದ್ರಾಕ್ಷೆಯ ಕೊಂಬೆಗಳಿಗೆ ಹೊರಗಿನಿಂದ ಕಡ್ಡಿಗಳನ್ನು ಕೂಡಿಸಿರಿ ಮತ್ತು ಲತಾತಂತುಗಳನ್ನು ಕೈಯಿಂದಲೇ ಬಿಡಿಸಿರಿ.

ಹಾಳೆಯ ಮರ

ಕಂದು ಬಣ್ಣದ ಹಾಳೆಯನ್ನು ಮರದ ಟೊಂಗೆ ಮತ್ತು ಕೊಂಬೆಗಳಿಗೆ ಟೇಪ್ ಮೂಲಕ ಅಂಟಿಸಿರಿ. ಎಲೆಗಳನ್ನು ಮಾಡಲು ಟಿಶೂ ಹಾಳೆ ಅಥವಾ ಕ್ರೀಪ್ ಹಾಳೆಯನ್ನು ಶೈಲಿಗನುಸಾರವಾಗಿ ಮಡಚಿರಿ ಮತ್ತು ಮಧ್ಯದಲ್ಲಿ ಸೊಗಸಾಗಿ ಕಟ್ಟಿರಿ. ತೋರಿಸಿರುವ ಸಂಕೇತಗಳ ಪ್ರಕಾರ





ಮೂಲೆಗಳನ್ನು ಕತ್ತರಿಸಿರಿ. ಪೂರ್ತಿಯಾಗಿ ವ್ಯಕ್ತವಾಗಲು ಎಲೆಗಳನ್ನು ಹರಡಿರಿ ಮತ್ತು ಸರಿಯಾದ ಸ್ಥಳದಲ್ಲಿ ಟೇಪ್ ಅಂಟಿಸಿರಿ.

ಹೊಲದ ಗೋಡೆ

ಗೋಡೆಗೆ ಕೆಂಪು ಬಣ್ಣದ ಹಾಳೆಯನ್ನು ಸುತ್ತಿರಿ ಮತ್ತು ತೋರಿಸಿರುವ ಪ್ರಕಾರ ಬಿಳೀ ಹಾಳೆಯನ್ನು ಕತ್ತರಿಸಿ ಅಂಟಿಸಿರಿ.





ಹಾಳೆಯ ದಾಕ್ಷೆಗಳು




ಪರ್ಪಲ್ ಬಣ್ಣದ ಹಾಳೆಯ ಸಣ್ಣ ಚೂರುಗಳನ್ನು ವೃತ್ತದೊಳಗೆ ಅಂಟಿಸಿರಿ. ವೃತ್ತಗಳನ್ನು ಒಟ್ಟಾಗಿ ಅಂಟಿಸಿರಿ. ಹಾಳೆಯ ಎಲೆಗಳ ಮೇಲೆ ದ್ರಾಕ್ಷೆಯ ಗೊಂಚಲುಗಳನ್ನು ಒಟ್ಟಾಗಿ ಅಂಟಿಸಿರಿ. ಬಟ್ಟೆಗಳ ಸಾಲು ಅಥವಾ ಹಗ್ಗದ ಮೇಲೆ ಹೀಗೆ ಹೆಚ್ಚಾಗಿ ಅಂಟಿಸಿರಿ.

ಗೋಡೆಯ ದೃಶ್ಯ

ಗೋಡೆಯ ಮೇಲೆ ಈಜುವ ಸೂಜಿಯ ಕುದುರೆಗಳನ್ನು ಮತ್ತು ಅವುಗಳ ಎದುರಿನಲ್ಲಿ ಕಾರ್ಡ್ ಬೋರ್ಡ್ ಬೇಲಿಯನ್ನು ಇಡಿರಿ.

ಚಟುವಟಿಕೆಯ ದಾಳ

ಹಾಳೆಯ ಎರಡು ಘನಗಳನ್ನು ಮಾಡಿರಿ. ಒಂದರ ಮೇಲೆ “ಅದರಂತೆ ನಟಿಸಿರಿ, ಅದರಂತೆ ಶಬ್ದ ಮಾಡಿರಿ, ಅದರಂತೆ ಕುಳಿತುಕೊಳ್ಳಿರಿ, ಅದರಂತೆ ನಡೆಯಿರಿ, ಅದರಂತೆ ಓಡಿರಿ” ಎಂಬದಾಗಿ ಬರೆಯಿರಿ. ಮತ್ತೊಂದರ ಮೇಲೆ “ಹಸು, ಕುದುರೆ, ಕೋಳಿ” ಎಂದು ಬರೆಯಿರಿ. ದಾಳವನ್ನು ಉರುಳಿಸಿರಿ, ಈ ಚಟುವಟಿಕೆಯ ಮೂಲಕ ಮಕ್ಕಳು ಸಂತೋಷಿಸಲಿ!



ತೋಟ/ಹೊಲ

ಹಾಳೆಯಲ್ಲಿ ತೋಟವನ್ನು ಮಾಡಿರಿ ಮತ್ತು ತೋರಿಸಿರುವ ಪ್ರಕಾರ ನಿಮ್ಮ ಸಭೆಯ ಗೋಡೆಗೆ ಅಂಟಿಸಿರಿ.

ಪ್ರಾಣಿಗಳ ಶೈಲಿಯ ಗಾಳಿಯ ಮುದ್ದಳೆಗಳು

ಬಣ್ಣವುಳ್ಳ ಹಾಳೆಯನ್ನು ಟ್ಯೂಬ್ ಗೆ ಅಂಟಿಸಿರಿ. ಅದೇ ಹಾಳೆಯಲ್ಲಿ ಮುಖ ರೂಪವನ್ನು ಮತ್ತು ತೋರಿಸಿರುವ ಪ್ರಕಾರ ಮಡಚಿರುವ ಕಾಲುಗಳ ರೂಪವನ್ನು ಕತ್ತರಿಸಿರಿ. ಮುಖದ ಭಾಗಗಳು ಮತ್ತು ಕಾಲುಗಳನ್ನು ಅಂಟಿಸಿರಿ. ಅದನ್ನು ಗೋಡೆಗೆ ನೇತುಹಾಕಲು ರಿಬ್ಬನ ಅಥವಾ ದಾರವನ್ನು ಸಿಕ್ಕಿಸಿರಿ.

# ಪಾಠ ೧

## ಹೆಸರು ೧


ನಾನು ನಂಬುವ ಆಯ್ಕೆ ಮಾಡಿಕೊಂಡಿದ್ದೇನೆ
ಸತ್ಯವೇದ ಕಥೆ: ಪೇತ್ರನು ಯೇಸು ಕ್ರಿಸ್ತನನ್ನು ಗುರುತಿಸಿದನು

ಮತ್ತಾಯ ೧೬:೧೩-೨೦

## ವಚನ ೧

"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು, ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" ಯೋಹಾನ ೩:೧೬

## ಉಪಾಯ ೧



ಹೆಸರುಗಳಿರುವ ನಾಲ್ಕು ಗುರಿಗಳನ್ನು ಸಿದ್ಧಪಡಿಸಿರಿ ಮತ್ತು ಅವುಗಳನ್ನು ಸಭೆಯ ಸುತ್ತಲೂ ಹಾಕಿರಿ. ೪ ಹೆಸರುಗಳು ಯಾವುವೆಂದರೆ: ಯೇಸು ಕ್ರಿಸ್ತನು, ಹಣ, ಪ್ರಖ್ಯಾತಿ ಮತ್ತು ಜನಪ್ರಿಯತೆ. ಈಗ ಮಕ್ಕಳಿಗೆ ಕಾಣಿಸದಂತೆ ಹೆಸರುಗಳನ್ನು ಮರೆಮಾಡಿರಿ ಮತ್ತು ಅಧ್ಯಾಪಕರಿಗೂ ಯಾವುದು ಯಾವುದೆಂದು ಗೊತ್ತಾಗದಂತೆ ನೋಡಿಕೊಳ್ಳಿರಿ. ಪಾಠದ ಸಮಯದಲ್ಲಿ, ಅಧ್ಯಾಪಕರನ್ನೆಲ್ಲಾ ಮುಂದೆ ಕರೆದು ಹಾಳೆಯ ಚೆಂಡುಗಳು ಅಥವಾ ರಬ್ಬರ್ ಬ್ಯಾಂಡ್ ಗಳನ್ನು ಗುರಿಗಳ ಕಡೆಗೆ ಎಸೆಯುವಂತೆ ಸೂಚಿಸಿರಿ. ಅಧ್ಯಾಪಕರು ಮುಂದೆ ಬರಬೇಕು ಮತ್ತು ಗುರಿಗಳಿಗೆ ಅಂದರೆ ೪ರಲ್ಲಿ ಯಾವುದಕ್ಕೆ ಬೇಕಾದರೂ ಹೊಡೆಯಬಹುದು ಎಂದು ಮೊದಲೇ ಹೇಳಿರಬೇಕು. (ಯಾವ ಗುರಿ ಯೇಸು ಕ್ರಿಸ್ತನು ಎಂದು ಅವರಿಗೆ ಹೇಳಬೇಡಿರಿ!!)

## ಮುಖ್ಯ ಪಾಠ ೧

"ಹೊಲಕ್ಕೆ ಹೋಗೋಣ!" ರಜಾ ದಿವಸಗಳ ಸತ್ಯವೇದ ಶಾಲೆಗೆ ಸ್ವಾಗತ.
ನಮ್ಮ ಹೊಲದಲ್ಲಿ ನಮಗೊಂದು ದ್ರಾಕ್ಷೆ ತೋಟವಿದೆ, ಅದು ನಾವುಉ ಈ ವಾರದ ಸತ್ಯವೇದ ಪಾಠಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ಈ ವಿಬಿಎಸ್ ಅತ್ಯಂತ ವಿಶೇಷವಾಗಿದೆ ಯಾಕಂದರೆ ಯೋಹಾನ ಸುವಾರ್ತೆಯ ೧೫ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿರುವ ದ್ರಾಕ್ಷೇ ಬಳ್ಳಿ ಮತ್ತು ಕೊಂಬೆಗಳ ಬಗ್ಗೆ ನಾವು ಕಲಿತುಕೊಳ್ಳುವವರಾಗಿದ್ದೇವೆ. ಈ ಅಧ್ಯಾಯದಲ್ಲಿರುವ "ನಾನೇ ದ್ರಾಕ್ಷೇ ಬಳ್ಳಿ" ಎಂಬ ಅತ್ಯಂತ ಪ್ರಾಮುಖ್ಯವಾದ ವಚನಭಾಗವನ್ನು ನೋಡಿಕೊಳ್ಳೋಣ. ಇಲ್ಲಿ ಮಾತನಾಡುತ್ತಿರುವವರು ಯಾರು??? ಯೇಸು ಕ್ರಿಸ್ತನು!

ಹೀಗಿದ್ದರೆ ದ್ರಾಕ್ಷೇ ಬಳ್ಳಿ ಯಾರು? ಯೇಸು ಕ್ರಿಸ್ತನು!

ಒಂದು ಗಿಡದಲ್ಲಿ ಬಳ್ಳಿಯು ಬಲಿಷ್ಠವಾದ ಭಾಗವಾಗಿರುತ್ತದೆ, ಯಾಕಂದರೆ ಇದು ಭೂಮಿಯೊಳಗಿಂದ ಬರುವ ಭಾಗವಾಗಿದ್ದು ಬೇರುಗಳನ್ನು ಹೊಂದಿರುತ್ತದೆ. ಯೇಸು ಕ್ರಿಸ್ತನು ನಮ್ಮ ಜೀವಿತಗಳ ಬಲಿಷ್ಠವಾದ ಭಾಗವಾಗಿದ್ದಾನೆ ಮತ್ತು ಆತನ ಬೇರುಗಳು ಯೇಸು ಕ್ರಿಸ್ತನಲ್ಲಿ ಆಳವಾಗಿವೆ.



ನಮ್ಮ ಸುತ್ತಮುತ್ತಲಿನಲ್ಲಿರುವ ಜನರು ಯೇಸು ಕ್ರಿಸ್ತನು ಮಹಾನ್ ವ್ಯಕ್ತಿ ಅಥವಾ ಪ್ರವಾದಿ ಎಂಬದಾಗಿ ಮಾತನಾಡಿಕೊಳ್ಳುವದನ್ನು ನಾವು ಕೇಳಿಸಿಕೊಂಡಿರಬಹುದು. ನಾವು ವಿವಿಧ ಬಣ್ಣಗಳು ಮತ್ತು ಶೈಲಿಗಳಲ್ಲಿ ಚಿತ್ರಿಸಲಾಗಿರುವ ಅಥವಾ ಮುದ್ರಿಸಲಾಗಿರುವ ಆತನ ಭಾವಚಿತ್ರಗಳನ್ನು ಅಂಗಡಿಗಳಲ್ಲಿ ನೋಡುತ್ತೇವೆ. ನಮ್ಮ ಸೌವಾರ್ತಿಕ ಸಭೆಗಳಲ್ಲಿ, ಸಭೆಗೆ ಬರುವಾಗ ಯೇಸು ಕ್ರಿಸ್ತನ ಬಗ್ಗೆ ಹಾಡಿ ಕೊಂಡಾಡುತ್ತೇವೆ ಮತ್ತು ಸಹಜವಾಗಿ ನಮ್ಮ ಪ್ರಾರ್ಥನಾ ಮನವಿಗಳನ್ನು ಆತನಿಗೆ ಒಪ್ಪಿಸುತ್ತೇವೆ. ಆದರೆ ಸತ್ಯವೇದವು ಯೇಸು ಕ್ರಿಸ್ತನ ಬಗ್ಗೆ ಏನು ಹೇಳುತ್ತದೆ? ಆತನು ನಿಜವಾಗಿಯೂ ಯಾರು? ಯೇಸು ಕ್ರಿಸ್ತನ ವಿಷಯದಲ್ಲಿ ನಿಮಗಿರುವ ನಂಬಿಕೆ ಏನು?

ಸತ್ಯವೇದವು ಹೇಳುವದೇನೆಂದರೆ . . .

- ದೇವಕುಮಾರನಾಗಿರುವ ಯೇಸು ಕ್ರಿಸ್ತನು ಮಾನವನಾಗಿ ಜೀವಿಸಲು ಈ ಲೋಕಕ್ಕೆ ಬಂದನು.
- ಯೇಸು ಕ್ರಿಸ್ತನು ಪಾಪ ಮಾಡದೆ ಸಂಪೂರ್ಣನಾಗಿ ಜೀವಿಸಿದನು ಮತ್ತು ನಮ್ಮ ಪಾಪಗಳ ಪರಿಹಾರಕ್ಕಾಗಿ ಪ್ರಾಣ ಕೊಟ್ಟನು.
- ಯೇಸು ಕ್ರಿಸ್ತನು ಪುನರುತ್ಥಾನಗೊಂಡನು ಮತ್ತು ಪರಲೋಕದಲ್ಲಿ ಜೀವಿಸುತ್ತಿದ್ದಾನೆ.
- ನೀವು ನನ್ನನ್ನು ನಂಬಿರಿ ಎಂದು ಯೇಸು ಕ್ರಿಸ್ತನು ನಮಗೆ ಹೇಳಿದ್ದಾನೆ.
- ಯೇಸು ಕ್ರಿಸ್ತನು ನಮಗೆ ನಿತ್ಯಜೀವ ಕೊಡುತ್ತಾನೆ.
- ಯೇಸು ಕ್ರಿಸ್ತನು ಯೋಹಾನ ಸುವಾರ್ತೆ ೧೫ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿರುವ ಬಳ್ಳಿಯಾಗಿದ್ದಾನೆ.

ಇಂದಿನ ವಾಕ್ಯವು ಇದನ್ನು ಸ್ಪಷ್ಟವಾಗಿ ವಿವರಿಸುತ್ತದೆ:

"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." ಯೋಹಾನ ೩:೧೬

**(ಉಪಾಯ)**

ಗೋಡೆಯ ಮೇಲಿರುವ ಈ ಎಲ್ಲಾ ಗುರಿಗಳನ್ನು ಮತ್ತೊಮ್ಮೆ ನೋಡಿಕೊಳ್ಳೋಣ. ನಾನು ಅಧ್ಯಾಪಕರಿಗೆ ಮುಂದೆ ಬರುವಂತೆ ಹೇಳುತ್ತೇನೆ ಮತ್ತು ಗುರಿಗಳ ಮಧ್ಯಕ್ಕೆ ಹೊಡೆಯಲು ಪ್ರಯತ್ನಿಸುವಂತೆ ಸೂಚಿಸುತ್ತೇನೆ. (ತಮ್ಮ ಅಧ್ಯಾಪಕರು ಗುರಿಯಿಟ್ಟು ಹೊಡೆಯಲು ಮುಂದೆ ಬರುವಾಗ ಚಪ್ಪಾಳೆ ತಟ್ಟುವಂತೆ ಮತ್ತು ಯಾರು ಗುರಿಯಿಟ್ಟು ಮಧ್ಯಕ್ಕೆ ಹೊಡೆದರು ಎಂಬದನ್ನು ಬರೆದಿಟ್ಟುಕೊಳ್ಳುವಂತೆ ಮಕ್ಕಳನ್ನು ಪ್ರೋತ್ಸಾಹಪಡಿಸಿರಿ. ಅಧ್ಯಾಪಕರೆಲ್ಲರೂ ತಮ್ಮ ಸರದಿಯನ್ನು ಮುಗಿಸಿದ ನಂತರ, ಮರೆ ಮಾಡಿರುವ ಹೆಸರುಗಳನ್ನು ಪ್ರಕಟಪಡಿಸಿರಿ.) ಆದರೆ ಅವರು ಯಾವುದಕ್ಕೆ ಗುರಿಯಿಟ್ಟಿದ್ದರು? ಕೆಲವು ಅಧ್ಯಾಪಕರು ಉತ್ತಮವಾಗಿ ಗುರಿ ಇಟ್ಟಿರುತ್ತಾರೆ, ಸರಿಯಾಗಿ ಮಧ್ಯಕ್ಕೆ ಹೊಡೆದಿರುತ್ತಾರೆ ಆದರೆ ಅವರು ತಪ್ಪಾದವುಗಳಿಗೆ ಗುರಿ ಇಟ್ಟಿರಬಹುದು. ಒಂದುವೇಳೆ ನಾವು ತಪ್ಪಾದವುಗಳಿಗೆ

ಗುರಿಯಿಟ್ಟು ಹೊಡೆದರೂ ಅದರಿಂದ ಯಾವುದೇ ಪ್ರಯೋಜನವಾಗುವದಿಲ್ಲ! ನಾವು ತಪ್ಪಾದವುಗಳಿಗೆ ಗುರಿಯಿಡುತ್ತಿದ್ದೇವೆ ಎಂಬದು ಗೊತ್ತಿಲ್ಲದಿರುವಾಗ, ಪ್ರಖ್ಯಾತಿಗೆ ಗುರಿಯಿಟ್ಟು ಹೊಡೆಯುವದು ಸುಲಭವಾಗಿರುತ್ತದೆ!! ಯೇಸು ಕ್ರಿಸ್ತನೇ ನಮ್ಮ ಗುರಿಯಾಗಿದ್ದಾನೆ. ನಾವು ಆತನಿಗೆ ಸಮರ್ಪಣೆಯುಳ್ಳ ಜೀವನವನ್ನು ಜೀವಿಸಬೇಕು ಆದ್ದರಿಂದ ನಮಗೆ ನೀರು ಹಾಗೂ ಆಹಾರ ಕೊಡುವ ಬೇರುಗಳೊಂದಿಗೆ ನಾವು ಸಮರ್ಪಣೆಯುಳ್ಳವರಾಗಿರಬೇಕು. ನೀವಿಡುವ ಗುರಿ ಸರಿಯಾಗಿರಬೇಕಾದರೆ, ನಿಮ್ಮ ಗಮನ ಯೇಸು ಕ್ರಿಸ್ತನ ಮೇಲೆ ಮಾತ್ರವೇ ಇರಲಿ!

ಯೇಸು ಕ್ರಿಸ್ತನು ಹಿಂದಿನ ನೆನಪಲ್ಲ, ಆತನು ಇಂದಿಗೂ ಜೀವಿಸುವವನಾಗಿದ್ದಾನೆ. ಆತನು ಯಾವುದೋ ವಿಶೇಷವಾದ ವ್ಯಕ್ತಿ ಅಥವಾ ಪ್ರವಾದಿಯಲ್ಲ, ಬದಲಾಗಿ ಆತನು ದೇವರ ಮಗನಾಗಿದ್ದನು ಹಾಗೂ ದೇವರ ಮಗನಾಗಿದ್ದಾನೆ. ಪೇತ್ರನು ಆತನನ್ನು ನಂಬಿದಂತೆಯೇ, ನಾವು ಆತನನ್ನು ನಂಬಬೇಕೆಂದು ಯೇಸು ಕ್ರಿಸ್ತನು ಹೇಳುತ್ತಿದ್ದಾನೆ. ಇಂದು ನಾವು ನಂತರದಲ್ಲಿ ಪೇತ್ರನನ್ನು ಭೇಟಿಯಾಗೋಣ ಯಾಕಂದರೆ ಆತನೇ ನಮ್ಮ ಬಳಿಗೆ ಬರುವವನಾಗಿದ್ದಾನೆ!!! ಮತ್ತು ನಾವು ಪೇತ್ರನ ಹಾಗೆ ಯೇಸು ಕ್ರಿಸ್ತನನ್ನು ನಂಬುವ ಆಯ್ಕೆ ಮಾಡಿಕೊಳ್ಳೋಣ!

# ಸರದಿಯ ಠಾಣೆಗಳು ೧

## ಸಿಲೋ ತರಗತಿ ೧

### ಪ್ರಶ್ನೆಗಳು ಮತ್ತು ಉತ್ತರಗಳು




೧. ದೇವರಲ್ಲಿ ನಂಬಿಕೆಯಿಡುವದರಿಂದ ನಿಮಗೆ ದೊರೆಯುವ ಯಾವುದಾದರು ಪ್ರಯೋಜನಗಳನ್ನು ನಿಮ್ಮ ಸಹಪಾಠಿಗಳೊಂದಿಗೆ ಹಂಚಿಕೊಳ್ಳಿರಿ.
ಇದು ಕೇವಲ ಸತ್ಯವೇದದ ಕಥೆಗಳನ್ನು ತಿಳಿದುಕೊಳ್ಳುವದು ಮಾತ್ರವಲ್ಲ ಬದಲಾಗಿ ಸತ್ಯವೇದದಲ್ಲಿರುವ ಕರ್ತನನ್ನು ತಿಳಿದುಕೊಳ್ಳುವದು, ಯೇಸು ಕ್ರಿಸ್ತನು ಜೀವಂತವಾಗಿದ್ದಾನೆಂಬದನ್ನು ಭರವಸೆಯಿಡಲು ತಿಳಿದುಕೊಳ್ಳುವದಾಗಿದೆಯೇ ಹೊರತು ಹಿಂದಿನ ಜ್ಞಾಪಕವಲ್ಲ. ನಮಗೆ ನಂಬಿಕೆಯಿದೆಯೆಂದು ನಾವು ಹೇಳುತ್ತೇವೆ ಆದರೆ ದೇವರು ನಮ್ಮೊಂದಿಗೆ ಮಾತನಾಡುವ ಸಮಯ ಅಥವಾ ರೀತಿ ನಮಗೆ ಗೊತ್ತಿರುವದಿಲ್ಲ, ನಿತ್ಯಜೀವ ನಮಗೆ ಸಿಗುವ ದೊಡ್ಡ ಲಾಭವಾಗಿದೆ.

೨. ಯೇಸು ಕ್ರಿಸ್ತನ ಬಗ್ಗೆ ನೀವು ನಂಬುವ ವಿಷಯಗಳು ಎಲ್ಲಿಂದ ಬಂದಿವೆ? ಬೋಧಕನು ಅಥವಾ ಉಪದೇಶ ಹೇಳುವ ಮಾತುಗಳ ಸಂಪ್ರದಾಯದಿಂದ ಬಂದಿದೆಯೇ ಅಥವಾ ದೇವರೊಂದಿಗೆ ನಿಮಗಿರುವ ವೈಯಕ್ತಿಕ ಅನುಭವದಿಂದ ಬಂದಿದೆಯೇ?
ದುಃಖಕರವಾದ ಸಂಗತಿ ಏನೆಂದರೆ, ನಮ್ಮ ಸಭೆಗಳಲ್ಲಿರುವ ಬಹುತೇಕ ವಿದ್ಯಾರ್ಥಿಗಳು ನಾವು ದೇವರನ್ನು ನಂಬುತ್ತೇವೆ ಎಂದು ಹೇಳುತ್ತಾರೆ, ಆದರೆ ಯೇಸು ಕ್ರಿಸ್ತನೊಂದಿಗೆ ತಮಗಿರುವ ವೈಯಕ್ತಿಕವಾದ ಸಂಬಂಧದ ಆಧಾರದ ಮೇರೆಗೆ ಇದನ್ನು ಹೇಳುವದಿಲ್ಲ. ಅನೇಕ ಸಂದರ್ಭಗಳಲ್ಲಿ, ಸಭೆಯೊಳಗೆ ಕ್ರೈಸ್ತನಾಗಿರುವದು, ಸಮಾನ ಮನಸ್ಥಿತಿ (ಸಂಪ್ರದಾಯ) ಇರುವ ಜನರು ಸುತ್ತಲೂ ಇರುವಾಗ ಆತ್ಮೀಕರಾಗಿರುವದು ಸುಲಭವಾಗಿರುತ್ತದೆ. ಆದರೆ ನಾವು ರಸ್ತೆಯಲ್ಲಿ, ಕೆಲಸದ ಸ್ಥಳದಲ್ಲಿ ಅಥವಾ ಶಾಲೆ ಮತ್ತು ಹೋಗುವ ಸ್ಥಳಗಳಲ್ಲಿ ಹೇಗೆ ನಡೆದುಕೊಳ್ಳುತ್ತೇವೆ


ಎಂಬದು ಬಹಳ ಪ್ರಾಮುಖ್ಯವಾಗಿರುತ್ತದೆ. ಇಂಥ ಸ್ಥಳಗಳಲ್ಲಿಯೇ ದೇವರು ನಮ್ಮ ಜೀವಿತಗಳಿಗೆ ಮಹತ್ತರವಾದ ಪಾಠಗಳನ್ನು ಕಲಿಸುತ್ತಾನೆ. ಹೀಗೆ ನಾವು ನಿಜವಾಗಿಯೂ ಯೇಸು ಕ್ರಿಸ್ತನು ಯಾರಾಗಿದ್ದಾನೆ ಎಂಬದನ್ನು ಮಾತುಗಳ ಮೂಲಕವಾಗಿಯಲ್ಲ ಬದಲಾಗಿ ಕ್ರಿಯೆಗಳ ಮೂಲಕ ಕಲಿತುಕೊಳ್ಳುತ್ತೇವೆ.

೩. ವೈಯಕ್ತಿಕವಾಗಿ ಯೇಸು ಕ್ರಿಸ್ತನ ಬಗ್ಗೆ ನಿಮಗಿರುವ ನಂಬಿಕೆ ಏನು?
ಅತ್ಯಂತ ಪ್ರಾಮುಖ್ಯವಾಗಿರುವ ಸಂಗತಿ ಏನೆಂದರೆ ಆತನೇ ನಿಮ್ಮ ರಕ್ಷಕನು, ವೈಯಕ್ತಿಕ ಹಂತದಲ್ಲಿ ಆತನ ಕುರಿತಾದ ತಿಳುವಳಿಕೆ ನಿಮಗಿದೆ ಮತ್ತು ನಿಮಗೆ ಹೊಂದಿಕೆಯಾಗುವ ಧರ್ಮವನ್ನು ನೀವು ಹುಡುಕಿಕೊಂಡಿಲ್ಲ ಎಂಬ ನಿಮ್ಮ ನಂಬಿಕೆಯಾಗಿದೆ.

| | | | | | | | | | |
|---|---|---|---|---|---|---|---|---|---|
| ಫು | ಡ | ವಿ | ಡ | ಯೇ | ಹುಂ | ಶ | ಮ್ಯ | ನ | ಕೆ |
| ಟಿ | ಲ | ಕು | ದು | ರೆ | ಜ | ಕ | ಡಿ | ಬಿ | ಹ್ |
| ಠ | ಪೇ | ಹ | ಮಾ | ಗ | ಧ | ನೀ | ನಂ | ೧ | ಜ |
| ಲ | ತ್ರ | ಗ | ನು | ರ | ನಾ | ಕಂ | ದೇ | ಶ್ | ದ |
| ವ್ | ಫು | ಸ್ತ | ಫು | ಧ | ನು | ಪೇ | ವ | ಝು | ಳ |
| ಸ | ಕ್ರಿ | ಡ | ಟಿ | ಹುಂ | ಕ್ಷ | ಯಾ | ರು | ಸ್ತ | ಸ |
| ಹ | ಝು | ಬ | ಳ್ಳಿ | ಕ್ | ಯೇ | ಗ | ನ | ಹೊ | ಧ |
| ನ್ | ಫ | ಯ | ಕೆ | ಮ್ | ಸು | ನ್ಯ | ನಿ | ಕ | ಲ |
| ನಂ | ಜ | ರೆ | ಖ್ | ಷ್ | ಕೈ | ಲ | ಢ | ರ | ಝು |







# ಪೇತ್ರನೊಂದಿಗೆ ವನಭೋಜನ ೧

## ತಿಂಡಿಗಳ ಮೂಲಕ ಮಾಡಲಾಗಿರುವ ಶಿಲುಬೆ



ಸಾಮಗ್ರಿಗಳು:

- ಪ್ರತಿಯೊಬ್ಬ ವಿದ್ಯಾರ್ಥಿಗೆ ಎರಡು ಸಣ್ಣ ಕಟ್ಟಿಗೆಗಳು (ಚಾಪ್ ಸ್ಟಿಕ್ಸ್), ಒಂದು ಇನ್ನೊಂದಕ್ಕಿಂತ ಉದ್ದವಿರಬೇಕು ಮತ್ತು ಒಂದು ತಟ್ಟೆ.
- ದ್ರಾಕ್ಷೇ ಹಣ್ಣು, ಚಿಕ್ಕ ಕಾಯಿ, ಕುರಚಲು ಸಸ್ಯದಿಂದ ಮಾಡಿದ ಮಿಠಾಯಿ ಅಥವಾ ಗುಂಡಾಕಾರದಲ್ಲಿರುವ ಆಲೂಗಡ್ಡೆ ಚಿಪ್ಸ್.

ಸೂಚನೆಗಳು:

- ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ದೊಡ್ಡ ಕಟ್ಟಿಗೆ ಹಾಗೂ ಚಿಕ್ಕ ಕಟ್ಟಿಗೆಯನ್ನು ಕೊಡಿರಿ.
- ದೊಡ್ಡ ಕಟ್ಟಿಗೆ ಮತ್ತು ಚಿಕ್ಕ ಕಟ್ಟಿಗೆಯೊಳಗೆ ತಿಂಡಿಯನ್ನು ಪೋಣಿಸುವ ಮೂಲಕ ಶಿಲುಬೆ ಮಾಡುವದು ಹೇಗೆ ಎಂಬದನ್ನು ಅವರಿಗೆ ಕಲಿಸಿರಿ.
- ಮತ್ತೊಂದು ಆಯ್ಕೆ: ತಟ್ಟೆಯ ಮೇಲೆ ಶಿಲುಬೆಯ ಆಕಾರವನ್ನು ರೂಪಿಸುವದು ಹೇಗೆ ಎಂಬದನ್ನು ಅವರಿಗೆ ತೋರಿಸಿರಿ.
- ಎಲ್ಲರೂ ತಿನ್ನೋಣ!

## ಪೇತ್ರನೊಂದಿಗೆ ನಾಟಕ

ಪೇತ್ರನು ಯೇಸು ಕ್ರಿಸ್ತನನ್ನು ಗುರುತಿಸಿದನು

ಮತ್ತಾಯ ೧೬:೧೩-೨೦




ದೃಶ್ಯ: ಪೇತ್ರನು ತನ್ನನ್ನು ಕಂಪ್ಯೂಟರ್ ತಜ್ಞನಾಗಿದ್ದು ವೆಬ್ ಪೇಜ್ ಗಳಲ್ಲಿ ಪರಿಣಿತನೆಂದು ಪ್ರೇಕ್ಷಕರಿಗೆ ಪರಿಚಯಪಡಿಸಿಕೊಳ್ಳುತ್ತಾನೆ ಮತ್ತು ತನ್ನ ಸಂಗಡಿಗರೊಂದಿಗೆ ಈಗ ತಾನೇ ಮಾಲ್ ನಿಂದ ಹಿಂದಿರುಗಿರುವದಾಗಿ ಹೇಳುತ್ತಾನೆ. ಆತನ ಸ್ನೇಹಿತರು ಕ್ರೀಡಾಂಗಣದೊಳಗೆ ನಡೆಯುವ ದೊಡ್ಡ ಸಭೆಯ ಸಮ್ಮೆಳನದ ಪ್ರಾರಂಭದಲ್ಲಿ ಬರುತ್ತಾರೆ ಮತ್ತು (ಪ್ರಸಿದ್ಧ ಸೌವಾರ್ತಿಕನಾದ) ಯೇಸು ಕ್ರಿಸ್ತನು ಮುಖ್ಯ ಸಂದೇಶಕನಾಗಿದ್ದಾನೆ. ಸಮ್ಮೇಳನವು ಮುಗಿದ ನಂತರ ಪೇತ್ರನು ಯೇಸು ಕ್ರಿಸ್ತನನ್ನು ತನ್ನ ಸಭಾಪಾಲಕ ಹಾಗೂ ಸ್ನೇಹಿತರೊಂದಿಗೆ ಭೋಜನಾಲಯಕ್ಕೆ ಆಹ್ವಾನಿಸುತ್ತಾನೆ.

- ಊಟ ಬರುವ ಮೊದಲು, ಯೇಸು ಕ್ರಿಸ್ತನು ಪೇತ್ರನಿಗೆ ಹೇಳುವದೇನೆಂದರೆ, “ನಾನು ನಿನಗೊಂದು ಪ್ರಶ್ನೆ ಕೇಳಬೇಕೆಂದಿದ್ದೇನೆ. ನಿನ್ನ ಸ್ನೇಹಿತರು ನನ್ನನ್ನು ಯಾರನ್ನುತ್ತಾರೆ?”
- ಪೇತ್ರನು ಆಧುನಿಕ ರೀತಿಯಲ್ಲಿ ಉತ್ತರಿಸುತ್ತಾ ಹೇಳುವದೇನೆಂದರೆ, ಕೆಲವರು ನಿನ್ನನ್ನು ಹೊಸ ಭಕ್ತ್ ಸಿಂಗ್ ಅನ್ನುತ್ತಾರೆ, ಉಳಿದವರು ನೀನೇ ನಮ್ಮ ದೇಶದ ಮುಂದಿನ ಪ್ರಧಾನಿ ಅಂದುಕೊಂಡಿದ್ದಾರೆ, ಇನ್ನು ಕೆಲವರು ನೀನೇ ಮುಂದಿನ ಸ್ಟೀಫನ್ ಟಾಂಗ್, ಆಯೊ ಆರಿಟ್ಜೇಸಫರ್, ಕಾಂಗ್ ಹೀ, ಮ್ಯಾಥೀವ್ ಆಶಿಮೊಲೊವೊ,

ಡೇವಿಡ್ ಯಾಂಗಿಚ್ಚೋ, ಚಾರ್ಲ್ಸ ಸ್ಟ್ಯಾನ್ಲಿ ಇತ್ಯಾದಿ ಅಂದುಕೊಂಡಿದ್ದಾರೆ. (ನೀವು ನಿಮ್ಮ ದೇಶದ ಪ್ರಮುಖ ಬೋಧಕನ ಹೆಸರನ್ನು ಬೇಕಾದರೆ ಇಲ್ಲಿ ಬಳಸುವ ಮೂಲಕ ಈ ನಾಟಕಕ್ಕೆ ಆಧುನಿಕ ಸ್ಪರ್ಶ ನೀಡಬಹುದು).

- ನಂತರ ಯೇಸು ಕ್ರಿಸ್ತನು ಪೇತ್ರನಿಗೆ ನೇರವಾಗಿ, “ನೀನು ನನ್ನನ್ನು ಯಾರೆಂದು ಕೊಂಡಿರುವೆ?” ಎಂದು ಕೇಳಿದನು?
- ಪೇತ್ರನು ತರನ್ನ ಸೆಲ್ ಫೋನ್ ಹೊರಗೆ ತೆಗೆದು ಯೇಸು ಕ್ರಿಸ್ತನು ಯಾರೆಂದು ತಿಳಿಸುವಂತೆ ತನ್ನ ಸ್ನೇಹಿತರಿಗೆ ಮೆಸೇಜ್ ಮಾಡುತ್ತಾನೆ? ಯಾಕಂದರೆ ಅವನಿಗೆ ನೇರವಾದ ಉತ್ತರ ಬೇಕಾಗಿದೆ.
- ಕೂಡಲೇ ಪೇತ್ರನ ಹೃದಯ ಮತ್ತು ಆತ್ಮದೊಳಗೆ ದೇವರ ಪ್ರೇರಣೆ ಉಂಟಾಗಿ, “ನೀನು ಬರಬೇಕಾಗಿರುವ ಕ್ರಿಸ್ತನು, ಜೀವಿಸುವ ದೇವರ ಕುಮಾರನು” ಎಂದು ಉತ್ತರಿಸುತ್ತಾನೆ!
- ಪೇತ್ರನು ಈ ಉತ್ತರವನ್ನು ನೇರವಾಗಿ ದೇವರಿಂದ ಪಡೆದುಕೊಂಡನೇ ಹೊರತು ಅವನ ಸ್ನೇಹಿತರು ಅವನಿಗೆ ಮೆಸೇಜ್ ಮಾಡಲಿಲ್ಲ ಎಂದು ಯೇಸು ಕ್ರಿಸ್ತನು ಹೇಳಿದನು.
- ಯೇಸು ಕ್ರಿಸ್ತನು ಮತ್ತು ಪೇತ್ರನು ತಾವು ಬಯಸಿದ (ನಿಮ್ಮ ಕ್ಷೇತ್ರದಲ್ಲಿ ದೊರೆಯುವ ನಿರ್ದಿಷ್ಟ ಆಹಾರ) _______ ಆಹಾರವನ್ನು ತಿಂದು ಹೊರಟು ಹೋದರು. ಯೇಸು ಕ್ರಿಸ್ತನು ಪೇತ್ರನಿಗೆ ನಾನು ಯಾರು ಎಂಬ ವಿಷಯದಲ್ಲಿ ನಿನ್ನ ಸ್ನೇಹಿತರಿಗೆ ವಾಟ್ಸಪ್ ಮೆಸೇಜ್ ಆಗಲಿ ಅಥವಾ ಈ ಮೇಲ್ ಆಗಲಿ ಕಳುಹಿಸಬಾರದು ಎಂದು ಹೇಳಿದನು.

  ಪೇತ್ರ ಮತ್ತು ಯೇಸು ಕ್ರಿಸ್ತನು ಒಟ್ಟಾಗಿ ಮಾತನಾಡುತ್ತಾ ಮುಂದೆ ಸಾಗುವದರೊಂದಿಗೆ ದೃಶ್ಯವನ್ನು ಮುಗಿಸಿರಿ.

## ಕಣಜದ ಕರಕುಶಲತೆಗಳು ೧

### ಕುದುರೆ ಕೈಗೊಂಬೆ



೧. ಕುದುರೆಯ ರೂಪದಲ್ಲಿ ಹಾಳೆಯನ್ನು ಕತ್ತರಿಸಿರಿ.

೨. ವೃತ್ತಗಳ ಭಾಗಗಳನ್ನು ಕತ್ತರಿಸಿ ತೆಗೆಯಿರಿ.

೩. ನಿಮ್ಮ ಇಷ್ಟದ ಬಣ್ಣ ಹಚ್ಚಿರಿ.

೪. ಚಲಿಸುವ ಕಣ್ಣಿಗೆ ಗೋಂದು ಹಚ್ಚಿರಿ ಮತ್ತು ಮಾರ್ಕರ್ ಪೆನ್ ನಿಂದ ಕುದುರೆಗೆ ಬಾಯಿ ಬರೆಯಿರಿ.

೫. ಮೂರು ಸೆಂಟಿ ಮೀಟರ್ ನ ಆರು ಮತ್ತು ೧೦ ಸೆಂಟಿ ಮೀಟರ್ ನ ೪ ನೂಲುಗಳನ್ನು ತುಂಡು ಮಾಡಿರಿ.

೬. ೩ ಸೆಂಟಿ ಮೀಟರ್ ನೂಲನ್ನು ಕುದುರೆಯ ಹಿಂಭಾಗದ ಕುತ್ತಿಗೆಗೆ ಅಂಟಿಸಿರಿ.

೭. ಕುದುರೆಯ ಬಾಲಕ್ಕೆ ೧೦ ಸೆಂಟಿ ಮೀಟರ್ ನೂಲನ್ನು ಉಪಯೋಗಿಸಿರಿ, ಒಂದು ಸಣ್ಣ ರಂಧ್ರವನ್ನು ಮಾಡಿ ಅದಕ್ಕೆ ಗಂಟು ಹಾಕಿರಿ.

### ಚಲನೆಯೊಂದಿಗೆ ಕೈ ಕುಲುಕುವದು




ದಿನ ಒಂದು: ಮೂಲಭೂತವಾದದ್ದು

ಸಹಜವಾದ ಅಭಿನಂದನೆ

ಹೆಬ್ಬೆರಳಿನ ಸರದಿ

ನಿಮ್ಮ ಕೈಗಳನ್ನು ಬಾಗಿಸಿರಿ

ನಿಮ್ಮ ತೋಳನ್ನು ಹಿಂದಕ್ಕೆ ತೆಗೆದುಕೊಳ್ಳುವಾಗ ಬೆರಳುಗಳನ್ನು ಆಡಿಸಿರಿ

## ದ್ರಾಕ್ಷೆತೋಟದ ಆಟಗಳು ೧

### ಪೊರಕೆ ಹಾಕಿ




ಈ ಆಟಕ್ಕೆ ಎರಡು ಪೊರಕೆಗಳು ಮತ್ತು ಒಂದು ಚೆಂಡು ಬೇಕು. ಎರಡು ಗೋಲ್ ಪೋಸ್ಟ್ ಗಳನ್ನು ಸಹ ಗುರುತಿಸಬೇಕು. ಎರಡು ತಂಡಗಳನ್ನು ಆಯ್ಕೆ ಮಾಡಿರಿ ಮತ್ತು ಅವರನ್ನು ಒಬ್ಬರ ಹಿಂದೆ ಒಬ್ಬರಂತೆ ಸಾಲಾಗಿ ನಿಲ್ಲಿಸಿರಿ ಹಾಗೂ ಪ್ರತಿಯೊಬ್ಬರಿಗೆ ಒಂದು ಸಂಖ್ಯೆಯನ್ನು ನಿಗದಿಪಡಿಸಿರಿ. ಎರಡೂ ತಂಡಗಳಲ್ಲಿ ಆಟಗಾರರ ಸಂಖ್ಯೆ



ಸಮಾನವಾಗಿರಬೇಕು. ಚೆಂಡು ಮತ್ತು ಪೊರಕೆಗಳನ್ನು ಕೋರ್ಟ್ ಮಧ್ಯದಲ್ಲಿಡಬೇಕು. ಅಧ್ಯಾಪಕರು ಒಂದು ಸಂಖ್ಯೆಯನ್ನು ಹೇಳುವರು, ಎರಡೂ ತಂಡದವರಲ್ಲಿ ಯಾವ ಇಬ್ಬರು ಮಕ್ಕಳಿಗೆ ಆ ಸಂಖ್ಯೆಯನ್ನು ಕೊಡಲಾಗಿರುತ್ತದೋ ಅವರು ಮುಂದೆ ಓಡಿ ಬಂದು ಪೊರಕೆ ಹಿಡಿದುಕೊಳ್ಳಬೇಕು ಹಾಗೂ ವಿರುದ್ಧ ದಿಕ್ಕಿನಲ್ಲಿರುವ ಗೋಲ್ ಪೋಸ್ಟ್ ನೊಳಗೆ ಚೆಂಡನ್ನು ಹಾಕಲು ಪ್ರಯತ್ನಿಸಬೇಕು. ಚೆಂಡನ್ನು ಕಾಲಿನಿಂದ ಒದೆಯಬಾರದು ಪೊರಕೆಯಿಂದ ಮಾತ್ರವೇ ತಳ್ಳಬೇಕು. ಗೋಲ್ ಹೊಡೆದ ನಂತರ, ಅವರು ಪೊರಕೆಗಳು ಮತ್ತು ಚೆಂಡನ್ನು ಪುನಃ ಮಧ್ಯದಲ್ಲಿಡಬೇಕು. ಹೆಚ್ಚು ಗೋಲ್ ಗಳಿಸುವ ತಂಡ ಪಂದ್ಯವನ್ನು ಗೆದ್ದುಕೊಳ್ಳುತ್ತದೆ.

## ಸಂಗೀತ ಮತ್ತು ಕೈಗೊಂಬೆಯಾಟದ ಮೂಲಕ ಮುಕ್ತಾಯಗೊಳಿಸುವದು ೧

ಹುಂಜ: ಹಲೋ ಕುದುರೆ!

ಕುದುರೆ: ನಾನು ನಂಬಬೇಕು; ನಾನು ನಂಬಬೇಕು (ಅದು ನಿಲ್ಲದೆ ಅತ್ಯಂತ ವೇಗವಾಗಿ ವೇದಿಕೆಯ ಬಳಿಗೆ ಹೋಗುತ್ತದೆ)

ಹುಂಜ: ಹಾಯ್ ಕುದುರೆ! ಈಗಾಗಲೇ ನಾವು ವಿಬಿಎಸ್ (ರಜಾ ದಿನಗಳ ಸತ್ಯವೇದ ಶಾಲೆ) ಗೆ ಬಂದಿರುವ ಹುಡುಗರು ಹಾಗೂ ಹುಡುಗಿಯರೊಂದಿಗಿದ್ದೇವೆ. ಹಲೋ ಎಲ್ಲರಿಗೂ ಸ್ವಾಗತ (ಹಲೋ ಹೇಳಲು ಮಕ್ಕಳ ಕಡೆಗೆ ತಿರುಗಿಕೊಳ್ಳಬೇಕು).

ಕುದುರೆ: ಓಹ್! ಹೋ! ಹಲೋ ಹುಂಜ, ಹಲೋ ಎಲ್ಲರಿಗೂ, ದಯವಿಟ್ಟು ಕ್ಷಮಿಸಿ ನಾನು ಸ್ವಲ್ಪ ಅವರಸದಲ್ಲಿದ್ದೇನೆ. (ವೇದಿಕೆಯಿಂದ ಹೋಗತ್ತದೆ, ಆದರೆ ತಲೆಯ ಹೆಂಚನ್ನು ಹೊತ್ತುಕೊಂಡು ಪುನಃ ಬರುತ್ತದೆ).

ಹುಂಜ: ಹೇ! ತಲೆಯ ಮೇಲೆ ಹೆಂಚನ್ನು ಹೊತ್ತುಕೊಂಡು ಎಲ್ಲಿಗೆ ಹೋಗುತ್ತಿರುವೆ?

ಕುದುರೆ: ಯೇಸು ಕ್ರಿಸ್ತನು ದೇವಕುಮಾರನಾಗಿದ್ದಾನೆಂದು ನನ್ನ ಮನಸ್ಸು ನಿಜವಾಗಿಯೂ ನಂಬುತ್ತದೆಯೋ ಇಲ್ಲವೋ ಎಂಬದನ್ನು ತಿಳಿದುಕೊಳ್ಳಲು ಒಂದು ಯಂತ್ರವನ್ನು ಸೃಷ್ಟಿಸಲು ಹೋಗುತ್ತಿದ್ದೇನೆ.

ಹುಂಜ: ಆದರೆ ಯಾಕೆ?

ಕುದುರೆ: ದೇವರು ನಮ್ಮನ್ನು ಬಹಳವಾಗಿ ಪ್ರೀತಿಸಿದ್ದರಿಂದ ತನ್ನ ಒಬ್ಬನೇ ಮಗನನ್ನು ಕೊಟ್ಟನು, ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವ ಪಡೆಯಬೇಕೆಂದು ಕೊಟ್ಟನು (ಯೋಹಾನ ೩:೧೬) ಎಂಬದಾಗಿ ನಾನು ಸತ್ಯವೇದದಲ್ಲಿ ಓದಿದ್ದೇನೆ. . . ನನ್ನ ಮೆದುಳು ಇದನ್ನು ನಂಬುತ್ತದೆಯೇ ಎಂದು ನಾನು ದೃಢಪಡಿಸಿಕೊಳ್ಳಬೇಕಿದೆ, ನನಗೆ ಸಾಯಲು ಇಷ್ಟವಿಲ್ಲ.

ಹುಂಜ: ಅನೇಕ ಸಂಗತಿಗಳು ನಮಗೆ ಕಾಣಿಸುವದಿಲ್ಲವಾದರೂ, ನಾವು ಅವುಗಳನ್ನು ನಂಬುತ್ತೇವೆ. ನಾವು ಚಂದ್ರಗ್ರಹಕ್ಕೆ ಹೋಗಿಲ್ಲವಾದರೂ ಅದರಲ್ಲಿ ಬಂಡೆಗಳಿವೆ ಎಂದು ನಂಬುತ್ತೇವೆ. ದೇವರ ವಿಷಯದಲ್ಲಿಯೂ ಹೀಗೆಯೇ. ಆತನು ನಮ್ಮ ಕಣ್ಣುಗಳಿಗೆ ಕಾಣಿಸುವದಿಲ್ಲವಾದರೂ, ಆತನು ನಿಜವಾಗಿಯೂ ಇದ್ದಾನೆ ಮತ್ತು ನಮ್ಮನ್ನು ಪ್ರೀತಿಸುತ್ತಾನೆ ಎಂದು ನಾವು ನಂಬುತ್ತೇವೆ. ಇದನ್ನು ನಂಬುವದು ನಮ್ಮ ನಿಜವಾದ ರಕ್ಷಣೆಯ ಮೊದಲನೆಯ ಹಂತವಾಗಿದೆ. ನೀವು ನಂಬುತ್ತೀರೋ?

ಕುದುರೆ: ಖಂಡಿತವಾಗಿಯೂ, ಯೇಸು ಕ್ರಿಸ್ತನು ನನ್ನ ರಕ್ಷಕನೆಂದು ನಾನು ನಂಬುತ್ತೇನೆ, ಆದರೆ ಓಹೋ ಈಗ ನಾನು ಕೆಲವು ಪವರ್ ಕೇಬಲ್ ಗಳನ್ನು ಡಿಸ್ ಕನೆಕ್ಟ್ ಮಾಡಬೇಕಾಗಿದೆ.

ಹುಂಜ: ಪವರ್ ಕೇಬಲ್? ಯಾಕೆ?

ಕುದುರೆ: ನಾನು ಮೊದಲು ಸೂಪರ್ ಎಲೆಕ್ಟ್ರಿಕ್ ಶಾಕ್ ಪ್ರಯತ್ನಿಸಬೇಕು, ನಂತರ ಮೊಲದೊಂದಿಗೆ ಪ್ರಯತ್ನಿಸಬೇಕು. ಅಯ್ಯೋ!

# ಪಾಠ ೨

## ಹೆಸರು ೨

ನಾನು ಬದಲಾಗುವ ಆಯ್ಕೆ ಮಾಡಿಕೊಂಡಿದ್ದೇನೆ
ಪೇತ್ರನು ಯೇಸು ಕ್ರಿಸ್ತನನ್ನು ಅಲ್ಲಗಳೆದನು
ಮತ್ತಾಯ ೨೬:೬೯-೭೫

## ವಚನ ೨

“ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ.” ರೋಮಾ ೩:೨೩

## ಉಪಾಯ ೨




ಈ ಉಪಾಯದಲ್ಲಿ ನಿವು ದಿನಪತ್ರಿಕೆಯ ಎರಡು ದೊಡ್ಡ ಹಾಳೆಗಳನ್ನು, ಬಹುತೇಕ ಒಂದೇ ಪುಟವನ್ನು ತೆಗೆದುಕೊಳ್ಳಬೇಕು. ಇದನ್ನು ಸಾಧಿಸಲು, ಒಂದೇ ದಿನದಲ್ಲಿ ೨ ದಿನಪತ್ರಿಕೆಗಳನ್ನು ತೆಗೆದುಕೊಳ್ಳಿರಿ ಮತ್ತು ಎರಡ ದಿನಪತ್ರಿಕೆಗಳಿಂದ ಒಂದೇ ರೀತಿಯ ಹಾಳೆ ತೆಗೆದುಕೊಂಡು ಯಾವ ಪುಟ ನಿಮಗೆ ಇಷ್ಟವಾಗುತ್ತದೋ ಅದನ್ನು ಆಯ್ಕೆ ಮಾಡಿಕೊಳ್ಳಿರಿ. (ಮೊದಲು ನಿಮಗೆ ಇಷ್ಟವಿಲ್ಲದ ಹಾಳೆಯನ್ನು ತೆಗೆದುಕೊಂಡು ಪ್ರಯತ್ನಿಸಿರಿ ಮತ್ತು ಉಪಯೊಗಿಸಿದ ಬಿಸಾಡಿರಿ.) ನಂತರ ನೀವು ನಿಮ್ಮ ಉಪಾಯವನ್ನು ಸಿದ್ಧಪಡಿಸಬೇಕು. ನಿಮ್ಮ ದಿನಪತ್ರಿಕೆಗಳೊಂದರಲ್ಲಿ ರಹಸ್ಯವಾದ ಲಕೋಟೆಯನ್ನು ಸೃಷ್ಟಿಸಲು ದಿನಪತ್ರಿಕೆಯ ಬೇರೆ ಹಾಳೆಯ ಚಿತ್ರಣವನ್ನು ಉಪಯೋಗಿಸಿರಿ. ಲಕೋಟೆಯನ್ನು ಸೃಷ್ಟಿಸಲು ದಿನಪತ್ರಿಕೆಯ ಮೇಲೆ ಸ್ಪಷ್ಟವಾಗಿರುವ ಟೇಪ್ ಉಪಯೋಗಿಸಿರಿ, ಆಗ ಅದನ್ನು ನೋಡಲು ಮಕ್ಕಳಿಗೆ ಆಗುವದಿಲ್ಲ. ಈಗ ಅದೇ ರೀತಿಯಿರುವ ದಿನಪತ್ರಿಕೆಯ ಮತ್ತೊಂದು ಹಾಳೆಯನ್ನು ತೆಗೆದುಕೊಳ್ಳಿರಿ ಮತ್ತು ಅದು ಲಕೋಟೆಯೊಳಗೆ ಹೋಗಲು ಆಗುವ ಹಾಗೆ ಚಿಕ್ಕದಾಗಿ ಮಡಚಿರಿ. ಪಾಠದ ಸಮಯದಲ್ಲಿ, ನೀವು ಮಾತನಾಡುತ್ತಿರುವಾಗ, ಲಕೋಟೆ ಅಥವಾ ಒಳಗಿರುವ ಹಾಳೆ ಹರಿಯದ ಹಾಗೆ ದಿನಪತ್ರಿಕೆಯ ಮುಂದಿನ ಪುಟವನ್ನು ಎಚ್ಚರಿಕೆಯಿಂದ ಹರಿಯಬೇಕು. ನಂತರ ನೀವು ಎರಡನೆಯ ಹಾಳೆಯನ್ನು ತೆರೆಯಬೇಕು ಆದರೆ ಅದು ಸ್ವಲ್ಪವೂ ಹರಿಯದಿರುವದರಿಂದ ನೋಡುಗರಿಗೆ ಅದ್ಭುತದಂತಿರುತ್ತದೆ. ಇದು ಸಕಾರವಾಗಬೇಕಾದರೆ, ಅನೇಕಾವರ್ತಿ ಅಭ್ಯಾಸ ಮಾಡಬೇಕು.

## ಮುಖ್ಯ ಪಾಠ ೨

"ಹೊಲಕ್ಕೆ ಹೋಗೋಣ!!!" ವಿಬಿಎಸ್ ಗೆ ಮತ್ತೊಮ್ಮೆ ಸ್ವಾಗತ. "ದ್ರಾಕ್ಷೇಬಳ್ಳಿ ಯಾರು?" ಎಂಬ ಪ್ರಶ್ನೆಗೆ ಉತ್ತರ ಯೇಸು ಕ್ರಿಸ್ತನೇ ಎಂಬದು ಈಗಾಗಲೇ ನಿಮ್ಮಲ್ಲಿ ಅನೇಕರಿಗೆ ಗೊತ್ತಿದೆ.

ಈಗ ನಾವು ಈ ವಾಕ್ಯದ ಮುಂದಿನ ಭಾಗವನ್ನು ನೋಡಿಕೊಳ್ಳೋಣ . . . "ನಾನೇ ದಾಕ್ಷೇಬಳ್ಳಿ, ನೀವು ಕೊಂಬೆಗಳು." ಕೊಂಬೆಗಳು ಯಾವುವು? ಇವು ಬಳ್ಳಿಯಿಂದ ಬೆಳೆಯುವ ಅತ್ಯಂತ ದುರ್ಬಲ ಭಾಗಗಳಾಗಿದ್ದು, ಇವುಗಳಿಗೆ ಎಲೆಗಳು ಮತ್ತು ಹಣ್ಣುಗಳಿರುತ್ತವೆ. ಇವುಗಳಿಗೆ ಬೇರುಗಳು ಇರುವದಿಲ್ಲ. ಇವು ತಮಗೆ ಬೇಕಾದ ಎಲ್ಲಾ ಪೌಷ್ಟಿಕಾಂಶಗಳನ್ನು ಬಳ್ಳಿಯಿಂದಲೇ ಪಡೆದುಕೊಳ್ಳುತ್ತವೆ. ಈ ಕೊಂಬೆಗಳು ಯಾರು??? ನಾವು! ಈ ವಚನವು ೧೨ ಮಂದಿ ಶಿಷ್ಯರು ಅಥವಾ ಸತ್ಯವೇದ ಕಾಲದ ಇತರೆ ಜನರ ಬಗ್ಗೆ ಮಾತನಾಡುತ್ತಿಲ್ಲ . . . ಯೇಸು ಕ್ರಿಸ್ತನು ಮಾನವರಾಗಿರುವ, ನನ್ನ ಮತ್ತು ನಿಮ್ಮ ಬಗ್ಗೆ ಮಾತನಾಡುತ್ತಿದ್ದಾನೆ!



ಮಾನವರು ಯಾರು ಎಂಬದು ನಮಗೆ ಗೊತ್ತಿದೆ: ನಮ್ಮ ಸುತ್ತಮುತ್ತಲಿನಲ್ಲಿರುವ ಜನರು, ನಮ್ಮೊಂದಿಗೆ ಶಾಲೆಗೆ ಬರುವವರು, ಮೂಲೆಯಲ್ಲಿರುವ ಅಂಗಡಿಯಲ್ಲಿ ಕೊಂಡುಕೊಳ್ಳುವವರು, ಕಾರ್ಖಾನೆಗಳು, ಹೊಲಗಳು, ಕಛೇರಿಗಳಲ್ಲಿ ಕೆಲಸ ಮಾಡುವವರು ಮತ್ತು ನಮ್ಮ ಸುತ್ತಲಿನಲ್ಲಿರುವ ಅನೇಕ ನೆರೆಯವರು. ನಾವು ಭೂಲೋಕದ ಮೇಲಿರುವ ಮಾನವರಾಗಿದ್ದೇವೆ. ಕೆಲವರು ಕೆಟ್ಟವರಾಗಿರುತ್ತಾರೆ ಮತ್ತೂ ಕೆಲವರು ಒಳ್ಳೆಯವರಾಗಿರುತ್ತಾರೆ. ಕೆಟ್ಟವರು ಕಳ್ಳತನ ಮಾಡುತ್ತಾರೆ, ಮೋಸ ಮಾಡುತ್ತಾರೆ, ಆದರೆ ಒಳ್ಳೆಯವರು ತಮ್ಮ ಮನೆಯ ಕೆಲಸಗಳನ್ನು ಮಾಡುತ್ತಾರೆ, ಸಭೆಗೆ ಹೋಗುತ್ತಾರೆ ಮತ್ತು ಅವಶ್ಯವಾದರೆ ಕೆಟ್ಟವರನ್ನು ಶಿಕ್ಷಿಸುತ್ತಾರೆ. ಆದರೆ ಸತ್ಯವೇದವು ಮಾನವರ ಬಗ್ಗೆ ಏನು ಹೇಳುತ್ತದೆ?

ಇಂದಿನ ವಾಕ್ಯವು ಈ ವಿಷಯದಲ್ಲಿ ನಮಗೆ ಸಹಾಯ ಮಾಡುತ್ತದೆ: "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" ರೋಮಾ ೩:೨೩. ಇಲ್ಲಿ ನಾವು ಒಳ್ಳೆಯವರಲ್ಲ ಎಂಬದಾಗಿ ಹೇಳಿರುವದನ್ನು ನೋಡುತ್ತೇವೆ.

ಮಾನವರೆಲ್ಲರೂ ಪಾಪ ಮಾಡಿದ್ದಾರೆ ಎಂಬದನ್ನು ದೇವರು ದೃಢವಾಗಿ ಬಲ್ಲವನಾಗಿದ್ದಾನೆ. ನಾವು ತಪ್ಪು ಮಾಡಿದ್ದೇವೆ ಮತ್ತು ನಮ್ಮ ಜೀವಿತದ ಯಾವುದೋ ಹಂತದಲ್ಲಿ ಅಪರಾಧ ಮಾಡಿದ್ದೇವೆ. ನಮ್ಮ ಕೆಟ್ಟ ಸ್ವಭಾವದ ನಿಮಿತ್ತ, ನಮಗೆ ಶಿಕ್ಷೆ ಎದುರಾಗಬೇಕಾಗಿದೆ: ನಾವು ಮರಣಕ್ಕೆ ಅರ್ಹರಾಗಿದ್ದೇವೆ, ಸತ್ಯವೇದದ ವಾಕ್ಯವು ಇದನ್ನೇ ಹೇಳುತ್ತದೆ: "ಪಾಪವು ಕೊಡುವ ಸಂಬಳ ಮರಣ" (ರೋಮಾ ೬:೨೩).

ಆದರೆ ಚರಿತ್ರೆಯು ಇಲ್ಲಿಗೆ ಕೊನೆಗೊಳ್ಳುವದಿಲ್ಲ! ಪಶ್ಚಾತ್ತಾಪಪಡಿರಿ ಮತ್ತು ನಿಮ್ಮ ಪಾಪದ ಮಾರ್ಗಗಳನ್ನು ತ್ಯಜಿಸಿರಿ ಎಂದು ಯೇಸು ಕ್ರಿಸ್ತನು ನಮಗೆ ಹೇಳುತ್ತಿದ್ದಾನೆ. ನಾವು ಪಾಪ ಮಾಡದಿರುವ ತೀರ್ಮಾನ ತೆಗೆದುಕೊಂಡು ಆತನ ಕಡೆಗೆ ತಿರುಗಿಕೊಳ್ಳಬೇಕೆಂದು ಆತನು ಬಯಸುವವನಾಗಿದ್ದಾನೆ. ಕೊಂಬೆಯು ಬಳ್ಳಿಯೊಂದಿಗೆ ಹೊಂದಿಕೊಂಡಿರುವ ಹಾಗೆಯೇ ನಾವು ಆತನೊಂದಿಗೆ ಹೊಂದಿಕೊಳ್ಳಬೇಕೆಂದು ಆತನು ಬಯಸುವವನಾಗಿದ್ದಾನೆ.

**(ಉಪಾಯ)**

ಈ ದಿನಪತ್ರಿಕೆಯನ್ನು ನೋಡಿರಿ. ನಾವು ಒಳ್ಳೆಯವರಾಗಿರಲು ಪ್ರಯತ್ನಿಸುತ್ತೇವೆ ಆದರೆ ಅಂತಿಮವಾಗಿ ಪಾಪದಲ್ಲಿ ಸಿಕ್ಕಿಬಿಳುತ್ತೇವೆ. (ನೀವು ಮಾತನಾಡುವಾಗ ದಿನಪತ್ರಿಕೆಯನ್ನು ಹರಿಯಲು ಪ್ರಾರಂಭಿಸಿರಿ.) ಪ್ರತಿಯೊಂದು ಪಾಪವು

ನಮ್ಮನ್ನು ಎರಡಾಗಿ ಹರಿಯುತ್ತದೆ ಮತ್ತು ನಾವೆಲ್ಲರೂ ದಿನಪತ್ರಿಕೆಯ ಹಾಗೆ ಹರಿದು ಹೋಗುತ್ತೇವೆ. ಆದರೆ ಯೇಸು ಕ್ರಿಸ್ತನೇ ನಮ್ಮ ಬಳ್ಳಿ ಮತ್ತು ಆತನು ನಮ್ಮನ್ನು ಐಕ್ಯವಾಗಿರಿಸುತ್ತಾನೆ! (ಮತ್ತೊಂದು ದಿನಪತ್ರಿಕೆಯನ್ನು ತೆಗೆಯಿರಿ, ಅದು ಹರಿಯದಿರುವದನ್ನು ತೋರಿಸಿರಿ.)

ನಮಗೆ ಗೊತ್ತಿರುವ ಸಂಗತಿಗಳು ಯಾವುವೆಂದರೆ:

- ಎಲ್ಲಾ ಮನುಷ್ಯರು ತಮ್ಮ ಹೃದಯದಲ್ಲಿಯೇ ಕೆಟ್ಟವರಾಗಿದ್ದಾರೆ.
- ನಮ್ಮ ದುಷ್ಟವಾದ ಆಲೋಚನೆಗಳು, ಮಾತುಗಳು ಅಥವಾ ಕ್ರಿಯೆಗಳಿಗೆ ನಾವು ಶಿಕ್ಷೆ ಹೊಂದಲು ಅರ್ಹರಾಗಿದ್ದೇವೆ.
- ನಾವು ದೇವರ ಎದುರಿನಲ್ಲಿ ಪಶ್ಚಾತ್ತಾಪಪಡಬೇಕು ಮತ್ತು ಕೆಟ್ಟ ಕಾರ್ಯಗಳ ಮಾಡುವದನ್ನು ಬಿಟ್ಟುಬಿಡಬೇಕು.
- ನಮಗೆ ಯೇಸು ಕ್ರಿಸ್ತನು ಬೇಕು.
- ಯೋಹಾನ ಸುವಾರ್ತೆ ೧೫ನೇ ಅಧ್ಯಾಯದ ಕೊಂಬೆಗಳು ನಾವೇ.
- ನಾವೆಲ್ಲರೂ ದೊಡ್ಡ ತಪ್ಪುಗಳನ್ನು ಮಾಡುತ್ತೇವೆ ಎಂಬದನ್ನು ಇಂದು ಪೇತ್ರನೊಂದಿಗೆ ನೋಡಿಕೊಳ್ಳೋಣ ಆದರೂ ನಾವು ಪಾಪ ಮಾಡುವದನ್ನು ಬಿಟ್ಟುಬಿಡಬಹುದು, ಪಶ್ಚತ್ತಾಪಪಡಬಹುದು ಹಾಗೂ ಒಳ್ಳೆಯ ಕಾರ್ಯಗಳನ್ನು ಮಾಡುವವರಾಗಬಹುದು. ನಾವು ಬದಲಾಗುವ ಆಯ್ಕೆ ಮಾಡಿಕೊಳ್ಳಬಹುದು!

# ಸರದಿ ಠಾಣೆಗಳು ೨

## ಸಿಲೋ ತರಗತಿ ೨

### ಪ್ರಶ್ನೆಗಳು ಮತ್ತು ಉತ್ತರಗಳು




೧. ಪೇತ್ರನಿಗೆ ತಾನು ಯೇಸು ಕ್ರಿಸ್ತನ ಶಿಷ್ಯನೆಂದು ಒಪ್ಪಿಕೊಳ್ಳುವಂತೆ ಜನರಿಗೆ ಒತ್ತಡ ಎದುರಾಯಿತು. ಇಂದು ನಿಮಗೆ ಕ್ರೈಸ್ತರೆಂದು ಒಪ್ಪಿಕೊಳ್ಳುವಂತೆ ಯಾವ ಒತ್ತಡಗಳು ಎದುರಾಗುತ್ತಿವೆ?


ಕೆಲವೊಮ್ಮೆ ನಮಗೂ ಪೇತ್ರನಿಗಾದಂಥ ಅನುಭವವಾಗುತ್ತದೆ, ಯೇಸು ಕ್ರಿಸ್ತನ ನಿಜವಾದ ಶಿಷ್ಯರೆಂದು ತೋರ್ಪಡಿಸಿಕೊಳ್ಳುವಂತೆ ಒತ್ತಡ ಎದುರಾಗುತ್ತದೆ, ಸಭೆಗೆ ಹೋಗುವಂಥದ್ದು ಸುಲಭ ಆದರೆ ವಾಕ್ಯದ ಪ್ರಕಾರ ಜೀವಿಸುವದು ಕಷ್ಟ. ಸಾರ್ವಜನಿಕರೆದುರಿನಲ್ಲಿ ನಾನು ಕ್ರೈಸ್ತನೆಂದು ಒಪ್ಪಿಕೊಳ್ಳುವದೆಂದರೆ ನಿಮ್ಮ ಸ್ನೇಹಿತರು ಅಥವಾ ಕುಟುಂಬದವರಿಂದ ತಿರಸ್ಕಾರ, ಅವಮಾನ ಮತ್ತು ನಾಚಿಕೆಗಳ ಮೂಲಕ ಪರೀಕ್ಷಿಸಲ್ಪಡುವದಾಗಿದೆ. ನಿಮ್ಮಂದ ಒತ್ತಡಗಳನ್ನು ಸಹಿಸಿಕೊಳ್ಳಲು ನಿಜವಾಗಿಯೂ ಸಾಧ್ಯವೇ?

೨. ನಿಮ್ಮ ಸಭೆಯಲ್ಲಿ ಏರ್ಪಡಿಸಲಾಗಿರುವ ಪ್ರಾರ್ಥನಾ ಸಮಯ ನಡೆಯುವ ಸಂದರ್ಭದಲ್ಲಿಯೇ ನಿಮ್ಮ ಸ್ನೇಹಿತರು ನಿಮ್ಮನ್ನು ಔತಣ ಕೂಟಕ್ಕೆ ಆಹ್ವಾನಿಸುವಾಗ, ನೀವು ಪ್ರಾರ್ಥನೆಯಲ್ಲಿ ಭಾಗವಹಿಸುವ ಸಲುವಾಗಿ ಅವರ ಕೂಟಕ್ಕೆ

ಹೋಗದಿದ್ದರೆ ಅವರಿಗೆ ಕೋಪ ಬರುತ್ತದೆ. ಒಂದುವೇಳೆ ದೇವರಿಗೆ ಇಷ್ಟವಿಲ್ಲದ ಸ್ನೇಹದಲ್ಲಿ ನೀವು ಇರುವದಾದರೆ ಯಾವ ರೀತಿ ಬದಲಾವಣೆ ಮಾಡಿಕೊಳ್ಳುವಿರಿ?

ನಿಮ್ಮ ಸ್ನೇಹಿತರ ಸಹವಾಸದಿಂದ ಸಾಮಾಜಿಕ ಚಟುವಟಿಕೆಗಳಿಗೆ ಅಡ್ಡಿಯಾಗುತ್ತಿರುವದಾದರೆ ಅದನ್ನು ಬಿಟ್ಟು ಬದಲಾಗಿರಿ ಎಂದು ದೇವರು ಹೇಳುವಾಗ ಬಹಳ ಬೆಲೆ ಕೊಟ್ಟು ಅಂಥ ಸಂಬಂಧಗಳಿಂದ ಹೊರಗೆ ಬರಬೇಕಾಗುತ್ತದೆ.

೩. ನೀವು ನಿಮಗಾಗಿ ಯಾವ ಚಟುವಟಿಕೆಗಳನ್ನು ಬೇರ್ಪಡಿಸಿಕೊಂಡಿದ್ದೀರಿ ಮತ್ತು ಯಾವ ವಿಷಯಗಳಲ್ಲಿ ನಿಮ್ಮನ್ನು ಬದಲಾಯಿಸಲು ಯೇಸು ಕ್ರಿಸ್ತನಿಗೆ ಅನುಮತಿ ಕೊಡದವರಾಗಿದ್ದೀರಿ? ಯೇಸು ಕ್ರಿಸ್ತನು ಹೇಳಿರುವದೇನೆಂದರೆ, "ನನ್ನನ್ನು ಹಿಂಬಾಲಿಸಿರಿ" ಆದರೆ ಅದು ಕಷ್ಟವಾಗಿದೆ ಯಾಕಂದರೆ ಅದಕ್ಕೆ ಸಂಪೂರ್ಣವಾದ ಹಾಗೂ ಯಾವುದೇ ಕಾಯ್ದಿರಿಸುವಿಕೆಯಿಲ್ಲದ ಸಮರ್ಪಣೆ ಅವಶ್ಯಕವಾಗಿದೆ. ಇದರ ಅರ್ಥ ಆತನು ನಿಮಗೆ ನಿಮ್ಮ ಜೀವಿತದಲ್ಲಿ ಬದಲಾವಣೆ ಮಾಡಿಕೊಳ್ಳಿರಿ ಎಂದು ಹೇಳುವಾಗ ಅದರಿಂದ ನಿಮಗೆ ನೋವಾದರೂ ಚಿಂತಿಸದೆ ಸಂಪೂರ್ಣವಾಗಿ ಯೇಸು ಕ್ರಿಸ್ತನನ್ನು ಆತುಕೊಳ್ಳಬೇಕು.



### ನೀವು ಏನನ್ನು ಬದಲಾಯಿಸುವಿರಿ?

ನಿಮ್ಮ ಅನುದಿನದ ಜೀವಿತದ ಬಗ್ಗೆ ಆಲೋಚಿಸುತ್ತಾ, ದೇವರನ್ನು ಮೆಚ್ಚಿಸಲು ನೀವು ಬದಲಾಯಿಸಿಕೊಳ್ಳಲು ಬಯಸುವ ಕ್ರಿಯೆಗಳನ್ನು ತೋರಿಸುವ ಚಿತ್ರಗಳನ್ನು ಬಿಡಿಸಿರಿ ಅಥವಾ ಬರೆಯಿರಿ.

ನಿಮ್ಮನ್ನು ನೋಯಿಸುವ ಅಥವಾ ನಿರಾಕರಿಸುವ ವ್ಯಕ್ತಿಯೊಂದಿಗೆ ನೀವು ಹೇಗೆ ಪ್ರತಿಕ್ರಿಯಿಸುವಿರಿ?

ಬದಲಾಗಲಿ ಎಂದು ನೀವು ಬಯಸುವ ನಿಮ್ಮ ಜೀವಿತದ ಯಾವುದಾದರೊಂದು ಸಮಯ.ಉದಾಹರಣೆ: ನನ್ನ ಕೆಟ್ಟ ಕಾರ್ಯಗಳಿಗಾಗಿ ನಾನು ನನ್ನ ತಮ್ಮನ ಮೇಲೆ ಆರೋಪ ಹೊರಿಸುವಾಗ.


ನಿಮ್ಮ ಜೀವಿತದಲ್ಲಿ ಸಂಭವಿಸಬೇಕೆಂದು ನೀವು ಬಯಸುವ ಕಾರ್ಯಗಳು.
ಉದಾಹರಣೆ: ಬೇರೊಂದು ದೇಶಕ್ಕೆ ಮಾಡುವ ಪ್ರಯಾಣ

ಒಬ್ಬ ವ್ಯಕ್ತಿ ಬದಲಾಗುವದು ಹೇಗೆ? ಅವನ/ಅವಳ ನಡತೆ

ಹಾಡಿನಲ್ಲಿ ಯಾವುದು ಬದಲಾಗುತ್ತದೆ? ಕೆಟ್ಟುವುದು ಮತ್ತು ಶಪಥ ಮಾಡುವುದು

ಚಲನಚಿತ್ರದಲ್ಲಿ ಯಾವುದು ಬದಲಾಗುತ್ತದೆ? ವಯಸ್ಕರ ದೃಶ್ಯಗಳು





| | | | | | | | | | | | |
|---|---|---|---|---|---|---|---|---|---|---|---|
| ನೀ | ರು | ಕ | ಕ್ಷ | ಕೊಂ | ಲ | ಎ | ಕ | ಳೆ | ಗ | ಳು | ಜ್ |
| ಚ | ಮು | ಣ | ಹ | ಣ್ಣು | ಬೆ | ಲೆ | ಠ | ಶಿ | ಕ್ಷೆ | ನ್ | ಜೆ |
| ನ | ರಿ | ಝು | ತ | ದ | ಝೂ | ಗ | ಉ | ದಾ | ಹ | ರ | ತೆ |
| ಸ | ಯ | ಪ | ಬೇ | ರು | ಗ | ಳು | ಳು | ಲ | ಭ | ಕ | ಪ |
| ಟ | ಲ್ಲ | ಹ | ಶ್ತಾ | ಟ್ಟ | ಎ | ಹುಂ | ಬ | ಳಿ | ಶ್ಯ | ಪೇ | ಳ್ಳಿ |
| ಞ | ಡು | ಫೊ | ಠ | ತ್ತಾ | ಪಾ | ಜ | ಉ | ವ | ಸತ್ಯ | ಸ | ತ್ಯ |
| ಗ | ವಿ | ಅ | ಆ | ಇ | ತ | ಈ | ಅ | ಯೇ | ಲೆ | ರ | ದ |
| ಢ | ಕೆ | ಟ್ಟ | ಸು | ಆ | ಕಾ | ಶ | ರ | ಸು | ಶ್ಯ | ಕ್ಷ | ಜೆ |

## ಪೇತ್ರನೊಂದಿಗೆ ವನಭೋಜನ ೨

### ಪಾಪ್ ಕಾರ್ನ್

**ಸಾಮಗ್ರಿಗಳು:**

- **ಪಾಪ್ ಕಾರ್ನ್.**
- **ಸೆಲೊಫೇನ್ ಪೇಪರ್ ಬ್ಯಾಗ್ ಅಥವಾ ಪಾರದರ್ಶಕ ಪೇಪರ್ ಬ್ಯಾಗ್.**
- **೧೦ಸೆಮಿx೧೦ಸೆಮಿ ಚೌಕಾಕಾರದ ಹಸಿರು ಹಾಳೆ.**
- **ಗೋಣಿ ನಾರು, ನೂಲು, ನೂಲುಹುರಿ ಅಥವಾ ಕಂದು ಬಣ್ಣದ ದಾರ.**



**ಸೂಚನೆಗಳು:**

- **ಪ್ರತಿಯೊಬ್ಬ ವಿದ್ಯಾರ್ಥಿಗೆ ಸಣ್ಣ ಚೀಲ, ಪಾಪ್ ಕಾರ್ನ್, ಒಂದು ಹಾಳೆ ಚೂರು, ಒಂದು ದಾರ ಕೊಡಿರಿ.**
- **ಸ್ಪಷ್ಟವಾಗಿರುವ ನಿಮ್ಮ ಚೀಲದೊಳಗೆ ಕಡ್ಡಿಕಾಳಿನ ಆಕಾರದೊಳಗೆ ಕಾರ್ನ್ ತುಂಬಿಸಿರಿ.**
- **ಚಕಾಕಾರದಲ್ಲಿರುವ ಹಾಳೆಯನ್ನು ತೆಗೆದುಕೊಳ್ಳಿರಿ ಮತ್ತು ಅದರ ಮೂರು ಕೋನಗಳಿಗೆ ಗೋಂದು ಅಥವಾ ಟೇಪ್ ಅಂಟಿಸಿರಿ, ಆಗ ಅದು ಮುಂಭಾಗದ ಕೋನ ಮಾತ್ರವೇ ತೆರೆದಿರುವ ಲಕೋಟೆಯಂತಾಗುತ್ತದೆ.**
- **ಹಾಳೆಯೊಳಗೆ ಪಾಪ್ ಕಾರ್ನ್ ಕಡ್ಡಿಯನ್ನು ಹಾಕಿರಿ ಮತ್ತು ಅದು ಬಿಗಿಯಾಗಿ ಅದರೊಳಗೆ ಕೂರುತ್ತದೆ, ನಂತರ ಚಿಕ್ಕ ದಾರದಿಂದ ನಿಮ್ಮ ಕಾರ್ನ್ ಮಧ್ಯಭಾಗವನ್ನು ಕಟ್ಟಿರಿ.**
- **ಈಗ ನಿಮಗೆ ತಿನ್ನಲು ತಿಂಡಿ ಸಿದ್ಧವಾಗಿರುತ್ತದೆ.**

### ಪೇತ್ರನೊಂದಿಗೆ ನಾಟಕ

**ಪೇತ್ರನು ಯೇಸು ಕ್ರಿಸ್ತನನ್ನು ಅಲ್ಲಗಳೆದನು (ಮತ್ತಾಯ ೨೬:೬೯-೭೫)**

ದೃಶ್ಯ: ಪೇತ್ರನು ಕೆಲವು ಕೊಂಬೆಗಳ ಹಿಂದೆ ಬಚ್ಚಿಟ್ಟುಕೊಂಡಿದ್ದಾನೆ ಮತ್ತು ಯೇಸು ಕ್ರಿಸ್ತನು ವೇದಿಕೆಯ ಮತ್ತೊಂದು ಭಾಗದಲ್ಲಿ ಕೈಕಾಲುಗಳು ಕಟ್ಟಲ್ಪಟ್ಟವನಾಗಿ, ಶಿರಬಾಗಿಸಿಕೊಂಡು ಬಿದ್ದಿದ್ದಾನೆ. (ಯೇಸು ಕ್ರಿಸ್ತನು ಮತ್ತು ಪಾತಕಿಯು ಪೇತ್ರನ ಕಡೆಗೆ ನೋಡದಂತೆ ನೋಡಿಕೊಳ್ಳಿರಿ). ಯೇಸು ಕ್ರಿಸ್ತನು ತಪ್ಪಿಸಿಕೊಳ್ಳದ ಹಾಗೆ ಪಾತಕಿಯು ಆತನನ್ನು ಕಾಯುತ್ತಿದ್ದಾನೆ, ಅವನು ಕಡಲಿನ ಹತ್ತಿರ ಹಾಕಿರುವ ಬೆಂಕಿಯಲ್ಲಿ ಚಳಿ ಕಾಯಿಸಿಕೊಳ್ಳುತ್ತಾ ಬೀರ್ ಹಿಡಿದು ಕುಳಿತಿದ್ದಾನೆ. ಪೇತ್ರನು ಮೇಜಿನ ಹಿಂದಿನಿಂದ ಪ್ರೇಕ್ಷಕರೊಂದಿಗೆ ಗುಣಗುಣಿಸುತ್ತಿದ್ದಾನೆ.

(ಪಾತಕಿಗೆ ಕಾಣಿಸದ ಹಾಗೆ ಅಡಗಿಕೊಂಡಿರುವಾಗ, ದೃಶ್ಯದಲ್ಲಿ ಏನಾಗುತ್ತಿದೆ ಎಂಬದನ್ನು ಪ್ರೇಕ್ಷಕರಿಗೆ ಹೇಳಲು ಪೇತ್ರನಿಗೆ ಮೊದಲನೆಯ ಭಾಗದಲ್ಲಿ ಕಷ್ಟವಾಗುವದಿಲ್ಲ.)

- ನಾವು ಬೆಳಗ್ಗೆ _______ (ಯಾವುದಾದರು ಸ್ಥಳೀಯ ಮಾಲ್) ಮಾಲ್ ನಲ್ಲಿದ್ದೆವು ಎಂದು ಎಲ್ಲರಿಗೂ ಹೇಳುತ್ತಾನೆ.
- ತಕ್ಷಣ ಕೆಲವು ಪಾತಕಿಗಳು ಬಂದರು ಮತ್ತು ಯೇಸು ಕ್ರಿಸ್ತನನ್ನು ಎಳೆದಾಡಿ ಕಟ್ಟಿದರು.
- ಎಲ್ಲರಿಗೂ ಭಯಹಿಡಿಯಿತು, ಅನೇಕರು ಕೂಗಿದರು, ಆದರೆ ಪಾತಕಿಗಳು ಗುಂಡು ಹಾರಿಸಲು ಪ್ರಾರಂಭಿಸಿದರು.
- ಅವರು ಯೇಸುವನ್ನು ವ್ಯಾನ್ ನೊಳಗೆ ಕರೆದುಕೊಂಡು ಹೋದರು, ಆದರೆ ಪೇತ್ರನು ದೂರದಿಂದ ಅವರನ್ನು ಹಿಂಬಾಲಿಸುತ್ತಿದ್ದನು.
- ಅವರು ಕಣ್ಮರೆಯಾಗುವ ಮೊದಲು, ಯೇಸುವನ್ನು ಕರೆದುಕೊಂಡು ಹೋಗುತ್ತಿದ್ದ ವ್ಯಾನ್ ನೊಳಗೆ ಜಿಪಿಎಸ್ ಲೊಕೇಟರ್ ಇಡಲು ಪೇತ್ರನಿಗೆ ಸಾಧ್ಯವಾಯಿತು.
- ಪೇತ್ರನು ತನ್ನ ದ್ವಿಚಕ್ರ ವಾಹನದಲ್ಲಿ ಅವರನ್ನು ಸಮುದ್ರದ ತನಕ ಹಿಂಬಾಲಿಸಿಕೊಂಡು ಹೋದನು (ನಿಮ್ಮ ದೇಶದಲ್ಲಿರುವ ಕರಾವಳಿ ಪಟ್ಟಣದ ಹೆಸರು ಬರೆಯಿರಿ)
- _________ ಸಮುದ್ರದ ಬಳಿಯಿರುವ ಪಾತಕಿಗಳನ್ನು ನೀವು ನೋಡುತ್ತಿರುವಿರಿ ಎಂದು ಪೇತ್ರನು ಪ್ರೇಕ್ಷಕರಿಗೆ ಹೇಳುವನು (ಈ ಭಾಗದಲ್ಲಿ ಪೆಡ್ರೊ, ಯೇಸು ಕ್ರಿಸ್ತನು ಮತ್ತು ಪಾತಕಿ ಅಭಿನಯಿಸಲು ಪ್ರಾರಂಭಿಸಬೇಕು)
- ಪೇತ್ರನು ಎಚ್ಚರಿಕೆಯಿಂದ ಪಾತಕಿಯ ಕಡೆಗೆ ಮತ್ತು ಯೇಸು ಕ್ರಿಸ್ತನ ಕಡೆಗೆ ಹೋಗಲು ಪ್ರಾರಂಭಿಸಿದನು ಹಾಗೂ ಅವರು ವಾತಾವರಣದ ಬಗ್ಗೆ ಮಾತನಾಡಲು ಪ್ರಾರಂಭಿಸಿದರು.
- ಪಾತಕಿಯು ಪೇತ್ರನಿಗೆ ಕುಳಿತುಕೊಳ್ಳಲು ಕುರ್ಚಿ ನೀಡಿದನು.
- ಪಾತಕಿಯು ವಾಹನ ಚಾಲಕನ ಮೂಲಕ ತನ್ನ ಸೆಲ್ ಫೋನಿಗೆ ಯೇಸು ಕ್ರಿಸ್ತನ ಕೆಲವು ಶಿಷ್ಯರ ಭಾವಚಿತ್ರಗಳನ್ನು ಮೆಸೇಜ್ ಮೂಲಕ ಪಡೆದುಕೊಂಡನು. ಪಾತಕಿಯು ಪೇತ್ರನಿಗೆ ನೀನು ಯೇಸು ಕ್ರಿಸ್ತನ ಸ್ನೇಹಿತರಲ್ಲಿ ಒಬ್ಬನು ಎಂಬದಾಗಿ ಹೇಳುತ್ತಿದ್ದಾರೆ ಎಂದು ಹೇಳಿದನು.
- ಪೇತ್ರನು ಅವರ ಆರೋಪವನ್ನು ನಿರಾಕರಿಸಿದನು ಮತ್ತು ಆತನ ಪರಿಚಯ ನನಗೆ ಇಲ್ಲ ಎಂದು ಹೇಳಿದನು.
- ಅಲ್ಲಿದ್ದ ಉಳಿದವರು ಪೇತ್ರನು ಯೇಸು ಕ್ರಿಸ್ತನ ಸ್ನೇಹಿತರಲ್ಲಿ ಒಬ್ಬನೆಂದು ನಾವು ನಂಬುತ್ತೇವೆ ಎಂದು ಹೇಳಿದರು. (ಅಧ್ಯಾಪಕರಲ್ಲಿ ಒಬ್ಬರು ಪ್ರೇಕ್ಷಕರ ಮಧ್ಯದಿಂದ ಕೂಗಿ ಹೇಳಬಹುದು)
- ಪೇತ್ರನು ಮತ್ತೊಮ್ಮೆ ನಿರಾಕರಿಸಿದನು.

- ಪಾತಕಿಯು ಪೇತ್ರನಿಗೆ ಈ ರೀತಿಯ ಮಾತುಗಳು ಮತ್ತು ಶೈಲಿ “ಯೇಸು ಕ್ರಿಸ್ತನ ಸ್ನೇಹಿತರು” ಎಂಬ ವಾಟ್ಸಪ್ ಗ್ರೂಪ್ ಗೆ ಸಂಬಂಧಿಸಿದ್ದಾಗಿದೆ, ಆದ್ದರಿಂದ ನೀನು ಅವರಲ್ಲಿ ಒಬ್ಬನಾಗಿರುವೆ ಎಂದು ನನಗೆ ಅನ್ನಿಸುತ್ತದೆ ಎಂಬದಾಗಿ ಹೇಳುತ್ತಾನೆ.
- ಮೂರನೆಯ ಸಲ ಪೇತ್ರನು ನಿರಾಕರಿಸಿ, “ನೀವು ಏನು ಹೇಳುತ್ತಿದ್ದೀರೋ ನನಗೆ ಗೊತ್ತಿಲ್ಲ” ಎಂದು ಹೇಳುತ್ತಾನೆ.
- ಕೂಡಲೇ ಪೇತ್ರನ ಸೆಲ್ ಫೋನ್ ಅಲಾರಮ್ ಶುರುವಾಗುತ್ತದೆ ಮತ್ತು ಅದರ ಶಬ್ದ ಕೋಳಿ ಕೂಗುವ ಹಾಗಿರುತ್ತದೆ.
- ಅಲಾರಮ್ ಶುರುವಾದ ಕೂಡಲೇ ಯೇಸು ಕ್ರಿಸ್ತನು ಶಿರವನ್ನು ಮೇಲೆತ್ತಿ ನೇರವಾಗಿ ಪೇತ್ರನ ಕಡೆಗೆ ನೋಡುತ್ತಾನೆ.
- ಪೇತ್ರನು ವೇದಿಕೆಯ ಮೂಲೆಗೆ ಓಡುತ್ತಾನೆ ಮತ್ತು ಯೇಸು ಕ್ರಿಸ್ತನಲ್ಲಿ ಕ್ಷಮಾಪಣೆ ಬೇಡುತ್ತಾ ಗಟ್ಟಿಯಾಗಿ ಅಳುತ್ತಾನೆ. (ಪ್ರತಿಯೊಬ್ಬರು ದೃಶ್ಯದಿಂದ ಹೊರಗೆ ಹೋಗುತ್ತಾರೆ ಮತ್ತು ಮೂರನೆಯ ದೃಶ್ಯದಲ್ಲಿ ಯೇಸು ಕ್ರಿಸ್ತನು ಪೇತ್ರನ ನಿರಾಕರಣೆಯನ್ನು ಕ್ಷಮಿಸಿದ ನಂತರ ಅವರಿಬ್ಬರೂ ಸಂತೋಷವಾಗಿ ನಡೆದುಕೊಂಡು ಬರುತ್ತಾರೆ). ಯೇಸು ಕ್ರಿಸ್ತನು ಪೇತ್ರನಿಗೆ ನಾನು ಸ್ವಲ್ಪ ಕಾಲ ಮೆಕ್ಸಿಕೊ ಪಟ್ಟಣಕ್ಕೆ ಹೋಗುತ್ತಿದ್ದೇನೆ (ನಿಮ್ಮ ದೇಶದ ಪಟ್ಟಣವನ್ನು ನೀವು ಸೇರಿಸಬಹುದು) ಆದರೆ ನಿನ್ನೊಂದಿಗೆ ವಾಟ್ಸಪ್, ಫೇಸ್ ಬುಕ್ ಮತ್ತು ಈಮೇಲ್ ಮೂಲಕ ಸಂಪರ್ಕದಲ್ಲಿರುತ್ತೇನೆ ಎಂದು ಹೇಳುವನು.

## ಕಣಜದ ಕರಕುಶಲತೆಗಳು ೨

### ಹುಂಜದ ಟೋಪಿ



೧. ಕರಕುಶಲ ವಿಧಾನಗಳ ಪ್ರತಿಗಳನ್ನು ತೆಗೆದುಕೊಳ್ಳಿರಿ ಮತ್ತು ಅವುಗಳನ್ನು ಬಣ್ಣದ ಹಾಳೆಯ ಮೇಲೆ ಟ್ರೇಸ್ ಮಾಡಿರಿ.

೨. ಭಾಗಗಳನ್ನು ಕತ್ತರಿಸಿರಿ, ದೊಡ್ಡದಾಗಿರುವ ಬಿಳಿ ತುಂಡನ್ನು ಕೋನಾಕಾರದಲ್ಲಿ ಮಡಚಿರಿ ಮತ್ತು ಕೋನ್ ರೂಪ ಬರುವ ಹಾಗೆ ಹಿಂಬದಿಯಲ್ಲಿ ಗೋಂದು ಹಚ್ಚಿರಿ. ಕೆಳಭಾಗದಲ್ಲಿ ಹೆಚ್ಚಿನ ಹಾಳೆ ಇದ್ದರೆ ಅದನ್ನು ಕತ್ತರಿಸಿರಿ.

೩. ಮೇಲ್ಭಾಗದಲ್ಲಿ ೧೦ಸೆಮಿ ಸ್ಥಳವನ್ನು ಬಿಟ್ಟು ಎರಡು ಕಣ್ಣುಗಳನ್ನು ಅಂಟಿಸಿರಿ.

೪. ಕಣ್ಣುಗಳಿಗೆ ಸಮಾನವಾಗಿ ಎರಡೂ ಕಡೆಗಳಲ್ಲಿ ಕಿವಿಗಳನ್ನು ಅಂಟಿಸಿರಿ.

೫. ಹಳದಿ ಬಣ್ಣದಲ್ಲಿ ಕೊಕ್ಕು ಕತ್ತರಿಸಿರಿ ಮತ್ತು ಅದನ್ನು ಕಣ್ಣುಗಳ ಕೆಳಗೆ ಅಂಟಿಸಿರಿ.

೬. ಕೆಂಪು ಬಣ್ಣದಲ್ಲಿ ಜುಟ್ಟು ಕತ್ತರಿಸಿರಿ ಮತ್ತು ಹುಂಜದ ಮೇಲ್ಭಾಗದಲ್ಲಿ ಅಂಟಿಸಿರಿ.

೭. ಅಂತಿಮವಾಗಿ ಕೆಳಗೆ ಕರ್ಲಿ ರಿಬ್ಬನ್ ಅಥವಾ ದಾರವನ್ನು ಕೆಳಗೆ ಕಟ್ಟಿರಿ, ಆಗ ಅದನ್ನು ಮಗುವಿನ ತಲೆಯ ಮೇಲಿಡಲು ಸಹಾಯವಾಗುತ್ತದೆ.

### ಚಲನದೊಂದಿಗೆ ಕೈಕುಲುಕುವದು

ದಿನ ೨: ಮುಷ್ಟಿ ಮತ್ತು ಚಿಟ್ಟ



ಮುಷ್ಟಿಯನ್ನು ಬಿಗಿಹಿಡಿದವರಾಗಿ ಮತ್ತೊಬ್ಬ ವ್ಯಕ್ತಿಯ ಮುಷ್ಟಿಗೆ ಮೇಲೆ ಮತ್ತು ಕೆಳಗೆ ಗುದ್ದುವದು

ಮುಷ್ಟಿಯನ್ನು ಬಿಗಿಹಿಡಿದು ಮೊದಲು ಮುಂದೆ ಗುದ್ದುವದು

ನಿಮ್ಮ ಹೆಬ್ಬೆರಳಿನೊಂದಿಗೆ ತಿರುಗಿಸಿರಿ ಮತ್ತು ಸಡಿಲಗೊಳ್ಳದಂತೆ ನೋಡಿಕೊಳ್ಳಿರಿ

## ದ್ರಾಕ್ಷೇತೋಟದ ಆಟಗಳು ೨

### ದೊಡ್ಡ ಗಾತ್ರದ ವಾಲಿಬಾಲ್




ವಾಲಿಬಾಲ್ ಆಡಲು ಚೆಂಡು ಅಥವಾ ಗಾಳಿ ತುಂಬಿದ ಬಲೂನ್ ಉಪಯೋಗಿಸಿರಿ.



ನೀವಾಗಿಯೇ ಬಲೆಯನ್ನು ನಿರ್ಮಿಸಿ ಅಂದರೆ ಕುರ್ಚಿಗಳನ್ನು ಸಾಲಾಗಿ ಇಡುವದು, ಎರಡು ಮರಗಳ ನಡುವೆ ದಾರ ಕಟ್ಟುವದು ಇತ್ಯಾದಿ ಕಾರ್ಯಗಳ ಮೂಲಕ ಮಕ್ಕಳೊಂದಿಗೆ ವಾಲಿಬಾಲ್ ಆಡಿರಿ.

## ಸಂಗೀತ ಮತ್ತು ಕೈಗೊಂಬೆ ಆಟ ೨ರ ಮೂಲಕ ಮುಕ್ತಾಯಗೊಳಿಸುವದು ೨



ಹುಂಜ: ಹಲೋ ಹುಡುಗರೇ ಮತ್ತು ಹುಡುಗಿಯರೇ, ನಿನ್ನೆ ನಾವು ಯೇಸು ಕ್ರಿಸ್ತನೇ ದ್ರಾಕ್ಷೇ ಬಳ್ಳಿ ಎಂಬದನ್ನು ಕಲಿತುಕೊಂಡೆವು ಮತ್ತು ಇಂದು . . . (ಕೆಲವು ಕ್ಷಣ ತಡೆದು ಹೇಳುವದೇನೆಂದರೆ) ಇಂದಿನ ನಮ್ಮ ಧ್ಯೇಯವನ್ನು ನನ್ನೊಂದಿಗೆ ಮುಗಿಸಬೇಕಾಗಿರುವ ಕುದುರೆ ಎಲ್ಲಿ?

ಕುದುರೆ: ನನಗೆ ಬಹಳ ಅಡ್ಡಿಯಾಗಿದೆ. ನನ್ನಿಂದ ಬರಲು ಆಗುತ್ತಿಲ್ಲ (ಎಂದು ದೃಶ್ಯದೊಳಗೆ ಬಾರದೆಯೇ ಹೇಳಬೇಕು)

ಹುಂಜ: ಹೇಗಾದರೂ ಬಾ, ಮಕ್ಕಳು ನಿನಗಾಗಿ ಕಾಯುತ್ತಿದ್ದಾರೆ, ಇಂದಿನ ಧ್ಯೇಯವನ್ನು ಮುಗಿಸೋಣ.

ಕುದುರೆ: ಇಲ್ಲ, ನನ್ನಿಂದ ಬರಲು ಆಗುವದಿಲ್ಲ. ದಯವಿಟ್ಟು ಕ್ಷಮಿಸು.

ಹುಂಜ: ಆದರೆ ನಾವು ಸಿದ್ಧವಾಗಿದ್ದೇವೆ, ಈಗಲೇ ಹೊರಗೆ ಬಾ . . . ಮಕ್ಕಳೇ, ನಾನು ಮೂರರ ತನಕ ಎಣಿಸುತ್ತೇನೆ ದಯವಿಟ್ಟು “ಕುದುರೆ ಜಂಪ್!” ಎಂದು ಕೂಗಿರಿ. ೧,೨,೩ . . . ಕುದುರೆ ಜಂಪ್!

ಕುದುರೆ: (ತನ್ನ ತಲೆಗೆ ಒಂದು ಚೀಲ ಹಾಕಿಕೊಂಡು ಬರುತ್ತದೆ. ಆ ಚೀಲಕ್ಕೆ ಎರಡು ಕಣ್ಣುಗಳಿರುತ್ತವೆ)

ಹುಂಜ: ನೀನು ತಲೆಗೆ ಯಾಕೆ ಚೀಲ ಹಾಕಿಕೊಂಡಿರುವೆ. ನಿನ್ನನ್ನು ನೋಡಲು ಮಕ್ಕಳಿಗೆ ಆಗುತ್ತಿಲ್ಲ.

ಕುದುರೆ: ಒಂದು ನಿಮಿಷ ತಡೆ, ಅವರೆಲ್ಲರೂ ನಗುತ್ತಾರೆ. (ಕುದುರೆ ತನ್ನ ತಲೆಯ ಮೇಲಿರುವ ಚೀಲವನ್ನು ತೆಗೆಯಲು ದೃಶ್ಯದಿಂದ ಹೊರಗೆ ಹೋಗುತ್ತದೆ ಮತ್ತು ಪುನಃ ದೃಶ್ಯಕ್ಕೆ ಬರುತ್ತದೆ.) ನಾನು ಗಂಭೀರವಾದ ತಪ್ಪು ಮಾಡಿದ್ದೇನೆ. ನಾನು ಬದಲಾಗಲು ಬಯಸಿದೆನು ಯಾಕಂದರೆ ನಾನು ನನ್ನ ಕೇಶ ವಿನ್ಯಾಸವನ್ನು ಬದಲಾಯಿಸುವ ಬಗ್ಗೆ ಚಿಂತಿಸುತ್ತಿದ್ದೇನೆ. ನಂತರ ನಾನು ನನಗೆ ಬೇಕಾದ ಹಾಗೆ ವಿನ್ಯಾಸ ಮಾಡಿಸಿಕೊಂಡರೆ ಚೆನ್ನಾಗಿರುತ್ತದೆ ಎಂದು ಯೋಚಿಸಿದೆನು. ಆದ್ದರಿಂದ ನಾನೇ ಕತ್ತರಿ ತೆಗೆದುಕೊಂಡು ಕತ್ತರಿಸಿಕೊಂಡೆನು. ಅದರ ಫಲಿತಾಂಶ ಹೀಗಾಗಿದೆ.

ಹುಂಜ: (ನಗು ತಡೆದುಕೊಳ್ಳುತ್ತಾ.) ಇದರಿಂದ ನಿನಗೆ ಬೇಸರವಾಗಿರಬಹುದೆಂದು ನನಗೆ ಗೊತ್ತು. ನಾವು ಬದಲಾಗಬಹುದು ಎಂದು ಕಲಿತುಕೊಂಡಿದ್ದೇವೆ ಆದರೆ ಅದರ ಅರ್ಥ ನಮ್ಮ ಶೈಲಿಯನ್ನು ಬದಲಾಯಿಸಿಕೊಳ್ಳಬೇಕೆಂಬದಲ್ಲ. ನಾವೆಲ್ಲರೂ ಪಾಪಿಗಳಾಗಿದ್ದೇವೆ ಮತ್ತು ಯಾವುದೋ ಸಮಯದಲ್ಲಿ ತಪ್ಪು ಮಾಡಿದ್ದೇವೆ. "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" ಎಂದು ರೋಮಾ ೩:೨೩ ಹಾಗೂ "ಪಾಪವು ಕೊಡುವ ಸಂಬಳ, ಆದರೆ ದೇವರು ಕೊಡುವ ಉಚಿತವಾದ ವರ ನಿತ್ಯಜೀವ" ಎಂದು ರೋಮಾ ೬:೨೩ರಲ್ಲಿ ಸತ್ಯವೇದವು ಹೇಳುವ ಪ್ರಕಾರ ನಾವು ಶಿಕ್ಷೆ ಅರ್ಹರಾಗಿದ್ದೇವೆ.

ಕುದುರೆ: ಹೌದು! ಇದು ನಮ್ಮ ಜೀವನ ಶೈಲಿಯನ್ನು ಬದಲಾಯಿಸುತ್ತದೆ.

ಹುಂಜ: ಖಂಡಿತವಾಗಿಯೂ ಸತ್ಯ.

ಕುದುರೆ: ನಾನು ಹೋಗಬೇಕೆಂದು ನನಗೆ ಅನ್ನಿಸುತ್ತಿದೆ! ನೀನು ನನ್ನೊಂದಿಗೆ ಪೇಪರ್ ಅಂಗಡಿಗೆ ಬರುತ್ತೀಯಾ?

ಹುಂಜ: ಖಂಡಿತವಾಗಿಯೂ ಬರುತ್ತೇನೆ, ನೀನೇನು ಖರೀದಿಸಬೇಕು?

ಕುದುರೆ: ನನ್ನ ಕೂದಲಿಗೆ ಗ್ಲೂ ಖರೀದಿಸಬೇಕು.

ಹುಂಜ: ಅಯ್ಯೋ ಇದು ದಡ್ಡತನವಾಗಿದೆ!

ಕುದುರೆ: (ಕುದುರೆಯ ಹಾಗೆ ನಗುತ್ತಾ) ತಮಾಷೆ ಮಾಡಿದೆ.

# ಪಾಠ ೩


## ಹೆಸರು ೩

ನಾನು ವಿಧೇಯನಾಗುವ ಆಯ್ಕೆ ಮಾಡಿಕೊಂಡಿದ್ದೇನೆ
ಪೇತ್ರನು ತನ್ನ ಕರೆಯನ್ನು ಹೊಂದಿದನು
ಮತ್ತಾಯ ೪:೧೮-೨೨

## ವಚನ ೩

“ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ.” ಯೋಹಾನ ೧೫:೧೦

## ಉಪಾಯ ೩




ನಿಮ್ಮ ಉಪಾಯವು ಸಫಲವಾಗಬೇಕಾದರೆ, ವೇದಿಕೆಯ ಮೇಲೆ ನಿಮಗೆ ಅತ್ಯಂತ ಪಾರದರ್ಶಕವಾಗಿರುವ ದಾರ ಮತ್ತು ೨ ಬೆಲೂನ್ ಗಳು ಇರಬೇಕು. (ಹೆಚ್ಚುವರಿ ಬಲೂನ್ ಗಳು ಇಟ್ಟುಕೊಳ್ಳಿರಿ, ಒಂದುವೇಳೆ ಒಡೆದುಹೋದರೆ ಉಪಯೋಗಿಸಬಹುದು). ಸಭೆಯಲ್ಲಿ ಯಾರೂ ನಿಮ್ಮನ್ನು ನೋಡದಿರುವ ಸಮಯದಲ್ಲಿ ಈ ಉಪಾಯವನ್ನು ಹಲವು ಬಾರಿ ಅಭ್ಯಾಸ ಮಾಡಿರಿ. ವಾದ್ಯ ತಂಡದವರು ಮತ್ತು ಯಾರೊಬ್ಬರ ಕಣ್ಣಿಗೂ ಬೀಳದ ಸ್ಥಳದಲ್ಲಿ ಜೋಪಾನವಾಗಿ ಇದನ್ನು ಇಡಬೇಕು. ನಿಮ್ಮ ಸೂಪರ್ ಪಾರದರ್ಶಕ ದಾರವನ್ನು ಸಭೆಯ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕಟ್ಟಿರಿ. ದಾರದ ಒಂದು ಭಾಗವನ್ನು ಕಟ್ಟುವ ಮೊದಲು, ಸ್ಟ್ರಾದ ಚಿಕ್ಕ ತುಂಡಿನ ಹಾಗೆ ಚಿಕ್ಕ ಪೇಪರ್ ಟ್ಯೂಬ್ ಸಿದ್ಧಪಡಿಸಿರಿ ಮತ್ತು ಅದನ್ನು ದಾರದೊಳಗೆ ಹಾಕಿರಿ. ಸೂಚಿಸಲಾಗುವ ಸಮಯದಲ್ಲಿ ಬಲೂನಿಗೆ ಗಾಳಿ ತುಂಬಿಸಿರಿ, ಅದನ್ನು ಮುಚ್ಚದೆ ಸ್ಟ್ರಾ ಇಟ್ಟು ಟೇಪ್ ಹಾಕಿರಿ. (ಟೇಪ್ ಅಂಟಿಸುವ ಸಮಯದಲ್ಲಿ ಗಾಳಿ ಹೋಗದ ಹಾಗೆ ಮಗು ಅಥವಾ ಅಧ್ಯಾಪಕರಲ್ಲಿ ಯಾರಾದರು ಸಹಾಯ ಮಾಡಬಹುದು.)

## ಮುಖ್ಯ ಪಾಠ ೩

"ಹೊಲಕ್ಕೆ ಹೋಗೋಣ!!!" ಮೂರನೇ ದಿನದ ವಿಬಿಎಸ್ ಗೆ ಸ್ವಾಗತ. ಮೊದಲ ಎರಡು ದಿವಸಗಳ ವಿಬಿಎಸ್ ನ ಪ್ರಶ್ನೆಗಳಿಗೆ ನಿಮ್ಮಲ್ಲಿ ಎಷ್ಟು ಜನರಿಗೆ ಉತ್ತರಗಳು ಗೊತ್ತು? ದ್ರಾಕ್ಷೇಬಳ್ಳಿ ಯಾರು? ಯೇಸು ಕ್ರಿಸ್ತನು. ಕೊಂಬೆಗಳು ಯಾರು? ನಾವು. ಅತ್ಯುತ್ತಮ!

ಇಂದು ನಾವು ಈ ವಾಕ್ಯದ ಮುಂದುವರೆದ ಭಾಗವನ್ನು ನೋಡಿಕೊಳ್ಳೋಣ . . . "ನಾನೇ ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ . . ."

ಇದರ ಅರ್ಥ ಏನು? ನಾವು ಆತನಲ್ಲಿ ನೆಲೆಗೊಂಡಿರಬೇಕೆಂದು ಯೇಸು ಕ್ರಿಸ್ತನು ಬಯಸುವವನಾಗಿದ್ದಾನೆ. ನಾವು ಸಮಯಾಸಮಯಕ್ಕೆ ಪ್ರಾರ್ಥನೆ ಮಾಡುವದು ಅಥವಾ ಸಭೆಯಲ್ಲಿ ಸತ್ಯವೇದವನ್ನು ಓದುವದು ಮಾತ್ರವಲ್ಲ ಬದಲಾಗಿ ಎಲ್ಲಾ ಸಮಯಗಳಲ್ಲಿಯೂ ಆತನಲ್ಲಿ ನೆಲೆಗೊಂಡಿರಬೇಕು. ಇಲ್ಲಿ ಕಷ್ಟಕರವಾದ ವಿಷಯವೆಂದರೆ ನಾವು ಆತನಲ್ಲಿ ನೆಲೆಗೊಂಡಿರುವದು ಹೇಗೆ??? ಬಳ್ಳಿಗೆ ಹೊಂದಿಕೊಂಡಿರುವ ಹಂತವು ಬಹಳ ಪ್ರಾಮುಖ್ಯವಾಗಿದೆ ಯಾಕಂದರೆ ಅಲ್ಲಿಂದಲೇ ಕೊಂಬೆ ತನಗೆ ಬೇಕಾಗಿರುವ ಎಲ್ಲಾ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ನಿಜವಾಗಿ ಹೇಳುವದಾದರೆ, ನೆಲೆಗೊಂಡಿರದೆ ಮುರಿದು ಹೋಗುವ ಯಾವುದೇ ಗಿಡವಾದರೂ ಒಣಗುತ್ತದೆ ಮತ್ತು ಸಾಯುತ್ತದೆ.



ನಾನು ಮತ್ತು ನೀವು ಸ್ವತಂತ್ರರಾಗಿರಲು ಬಯಸುತ್ತೇವೆ ಮತ್ತು ನಮ್ಮ ಪಟ್ಟಣದಲ್ಲಿ ಹೇಗೆ ಉಳಿಯಬೇಕು ಅಥವಾ ತರಗತಿಯಲ್ಲಿ ಮೊದಲನೆ ಸ್ಥಾನ ಪಡೆಯುವದನ್ನು ಕಲಿತುಕೊಳ್ಳಲು ಬಯಸುತ್ತೇವೆ. ಬೇರೆಯವರು ನಮಗೆ ಮೋಸ ಮಾಡಬಾರದೆಂದು ಬಯಸುತ್ತೇವೆ. ಬೇರೆಯವರು ನಮಗೆ ಆದೇಶಗಳನ್ನು ಕೊಡುವಾಗ, ನಾವೇನು ಮಾಡಬೇಕೆಂದು ಹೇಳುವಾಗ ನಮಗೆ ಇಷ್ಟವಾಗುವದಿಲ್ಲ. ನಮ್ಮನ್ನು ನಾವೇ ನೋಡಿಕೊಳ್ಳಲು ಮತ್ತು ಒಂಟಿಯಾಗಿ ಹೊರಗೆ ಹೋಗಲು ನಾವು ಬಯಸುತ್ತೇವೆ. ಆತನು ನಮ್ಮನ್ನು ನೋಡಿಕೊಳ್ಳಲು, ನಾವು ಆತನಲ್ಲಿ ನೆಲೆಯಾಗಿರುವದನ್ನು ಮತ್ತು ನಮ್ಮ ಸುತ್ತಮುತ್ತಲಿನಲ್ಲಿರುವ ಎಲ್ಲಾ ಕೆಟ್ಟ ಕಾರ್ಯಗಳಿಂದ ರಕ್ಷಿಸಲು ಬಯಸುತ್ತಾನೆ. ನಾವು ಯೇಸು ಕ್ರಿಸ್ತನಲ್ಲಿ ನೆಲೆಗೊಂಡವರಾಗಿದ್ದು, ನಮ್ಮ ಜೀವಿತಗಳನ್ನು ಈ ರೀತಿಯಾಗಿ ನಡೆಸಬೇಕು!

ಆತನಲ್ಲಿ ಶಾರೀರಿಕವಾಗಿ ನೆಲೆಗೊಳ್ಳಲು ಯಾವುದೇ ವಿಧಾನ ಇಲ್ಲದಿರುವಾಗ, ಇದನ್ನು ನಾವು ಪಾಲಿಸುವದು ಹೇಗೆ? ಇಂದಿನ ವಾಕ್ಯವು ನಮಗೆ ಈ ವಿಷಯದಲ್ಲಿ ಸಹಾಯ ಮಾಡುತ್ತದೆ: "ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ." ಯೋಹಾನ ೧೫:೧೦. ನಾವು ನೆಲೆಗೊಂಡಿದ್ದೇವೆ ಎಂದು ಅಂದುಕೊಳ್ಳುವದು ಸುಲಭ, ಆದರೆ ಒಬ್ಬನು ನಿಜವಾಗಿಯೂ ಯೇಸು ಕ್ರಿಸ್ತನಲ್ಲಿ ನೆಲೆಯಾಗಿದ್ದಾನೆಯೇ ಎಂಬದನ್ನು ತಿಳಿದುಕೊಳ್ಳಬೇಕಾದರೆ ಅವನ ಕ್ರಿಯೆಗಳನ್ನು ಗಮನಿಸಬೇಕು. ನಾವು ದೇವರಿಗೆ ವಿಧೇಯರಾಗಿ ನಡೆದುಕೊಳ್ಳುವದೇ ಆತನಲ್ಲಿ ನೆಲೆಗೊಂಡಿರುವಂತೆ ಮಾಡುತ್ತದೆ.

**(ಉಪಾಯ)**

ಈ ಬಲೂನ್ ಗಮನಿಸಿರಿ ಮತ್ತು ಅದು ಹೇಗೆ ನೇರವಾಗಿ ಮೇಲಕ್ಕೆ ಹೋಗುತ್ತಿದೆ ಎಂದು ನೋಡಿರಿ. (ದಾರಕ್ಕೆ ಸೇರಿಸಿ ಟೇಪ್ ಸುತ್ತಿರುವ ಬಲೂನ್ ಮೇಲಕ್ಕೆ ಬಿಡಿರಿ) ಈಗ ಈ ಬಲೂನ್ ನೋಡಿರಿ. (ಕಟ್ಟಿಲ್ಲದಿರುವ ಬಲೂನ್ ಮೇಲಕ್ಕೆ

ಬಿಡಿರಿ) ಯಾವ ಬಲೂನ್ ನೇರವಾಗಿ ಹೋಗುತ್ತದೆ? ನಮ್ಮ ಜೀವಿತದಲ್ಲಿರುವ ವಿಧೇಯತೆ, ಈ ಬಲೂನ್ ಹಾಗೆ ನಾವು ನೇರವಾಗಿರುವಂತೆ ಮಾಡುತ್ತದೆ. ನೀವು ಯೇಸು ಕ್ರಿಸ್ತನಲ್ಲಿ ನೆಲೆಗೊಂಡು ಉತ್ತಮವಾಗಿ ಜೀವಿಸಲು ಅವಶ್ಯವಾದ ಸಹಾಯ ಹೊಂದಬಲ್ಲಿರೋ?

ವಿಧೇಯತೆಯ ಸಾರಾಂಶ. ಇಲ್ಲಿ ಮೂಲಭೂತ ವಿಷಯಗಳನ್ನು ಕೊಡಲಾಗಿದೆ. . .

- ಯೇಸು ಕ್ರಿಸ್ತನು ನಮ್ಮನ್ನು ಬಲ್ಲವನಾಗಿದ್ದಾನೆ ಮತ್ತು ನಮ್ಮನ್ನು ನೋಡುತ್ತಾನೆ.
- ಯೇಸು ಕ್ರಿಸ್ತನನ್ನು ನಮ್ಮ ಹೃದಯದೊಳಗೆ ಆಹ್ವಾನಿಸುವ ಮೂಲಕ ನಾವು ನೆಲೆಗೊಳ್ಳುವಿಕೆಯನ್ನು ಪ್ರಾರಂಭಿಸುತ್ತೇವೆ.
- ಯೇಸು ಕ್ರಿಸ್ತನಿಗೆ ನಾವು ಕೊಡುವ ಪ್ರತಿಕ್ರಿಯೆಯೇ ವಿಧೇಯತೆಯಾಗಿದೆ.
- ನಾವು ಅನುದಿನ ಆತನಲ್ಲಿ ನೆಲೆಗೊಂಡಿರಬೇಕು.
- ಯೋಹಾನ ೧೫ನೇ ಅಧ್ಯಾಯ ಹೇಳುವ ಪ್ರಕಾರ ನಾವು ಯೇಸು ಕ್ರಿಸ್ತನಲ್ಲಿ ನೆಲೆಯಾಗಿರಬೇಕು.

ನಾವು ಒಂಟಿಯಾಗಿರದೆ ಆತನಲ್ಲಿ ನೆಲೆಗೊಂಡಿರಬೇಕೆಂದು ಯೇಸು ಕ್ರಿಸ್ತನು ಬಯಸುತ್ತಾನೆ. ಪೇತ್ರನು ವಿಧೇಯನಾಗುವ ಸಲುವಾಗಿ ಸಾಧ್ಯವಾದಷ್ಟು ಬೇಗ ಎಲ್ಲವನ್ನೂ ತ್ಯಜಿಸಿದನ್ನು ನೋಡುವ ಪ್ರಕಾರ ನಾವು ವಿಧೇಯತೆಯಿಂದ ಪ್ರತಿಕ್ರಿಯಿಸಬಹುದು. ನೆಲಗೊಳ್ಳುವವರಾಗೋಣ! ವಿಧೇಯರಾಗುವ ಆಯ್ಕೆಯನ್ನು ಮಾಡಿಕೊಳ್ಳೋಣ!

# ಸರದಿಯ ಠಾಣೆಗಳು ೩

## ಸಿಲೋ ತರಗತಿ ೩

### ಪ್ರಶ್ನೆಗಳು ಮತ್ತು ಉತ್ತರಗಳು





೧. ಯೇಸು ಕ್ರಿಸ್ತನಲ್ಲಿ ನೆಲೆಗೊಳ್ಳಲು ಮತ್ತು ನೀವು ವಿಧೇಯತೆಯುಳ್ಳವರು ಎಂಬದನ್ನು ತೋರ್ಪಡಿಸಲು ಸತ್ಯವೇದ ಓದುವದು ಹಾಗೂ ಪ್ರಾರ್ಥನೆ ಮಾಡುವದರೊಂದಿಗೆ ಬೇರೆ ಯಾವ ಕಾರ್ಯಗಳನ್ನು ಮಾಡುವಿರಿ?
ವಿಧೇಯತೆಯನ್ನು ತೋರ್ಪಡಿಸಲು ಪ್ರಾರ್ಥನೆ ಮಾಡುವದು, ಸತ್ಯವೇದ ಓದುವದು, ಭಾನುವಾರ ಸಭೆಗೆ ಹೋಗುವದು ಮತ್ತು ದಶಮಭಾಗ ಕೊಡುವದು ಸಾಕು ಎಂದು ಅನೇಕ ಕ್ರೈಸ್ತರು ಅಂದುಕೊಂಡಿದ್ದಾರೆ. ಆದರೆ ನಾವು ಯೇಸು ಕ್ರಿಸ್ತನ ಶಿಷ್ಯರಾಗಿದ್ದರೆ ಆತನ ವಾಕ್ಯದಂತೆ ಜೀವಿಸಬೇಕು ಎಂಬದನ್ನು ಮರೆತುಹೋಗಿರುತ್ತೇವೆ. ಪ್ರತಿದಿನ ನಾವು ಶಾಲೆಯಲ್ಲಿರುವಾಗ ಅಥವಾ ಕೆಲಸದಲ್ಲಿರುವಾಗ ದೇವರಿಗೆ ವಿಧೇಯತೆಯನ್ನು ತೋರಿಸುವ ಸಂದರ್ಭಗಳು ನಮಗೆದುರಾಗುತ್ತವೆ.


೨. ಮುಂದಿನ ವಿಬಿಎಸ್ ನಲ್ಲಿ ನೀವು ಅಧ್ಯಾಪಕರಾಗುವಂತೆ ದೇವರು ನಿಮ್ಮನ್ನು ಪ್ರೋತ್ಸಾಹಪಡಿಸುತ್ತಾನೆ. ಆದರೆ ನೀವು ಚೆನ್ನಾಗಿ ಓದಿಲ್ಲವೆಂದರೆ ಮತ್ತು ಶಾಲೆಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದುಕೊಳ್ಳಲಿಲ್ಲವೆಂದರೆ ಸಭೆಯಲ್ಲಿ


ಕಾರ್ಯಮಾಡಲು ಆಗುವದಿಲ್ಲವೆಂದು ನಿಮ್ಮ ತಾಯಿ ನಿಮಗೆ ಹೇಳುತ್ತಾರೆ. ಯಾರಿಗೆ ವಿಧೇಯರಾಗುವ ಆಯ್ಕೆ ಮಾಡುವಿರಿ?
ಯಾರೂ ಇನ್ನೊಬ್ಬರ ವಿಷಯದಲ್ಲಿ ತೀರ್ಪು ಮಾಡಲು ಬಿಡದೆ, ನಿಮ್ಮ ವಿದ್ಯಾರ್ಥಿಗಳೊಂದಿಗೆ ಮುಕ್ತವಾದ ಚರ್ಚೆ ನಡೆಸಲು ಪ್ರಯತ್ನಿಸಿರಿ. ಅವನು ಮನಬಿಚ್ಚಿ ಮಾತನಾಡಲು ಸಹಾಯವಾಗುವ ಸಲುವಾಗಿ ನಿಮ್ಮ ತಪ್ಪುಗಳು ಮತ್ತು ವಿಫಲತೆಗಳನ್ನು ಹಂಚಿಕೊಳ್ಳಿರಿ. ಉದಾಹರಣೆಗೆ, ಒಂದುವೇಳೆ ನೀವು ಪರೀಕ್ಷೆಗೆ ಚೆನ್ನಾಗಿ ಓದದೆ ಫೇಲ್ ಆದರೆ ಮತ್ತು ಸಮಸ್ಯೆಗಳಿಗೆ ಒಳಗಾದ ನಂತರ ತಪ್ಪಾದ ಸ್ಥಳದಲ್ಲಿ ಅಥವಾ ಜನರ ಬಳಿ ಮಾರ್ಗದರ್ಶನ ಪಡೆದರೆ ಹೇಗಿರುವದು.

೩. ಯೇಸು ಕ್ರಿಸ್ತನ ಸ್ವರಕ್ಕೆ ವಿಧೇಯರಾಗದೆ ಇರುವ ಸಮಯದಲ್ಲಿ, ಯಾವ ಕಾರಣವನ್ನು ಆತನಿಗೆ ಹೇಳುವಿರಿ?
ನನಗೆ ಬೋಧನೆ ಮಾಡುವ ಸಾಮರ್ಥ್ಯವಿಲ್ಲ, ನಾನೊಬ್ಬ ಸ್ತ್ರೀಯಾಗಿದ್ದೇನೆ ಅಥವಾ ನನ್ನ ಕುಟುಂಬದಲ್ಲಿ ನಾನೊಬ್ಬನೇ ಕ್ರೈಸ್ತನು ಎಂಬದಾಗಿ ನೀವು ಹೇಳಬಹುದು? ಸತ್ಯವೇದದಲ್ಲಿಯೂ ದೇವರಿಗೆ ವಿಧೇಯರಾಗದಿರಲು ಜನರು ಕಾರಣಗಳ ನೀಡಿದ್ದನ್ನು ನಾವು ನೋಡಬಹುದು ಆದರೆ ಆತನು ನಮ್ಮಲ್ಲಿ ಯಾವ ಸಾಮರ್ಥ್ಯ ಅಥವಾ ಕೌಶಲ್ಯಗಳನ್ನು ನೋಡುವದಿಲ್ಲ ಎಂದು ಮರೆಯಬೇಡಿರಿ. ನಿಮ್ಮ ಜೀವಿತವನ್ನು ಉಪಯೋಗ ಮಾಡಲು ಅದು ಪರಿಪೂರ್ಣವಾಗಿರಬೇಕೆಂದು ಯೇಸು ಕ್ರಿಸ್ತನು ಬಯಸುವದಿಲ್ಲ ಬದಲಾಗಿ ಆತನು ನಿಮ್ಮಲ್ಲಿ ವಿಧೇಯತೆಯನ್ನು ಬಯಸುವವನಾಗಿದ್ದಾನೆ. ಮೋಶೆ ನಾನು ಮಾತುಬಾರದವನು ಎಂದು ಹೇಳಿದನು, ಗಿದ್ಯೋನ್ಯನು ಪರಿಚಿತನಾಗಿರಲಿಲ್ಲ ಮತ್ತು ದಾವೀದನು ಚಿಕ್ಕವನಾಗಿದ್ದನು!





| | | | | | | | | | | | |
|---|---|---|---|---|---|---|---|---|---|---|---|
| ಸ್ವೈ | ನಿ | ಕ | ಸ | ರ್ಜ | ಟ್ | ರಾ | ಗು | ಮೂ | ದು | ರ | ಯ |
| ರ್ | ರ | ಪ್ರೀ | ತಿ | ಜ್ | ಲ | ಬ | ರ | ಉ | ಬಿ | ಕ್ಷ | ಳು |
| ವಿ | ಕು | ಮ | ರ | ನು | ದು | ಳ್ಳಿ | ಗ | ಕು | ಜ | ಪ | ಡಿ |
| ಕ್ಷ | ಧೇ | ನೆ | ಲೆ | ಗೊಂ | ಡಿ | ರು | ವ | ದು | ಲೆ | ಯ | ರು |
| ಲ | ಯ | ಯ | ಇ | ರಿ | ಹೂ | ಲ | ವೊ | ರ | ವೇ | ಇ | ಳಿ |
| ಯ | ಲ | ಮ | ರಾ | ಜ್ಞೆ | ವಿ | ಹುಂ | ಜ | ಕ್ಷ | ಸ | ಯ | ಅ |
| ಪೇ | ತ್ರ | ಲೆ | ಗೊಂ | ಗು | ನಾ | ವು | ಕಿ | ರಾ | ತ್ಮ | ರು | ಜ್ಞೆ |
| ರ | ಳು | ಉ | ಳಿ | ಯು | ವ | ದು | ಮ | ಹ್ವ | ದ | ಯ | ಗ |
| ಕ್ರಿ | ಸ್ತ | ನು | ಕ್ಷ | ತ | ಜ | ದು | ವಿ | ಕೊಂ | ಬೆ | ಗ | ಳು |
| ವ | ಳ | ಡ | ನ | ಪೇ | ತ್ರ | ಬ | ಲಿ | ಲೆ | ಮ | ರ | ದು |

# ಪೇತ್ರನೊಂದಿಗೆ ವಚನಭೋಜನ ೩

## ಮೀನು

ಸಾಮಗ್ರಿಗಳು:



- ನಿಮ್ಮ ಇಷ್ಟದಂತೆ ಸಿದ್ಧಪಡಿಸಲಾಗಿರುವ ಚೌಕಾಕಾರದಲ್ಲಿರುವ ಬ್ರೆಡ್.
- ಅರ್ಧ ಚಂದ್ರನ ಆಕಾರದಲ್ಲಿ ಕೊಯ್ದಿರುವ ಕ್ಯಾರೆಟ್.
- ಸೌತೆಕಾಯಿಗಳನ್ನು ಸಣ್ಣ ಗೆರೆಗಳ ಹಾಗಿ ಕೊಯ್ಯಬೇಕು.
- ಬೇಯಿಸಿರುವ ಮೊಟ್ಟೆಯನ್ನು ವೃತ್ತಾಕಾರದಲ್ಲಿ ಕೊಯ್ಯಬೇಕು

ಆಯ್ಕೆ: ಕೊಯ್ದಿರುವ ಕಪ್ಪು ಆಲೀವ್

ಸೂಚನೆಗಳು:

- ಚೌಕಾಕಾರದಲ್ಲಿ ಸಿದ್ಧಪಡಿಸಲಾಗಿರುವ ಬ್ರೆಡ್ ಅನ್ನು ನಿಮ್ಮ ವಿದ್ಯಾರ್ಥಿಗಳಿಗೆ ಕೊಡಿರಿ.
- ನಿಮ್ಮ ಮೀನನ್ನು ಅಲಂಕರಿಸಲು ನೀವು ಕ್ಯಾರೆಟ್, ಸೌತೇಕಾಯಿ, ಬೇಯಿಸಿದ ಮೊಟ್ಟೆ ಅಥವಾ ಯಾವುದೇ ತರಕಾರಿಯನ್ನು ಉಪಯೋಗಿಸಬಹುದು.
- ಮೊಟ್ಟೆ ಕಣ್ಣುಗಳಿಗೆ, ಕ್ಯಾರೆಟ್ ಚಿಪ್ಪುಗಳಿಗೆ ಮತ್ತು ಸೌತೇಕಾಯಿ ರೆಕ್ಕೆಗಳಿಗೆ ಉಪಯೋಗಿಸಬಹುದು.
- ಎಲ್ಲರೂ ತಿನ್ನೋಣ!

## ಪೇತ್ರನೊಂದಿಗೆ ನಾಟಕ

ಪೇತ್ರನು ತನ್ನ ಕರೆಯನ್ನು ಹೊಂದಿದನು (ಮತ್ತಾಯ ೪:೧೮-೨೨)




ದೃಶ್ಯ:

ಪೇತ್ರನು ತಾನು ಯೇಸುವನ್ನು ಹೇಗೆ ಭೇಟಿ ಮಾಡಿದನು ಎಂಬದನ್ನು ಪ್ರೇಕ್ಷಕರಿಗೆ ಪ್ರಕಟಿಸಲು ಬಯಸಿದನು. ಈ ಕಾರ್ಯವು ಬಹಳ ಸರಳವಾಗಿದೆ, ಯಾಕಂದರೆ ಪೇತ್ರನು ಮಾತನಾಡುವಾಗ ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸುತ್ತಿರುತ್ತಾನಷ್ಟೇ. (ಯೇಸು ಕ್ರಿಸ್ತನು ಇಂದು ಅಥವಾ ನಾಳೆ ನಟಿಸುವದಿಲ್ಲ)

- ನಾನು ನನ್ನ ಸ್ಮಾರ್ಟ್ ೫ಜಿ ಬ್ರೌಸ್ ಮಾಡುತ್ತಾ, ನನ್ನ ಕೆಲಸಕ್ಕೆ ಬೇಕಾದ ಅಪಡೇಟ್ ಗಾಗಿ ಗೂಗಲ್ ನಲ್ಲಿ ಕೆಲವು ಸಾಮಗ್ರಿಗಳನ್ನು ಹುಡುಕುತ್ತಿದ್ದೆನು.
- ನಿಮ್ಮಲ್ಲಿ ಕೆಲವರಿಗೆ ಗೊತ್ತಿರುವ ಪ್ರಕಾರ ನಾನು ಆನ್ ಲೈನ್ ನಲ್ಲಿ ಆಟವಾಡುವವರಿಗೆ ಮತ್ತು ಆಟವಾಡುವವರಿಗೆ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಲು ಸಹಾಯ ಮಾಡುವ ಕೆಲಸ ಮಾಡುತ್ತಿದ್ದೇನೆ.
- ನಾನು ಅಂತರ್ಜಾಲದಲ್ಲಿರುವಾಗ ಯೇಸು ಕ್ರಿಸ್ತನೆಂಬ ಒಬ್ಬ ವ್ಯಕ್ತಿಯನ್ನು ನೋಡಿದೆನು, ಆತನಿಗೆ ಅದ್ಭುತವಾದ ಸಂಪರ್ಕವಿರುವ ಕ್ರೈಸ್ತ ಪುಟ ಇರುವದನ್ನು ಗಮನಿಸಿದೆನು. ಆತನ ಪುಟದಲ್ಲಿ ಹಿಲ್ ಸಾಂಗ್ ಸಂಗೀತ, ಜಾನ್ ಮ್ಯಾಕ್ಸ್ ವೆಲ್ ಮತ್ತು ರಿಕ್ ವ್ಯಾರೆನ್ ರಂಥ ಬರಹಗಾರರ ಪುಸ್ತಕಗಳು ಹಾಗೂ ಬೋಧನೆಗಳು ಇದ್ದವು.

- ನಾನು ಯೇಸು ಕ್ರಿಸ್ತನೊಂದಿಗೆ ವಾಟ್ಸಪ್ ನಲ್ಲಿ ಚಾಟ್ ಮಾಡುತ್ತಿದ್ದಾಗ, ತನ್ನ ಫ್ಯಾನ್ ಪೇಜ್ ಲೈಕ್ ಮಾಡುವಂತೆ ಮತ್ತು ಆಟವಾಡುವ ಜನರಿಗೆ ಸಹಾಯ ಮಾಡುವದು ಮಾತ್ರವಲ್ಲ ಬದಲಾಗಿ ಜನರಿಗೆ ಅವರ ನಂಬಿಕೆಯ ವಿಷಯದಲ್ಲಿಯೂ ಸಹಾಯ ಮಾಡುವಂತೆ ಆತನು ನನ್ನನ್ನು ಆಹ್ವಾನಿಸಿದನು.
- ಅದೇ ದಿನ ನಾನು ನನ್ನ ಕೆಲಸಕ್ಕೆ ರಾಜೀನಾಮೆ ನೀಡಿದೆನು ಮತ್ತು ನನಗೆ ಯಾವುದೇ ಸಂಬಳ ಇಲ್ಲದಿದ್ದರೂ ಯೇಸು ಕ್ರಿಸ್ತನ ಜೊತೆಯಲ್ಲಿ ಕೆಲಸಕ್ಕೆ ಸೇರಿಕೊಂಡೆನು. ಆತನು ನನಗೆ ಕೊಟ್ಟ ಕೆಲಸ ಮಾಡಲು ನಾನು ಎಲ್ಲವನ್ನೂ ತ್ಯಾಗ ಮಾಡಿದೆನು.
- ಆ ದಿನದಿಂದ ಯೇಸು ಕ್ರಿಸ್ತನ ಶಿಷ್ಯನಾಗಿ ನನ್ನ ಜೀವಿತ ಅದ್ಭುತವಾಗಿದೆ! ಆಗಿನ ದಿವಸಗಳಲ್ಲಿ ಯೇಸು ಕ್ರಿಸ್ತನು ಎಷ್ಟು ಪ್ರಸಿದ್ಧನು ಎಂಬದು ನನಗೆ ಗೊತ್ತಿರಲಿಲ್ಲ ಆದರೆ ಈಗ ನನಗೆ ಗೊತ್ತಾಗಿದೆ. ನಾವು ಎಲ್ಲೇ ಹೋದರೂ ಜನ ಆತನನ್ನು ಪ್ರೀತಿಸುತ್ತಾರೆ ಮತ್ತು ಆತನು ಮಹಾನ್ ಅಂತರಾಷ್ಟ್ರೀಯ ನಾಯಕನೆಂದು ಯೋಚಿಸುತ್ತಾರೆ.

## ಕಣಜದ ಕರಕುಶಲತೆಗಳು ೩



### ಹೊಲ

೧. ಹೊಲವನ್ನು ಡೌನ್ ಲೋಡ್ ಮಾಡಿಕೊಳ್ಳಿರಿ ಮತ್ತು ಕಾಪಿ ಮಾಡಿಕೊಳ್ಳಿರಿ. ಬೇಕಾದರೆ ಹೊಲವನ್ನು ಕೆಂಪು ಹಾಳೆಯ ಮೇಲೆ ಪ್ರಿಂಟ್ ಮಾಡಿಸಿಕೊಳ್ಳಿರಿ. ವಚನವನ್ನು ಬಿಳಿ ಹಾಳೆಯ ಮೇಲೆ ಪ್ರಿಂಟ್ ಮಾಡಿಸಿಕೊಳ್ಳಿರಿ.

೨. ಒಣಹುಲ್ಲು ಮಾಡಲು, ಹಳದಿ ಬಣ್ಣದ ರಿಬ್ಬನ್ ಅನ್ನು ೬ಸೆಮಿ ಉದ್ದದಷ್ಟು ಆರು ತುಂಡು ಮಾಡಿಕೊಳ್ಳಿರಿ ಮತ್ತು ಎರಡೂ ಕಡೆಗಳಲ್ಲಿ ಮೂರು ಮೂರು ತುಂಡುಗಳನ್ನು ಅಂಟಿಸಿರಿ ಮತ್ತು ೨.೫ ಸೆಮಿ ಉದ್ದದ ೬ ತುಂಡುಗಳನ್ನು ಚಿಕ್ಕ ಕಿಟಕಿಗೆ ಅಂಟಿಸಿರಿ.

೩. ಹಾಳೆಯ ಮೇಲೆ ಸತ್ಯವೇದದ ವಾಕ್ಯವನ್ನು ಬರೆದು ಅದಕ್ಕೆ ಬಣ್ಣ ಹಚ್ಚಿ ಹಿಂದಿರುವ ದೊಡ್ಡ ಚತುಷ್ಕೋನಾಕೃತಿಗೆ ಅಂಟಿಸಿರಿ.

೪. ಬೇಕಾದರೆ ಅಲಂಕಾರ ಮಾಡಲು ಗ್ಲಿಟರ್ ಬಳಸಿರಿ.

### ಚಲನೆಯೊಂದಿಗೆ ಕೈ ಕುಲುಕುವುದು

ದಿನ ೩: ಮೀನು




ನಿಮ್ಮ ಎರಡೂ ಕೈಗಳನ್ನು ಜೋಡಿಸಿರಿ
(ಮೀನು ಈಜುವ ರೀತಿಯಲ್ಲಿ ಆಡಿಸಿರಿ . . .)
ಮೂರು ಸಲ ಚಪ್ಪಾಳೆ ಹೊಡೆಯಿರಿ, ಕಡೆಯ ಸಲ ಒಟ್ಟಾಗಿ ಜೋಡಿಸಿರಿ
ನಿಮ್ಮ ಎಡಗೈಗಳನ್ನು ಒಟ್ಟಾಗಿಟ್ಟುಕೊಳ್ಳಿರಿ
ಬಲಗೈ ಮೇಲೆ, ಮಧ್ಯದಲ್ಲಿ, ಕೆಳಗೆ ಮತ್ತು ನಡುವೆ ಚಲಿಸಬೇಕು.

## ದ್ರಾಕ್ಷೆತೋಟದ ಆಟಗಳು ೩

### ಅಡೆತಡೆಗಳ ಓಟ






ತರಗತಿಯ ಮೊದಲೇ ಅಡೆತಡೆಗಳಿರುವ ಟ್ರಾಕ್ ಸಿದ್ಧಪಡಿಸಿರಿ. ಈ ಸಾಮಗ್ರಿಗಳನ್ನು ನೀವು ಉಪಯೋಗಿಸಬಹುದು: ಪೇಪರ್ ಚೀಲಗಳು, ಇದರೊಳಗೆ ಪ್ರತಿಯೊಂದು ಮಗು ತನ್ನ ಕಾಲನ್ನು ಹಾಕಬೇಕು ಮತ್ತು ಹೊರಗೆ ತೆಗೆಯಬೇಕು; ಕೆರೆಯನ್ನು ಮಾದಲು ದಾರದಿಂದ ವೃತ್ತವನ್ನು ಗುರುತು ಹಾಕಿರಿ, ಮಕ್ಕಳು ಅದರೊಳಗೆ ಜಿಗಿಯಬೇಕು; ಉಪಯೋಗಿಸಿ ಬಿಸಾಡುವ ತಟ್ಟೆಗಳಿಂದ ಮಾರ್ಗವನ್ನು ರೂಪಿಸಿರಿ, ಮಕ್ಕಳು ಪ್ರತಿಯೊಂದು ತಟ್ಟೆಯ ಮೇಲೆಯೂ ಕಾಲಿಡಬೇಕು; ಮರದ ತುಂಡುಗಳ ರಾಶಿ ಹಾಕಿರಿ, ಮಕ್ಕಳು ಅದನ್ನು ದಾಟಿ ಹೋಗಬೇಕು; ವಿವಿಧ ಎತ್ತರದಲ್ಲಿ ಮರಕ್ಕೆ ಬಲೂನ್ ಗಳನ್ನು ಕಟ್ಟಿರಿ, ಅದನ್ನು ತಾಗದೆ ಮಕ್ಕಳು ಮುಂದೆ ಹೋಗಬೇಕು. ಮಕ್ಕಳು ತಂಡವಾಗಿ ಅಥವಾ ವ್ಯಕ್ತಿಗತವಾಗಿ ಅಡೆತಡೆಗಳ ಓಟವನ್ನು ಪೂರ್ತಿಗೊಳಿಸಬೇಕು, ಅದಕ್ಕೆ ಎಷ್ಟು ಸಮಯ ಹಿಡಿಯುತ್ತದೆ ಎಂಬದನ್ನು ಬರೆದಿಟ್ಟುಕೊಳ್ಳಿರಿ. ಇಡೀ ತಂಡ ಭಾಗವಹಿಸುವಂತೆ ನೋಡಿಕೊಳ್ಳಿರಿ; ನೀವು ಒಬ್ಬರಿಗೊಬ್ಬರು ಸಹಾಯ ಮಾಡಬಹುದು. ಬೇರೆ ಚಟುವಟಿಕೆಗಳನ್ನು ಸೇರಿಸಿಕೊಳ್ಳಬಹುದು; ಉದಾ. ಕಪ್ಪೆ ಜಿಗಿತ, ವೃತ್ತ ಮಾಡುವದು ಇತ್ಯಾದಿ. ಮೊದಲು ಮುಗಿಸುವ ತಂಡ ಗೆಲ್ಲುತ್ತದೆ.

## ಸಂಗೀತ ಮತ್ತು ಕೈಗೊಂಬೆ ಆಟದೊಂದಿಗೆ ಮುಗಿಸುವದು ೩



ಕುದುರೆ: ಹುಂಜ ನೋಡು! ನಾನು ವಿಬಿಎಸ್ ಮಕ್ಕಳಿಗೆ ಕೇಕ್ ತಂದಿದ್ದೇನೆ! (ಕುದುರೆ ಸಪಾಟವಾದ ಕೇಕ್ ಹಿಡಿದುಕೊಂಡು ಬರುತ್ತದೆ. ನೀವು ಕಾರ್ಡ್ ಬೋರ್ಡ್ ಅನ್ನು ವೃತ್ತಾಕಾರದಲ್ಲಿ ಕತ್ತರಿಸಿ ಅದನ್ನು ಉತ್ತಮವಾಗಿ ಅಲಂಕರಿಸಬೇಕು.)

ಹುಂಜ: ಆದರೆ ಇದು ಸಪಾಟವಾಗಿ ಕಾಣುತಿದೆ, ಇದರ ಮೇಲಿರುವ ಅಲಂಕಾರವೂ ಅಷ್ಟೇನು ಚೆನ್ನಾಗಿಲ್ಲ. ಬೇರೆ ಕೇಕ್ ಗಳ ಹಾಗೆ ಇದು ಯಾಕೆ ಉಬ್ಬಿಕೊಳ್ಳಲಿಲ್ಲ?

ಕುದುರೆ: ನಾನು ನನ್ನ ಫೇಸ್ ಬುಕ್ ವೀಡಿಯೋದಲ್ಲಿ ಕೇಕ್ ಮಾಡುವದು ಹೇಗೆ ಎಂದು ನೋಡುತ್ತಿದ್ದೆನು, ಆಗ ವಿಬಿಎಸ್ ಮಕ್ಕಳಿಗೆ ಯಾಕೆ ಕೇಕ್ ಮಾಡಬಾರದು ಎಂಬ ಆಲೋಚನೆ ನನಗೆ ಬಂದಿತು, ಆದ್ದರಿಂದ ನಾನು ಓವನ್ ಬಿಸಿ ಮಾಡಿ, ಬೇಕಾದ ಎಲ್ಲಾ ಪದಾರ್ಥಗಳನ್ನು ತೆಗೆದುಕೊಂಡೆನು ಮತ್ತು ಕೇಕ್ ಮಾಡಲು ಪ್ರಾರಂಭಿಸಿದೆನು.

ಹುಂಜ: ಕುದುರೆ, ನೀನು ಎಲ್ಲಾ ಪದಾರ್ಥಗಳನ್ನು ಉಪಯೋಗಿಸಿ, ಹೇಳಿದ ಎಲ್ಲಾ ವಿಷಯಗಳಿಗೆ ವಿಧೇಯನಾಗಿ ನಡೆದುಕೊಂಡಿಯೋ?

ಕುದುರೆ: ನನ್ನ ಹತ್ತಿರ ಬೇಕಿಂಗ ಪೌಡರ್ ಮತ್ತು ವೆನಿಲ್ಲಾ ಇರಲಿಲ್ಲವಾದ್ದರಿಂದ ನಾನು ನನ್ನ ಇಷ್ಟದ ಮೇರೆಗೆ ಕ್ರಿಯಾತ್ಮಕವಾಗಿ ಮಾಡಲು ಬಯಸಿದೆನು. ಒಂದುವೇಳೆ ಈ ಪದಾರ್ಥಗಳನ್ನು ಹಾಕದಿದ್ದರೂ ಯಾರಿಗೂ ಗೊತ್ತಾಗುವದಿಲ್ಲ ಎಂದು ನೆನೆಸಿದೆನು. ಹಾಗೆಯೇ ಅಲಂಕಾರದ ಭಾಗದಲ್ಲಿಯೂ ಕೆಲವು ವಿಷಯಗಳನ್ನು ಬಿಟ್ಟುಬಿಟ್ಟಿದ್ದೇನೆ.

ಹುಂಜ: ಕುದುರೆ ಇದನ್ನೇ ಅವಿಧೇಯತೆ ಎಂದು ಕರೆಯುತ್ತಾರೆ ಮತ್ತು ನಾವು ಯೋಹಾನ ೧೫:೧೦ ಕಲಿತುಕೊಂಡದ್ದನ್ನು ನೆನಪಿಗೆ ತಂದುಕೋ, "ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ."

ಕುದುರೆ: ಆದ್ದರಿಂದ, ಯೇಸು ಕ್ರಿಸ್ತನು ತಾನೇ ತನ್ನ ತಂದೆಗೆ ವಿಧೇಯನಾಗಿ ನಡೆದುಕೊಂಡನೇ?

ಹುಂಜ: ಹೌದು, ನಾವೂ ಆತನ ಮಾದರಿಯನ್ನು ಅನುಸರಿಸಬೇಕು. ಇಲ್ಲವಾದರೆ, ಕೇಕ್ ಮಾಡುವಾಗ ನೀನು ಕೆಲವು ವಿಷಯಗಳನ್ನು ಅನುಸರಿಸಲಿಲ್ಲವಾದ್ದರಿಂದ ಏನಾಯಿತೆಂದು ನೋಡು.

ಕುದುರೆ: ಹೌದು! ದಯವಿಟ್ಟು ನನ್ನನ್ನು ಕ್ಷಮಿಸು! ನಾನು ಮಾಡಿದ ಕಪ್ ಕೇಕ್ ಗಳನ್ನು ತಿನ್ನದಿರುವದೇ ಒಳ್ಳೇದು.

ಹುಂಜ: ಅಯ್ಯೋ! ಈಗ ಹೇಳ್ತಿದ್ದೀಯಾ! ನಾನು ಈಗಾಗಲೇ ೩ ತಿಂದಿದ್ದೇನೆ!

ಕ್ದುರೆ: ಹಾಗಿದ್ದರೆ, ನೇರವಾಗಿ ವೈದ್ಯರ ಬಳಿಗೆ ಹೋಗು. ಚಾಕೊಲೇಟ್ ಮತ್ತು ಮಟ್ಟು ಎರಡೂ ಒಂದೇ ಬಣ್ಣದಲ್ಲಿರುತ್ತವೆ.

# ಪಾಠ ೪

## ಹೆಸರು ೪

ನಾನು ಕ್ರಿಯೆ ಮಾಡುವ ಆಯ್ಕೆ ಮಾಡಿಕೊಂಡಿದ್ದೇನೆ

ಪೇತ್ರನು ಅಧಿಕಾರದಿಂದ ಪ್ರಸಂಗ ಮಾಡಿದನು


ಅಪೊ ೨:೧೪-೪೧

## ವಚನ ೪

"ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ, ನಾನು ನಿಮ್ಮನ್ನು ಆರಿಸಿತೆಗೆದುಕೊಂಡೆನು. ನೀವು ಹೊರಟುಹೋಗಿ ಫಲ ಕೊಡುವವರಾಗಬೇಕೆಂತಲೂ ನೀವು ಕೊಡುವ ಫಲವು ನಿಲ್ಲುವಂಥದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ."

ಯೋಹಾನ ೧೫:೧೬

## ಉಪಾಯ ೪



ಈ ಉಪಾಯದಲ್ಲಿ ನಿಮಗೆ ೨ ಒಂದೇ ತರಹದ ಲಕೋಟೆಗಳು ಬೇಕು. ದೊಡ್ಡ ಗುಂಪು ಇರುವದಾದರೆ ಕಾರ್ಡ್ ಸ್ಟಾಕ್ ಹಾಳೆಯಿಂದ ದೊಡ್ಡ ಲಕೋಟೆಯನ್ನು ಮಾಡುವದು ಉತ್ತಮವಾಗಿರುತ್ತದೆ. ನೀವು ನಿಮ್ಮ ಮ್ಯಾಜಿಕ್ ಲಕೋಟೆ ಮಾಡಬೇಕಾದರೆ, ೨ ಏಕ ರೀತಿಯ ಲಕೋಟೆಗಳನ್ನು ಉಪಯೋಗಿಸಿರಿ. ಮುಂಭಾಗವನ್ನು ಕತ್ತರಿಸಿರಿ ಮತ್ತು ಅದನ್ನು ಮತ್ತೊಂದರೊಳಗೆ ಹಾಕಿರಿ ಹಾಗೂ ಅದರೊಂದಿಗೆ ಕೆಲವು ಪ್ರಮುಖವಾದ ಕೆಲಸಗಳು ಮತ್ತು ಕ್ರಿಯೆಗಳ ಹೇಳಿಕೆಗಳನ್ನು ಮುದ್ರಿಸಿರುವ ಬಣ್ಣದ ಹಾಳೆಗಳನ್ನು ಅದರೊಳಗಿಡಿರಿ. ಲಕೋಟೆಯು ಖಾಲಿಯಾಗಿದೆ ಎಂದು ನೀವು ತೋರಿಸಬಹುದು. ನಿಗದಿತ ಸಮಯದಲ್ಲಿ ನೀವು ಲಕೋಟೆಯ ಒಂದು ಭಾಗವನ್ನು ಮುರಿದು ಒಳಗಿರುವ ಬಣ್ಣದ ಹಾಳೆಗಳನ್ನು ಹೊರಗೆ ತೆಗೆಯಿರಿ. ಈ ಉಪಾಯವು ಸಫಲವಾಗಬೇಕಾದರೆ, ನಿಮ್ಮ ಬಳಿ ಖಾಲಿಯಿರುವ ಒಂದು ಲಕೋಟೆ ಮಾತ್ರವೇ ಇದೆ ಎಂಬದಾಗಿ ನೀವು ತೋರ್ಪಡಿಸಿಕೊಳ್ಳಬೇಕು. ನೀವು ರಹಸ್ಯವಾಗಿ ಇದನ್ನು ಹೆಚ್ಚು ಅಭ್ಯಾಸ ಮಾಡಿರಿ ಆಗ ನಿಮ್ಮ ವಿಬಿಎಸ್ ನಲ್ಲಿ ಉತ್ತಮವಾಗಿ ಮಾಡಲು ಸಾಧ್ಯವಾಗುತ್ತದೆ.

## ಮುಖ್ಯ ಪಾಠ ೪

“ಹೊಲಕ್ಕೆ ಹೋಗೋಣ” ವಿಬಿಎಸ್ ಗೆ ಸ್ವಾಗತ, ನಮ್ಮ ಸಮಯವು ಮುಗಿಯುತ್ತಾ ಇರುವದರಿಂದ, ಈ ವಾರದ ಪಾಠಗಳು ನಿಮ್ಮ ನೆನಪಿನಲ್ಲಿವೆಯೇ ಎಂದು ನೋಡಿಕೊಳ್ಳೋಣ. ದ್ರಾಕ್ಷೇಬಳ್ಳಿ ಯಾರು? ಯೇಸು ಕ್ರಿಸ್ತನು! ಕೊಂಬೆಗಳು ಯಾರು? ನಾವು! ನಾವೇನು ಮಾಡಬೇಕು? ನೆಲೆಗೊಂಡಿರಬೇಕು!

ಈಗ ವಚನದ ಮತ್ತೊಂದು ಭಾಗವನ್ನು ನೋಡುವ ಸಮಯ ಬಂದಿದೆ . . . “ನಾನೇ ದ್ರಾಕ್ಷೇಬಳ್ಳಿ ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; . . .” ಇದರ ಅರ್ಥ ಏನು??? ನಾವು ಗಿಡಗಳಲ್ಲದಿರುವಾಗ, ಲೋಕದಲ್ಲಿ ಫಲ ಕೊಡಬೇಕೆಂದರೆ ಇದರ ಅರ್ಥ ಏನು???

ಒಂದು ಗಿಡ ಯಾವ ರೀತಿ ಕಾರ್ಯನಿರ್ವಹಿಸುತ್ತದೆ ಎಂದು ನೋಡುವ ಮೂಲಕ ಪ್ರಾರಂಭಿಸೋಣ. ಈಗಾಗಲೇ ನಾವು ಹೇಳಿರುವ ಪ್ರಕಾರ, ಫಲ ಕೊಂಬೆಗಳಿಂದ ಬರುತ್ತದೆಯೇ ಹೊರತು ಬಳ್ಳಿಯಿಂದ ಬರುವದಿಲ್ಲ. ಯೇಸು ಕ್ರಿಸ್ತನು ಪರಲೋಕದಿಂದ ಫಲವನ್ನುಂಟು ಮಾಡಲು ಶಕ್ತನಾಗಿದ್ದಾನೆ, ಆದರೆ ಅದು ದೇವರ ಯೋಜನೆಯಲ್ಲ, ಯಾಕಂದರೆ ಬಳ್ಳಿಯು ಫಲವನ್ನು ಕೊಡುವದಿಲ್ಲ. ನಾವು ಫಲಕೊಡುವವರಾಗುವಂತೆ ಯೇಸು ಕ್ರಿಸ್ತನು ನಮಗೆ ಸಹಾಯ ಮಾಡುತ್ತಾನೆ, ಆದರೆ ಅದು ನಮ್ಮ ಮಾತುಗಳು ಮತ್ತು ಕ್ರಿಯೆಗಳಿಂದ ಬರಬೇಕು. ನಾವು ಕ್ರಿಯೆ ಮಾಡುವ ಆಯ್ಕೆ ಮಾಡಿಕೊಳ್ಳಬೇಕು!



ಗಿಡ ತನ್ನ ಕೊಂಬೆಗಳಲ್ಲಿ ಫಲ ಕೊಡಬೇಕೆಂದರೆ ಪ್ರಾಮುಖ್ಯವಾಗಿರುವ ಸಂಗತಿ ಏನು??? ಮೊದಲನೆಯದಾಗಿ, ನೀವು ಆರೋಗ್ಯವಂತರಾಗಿರಬೇಕು. ಎರಡನೆಯದಾಗಿ, ನಾವು ಕಾಯುವವರಾಗಿರಬೇಕು. ಬಳ್ಳಿಯಲ್ಲಿ ಫಲ ವಿವಿಧ ಸಮಯಗಳಲ್ಲಿ ಬರುತ್ತವೆ, ಉದಾಹರಣೆಗೆ ವರ್ಷದ ಪ್ರತಿಯೊಂದು ವಾರವು ಹಣ್ಣಾಗಿರುವ ದ್ರಾಕ್ಷೆ ನಮಗೆ ಸಿಗುವದಿಲ್ಲ. ಫಲ ಬಿಡಲು ನಿರ್ದಿಷ್ಟವಾದ ಕಾಲಗಳಿವೆ. ಫಲವು ಕೊಂಬೆಗಳಲ್ಲಿ ಬೆಳೆಯುವ ಸುಂದರವಾದ ಭಾಗಗಳಾಗಿವೆ ಯಾಕಂದರೆ ಅದಕ್ಕೆ ನೀರು, ಸೂರ್ಯನ ಬೆಳಕು ಮತ್ತು ಒಳ್ಳೆಯ ಮಣ್ಣು ಸಿಗುತ್ತದೆ. ನಂತರ, ನಮ್ಮೊಳಗಿರುವ ಫಲವು ನಮ್ಮ ಜೀವಿತಗಳಿಂದ ಬರುವ ಸ್ವಾದಿಷ್ಟವಾದ ಸಂಗತಿಗಳಾಗಿವೆ ಅಂದರೆ ಒಳ್ಳೆಯ ಕ್ರಿಯೆಗಳು, ವಿಶೇಷವಾದ ಕಾರ್ಯಗಳು, ಒಳ್ಳೆಯ ಮನೋಭಾವನೆಗಳು ಮತ್ತು ಒಳ್ಳೇತನದ ಎಲ್ಲಾ ರೀತಿಯ ವಿಚಾರಗಳು. ನಾವು ಎಲ್ಲಾ ರೀತಿಯ ಒಳ್ಳೆಯ ಕಾರ್ಯಗಳನ್ನು ಮಾಡಬಹುದಾಗಿದೆ ಮತ್ತು ನಾವು ದ್ರಾಕ್ಷೆಬಳ್ಳಿಯಾಗಿರುವ ಯೇಸು ಕ್ರಿಸ್ತನಲ್ಲಿ ನೆಲೆಯಾಗಿರುವದಾದರೆ ಅವುಗಳು ಅತ್ಯಂತ ಸುಲಭವಾಗಿರುತ್ತವೆ!

ಇಂದಿನ ವಾಕ್ಯವನ್ನು ನೋಡಿರಿ: ಯೋಹಾನ ೧೫:೧೬ ಹೇಳುವದೇನೆಂದರೆ, “ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ, ನಾನು ನಿಮ್ಮನ್ನು ಆರಿಸಿತೆಗೆದುಕೊಂಡೆನು. ನೀವು ಹೊರಟುಹೋಗಿ ಫಲ ಕೊಡುವವರಾಗಬೇಕೆಂತಲೂ ನೀವು ಕೊಡುವ ಫಲವು ನಿಲ್ಲುವಂಥದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ.” ನಾವು ನಮ್ಮ ಜೀವಿತಗಳಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡಲು ದೇವರು ನನ್ನನ್ನು ಮತ್ತು ನಿಮ್ಮನ್ನು ಆರಿಸಿಕೊಂಡಿದ್ದಾನೆ, ಆದ್ದರಿಂದ ನಾವು ಆತನಲ್ಲಿ ನೆಲೆಗೊಂಡಿರುವಾಗ ಅವುಗಳನ್ನು ಮಾಡಲು ಆತನು ನಮಗೆ ಬಲ ಹಾಗೂ ಆಲೋಚನೆಗಳನ್ನು ಕೊಡುತ್ತಾನೆ.

**(ಉಪಾಯ)**

ಅನೇಕ ಜನರು ಕ್ರೈಸ್ತರಾಗಿರುವದು ಬೇಸರ ಹುಟ್ಟಿಸುತ್ತದೆ ಮತ್ತು ನಮಗೆ ಮಡಲು ಏನೂ  ಇರುವದಿಲ್ಲ ಎಂದು ಯೋಚಿಸುತ್ತಾರೆ. ಸಂಪೂರ್ಣ ಖಾಲಿಯಾಗಿರುವಂತೆ ಕಾಣಿಸುವ ಈ ಲಕೋಟೆಯ ಹಾಗೆ ಎಂಬದಾಗಿ ಅಂದುಕೊಳ್ಳುತ್ತಾರೆ! ಆದರೆ ಇದು ತಪ್ಪು ತಿಳುವಳಿಕೆಯಾಗಿದೆ! ದೇವರು ನಾವು ಮಾಡಬೇಕಾಗಿರುವ ವಿಶೇಷವಾದ ಕಾರ್ಯಗಳನ್ನು ನಮಗೆ ಸೂಚಿಸಿದ್ದಾನೆ! (ಲಕೋಟೆಯ ಮತ್ತೊಂದು ಭಾಗವನ್ನು ತೆರೆಯಿರಿ ಮತ್ತು ಬಣ್ಣದ ಹಾಳೆಗಳನ್ನು ಹೊರಗೆ ತೆಗೆಯಿರಿ. ನಾವು ಮಾಡಬಹುದಾದ ಕೆಲವು ಕಾರ್ಯಗಳನ್ನು ಓದಿರಿ ಮತ್ತು ಅವುಗಳನ್ನು ಪ್ರೇಕ್ಷಕರ ಕಡೆಗೆ ಎಸೆಯಿರಿ.)

ಯೋಹಾನ ೧೫:೮ ವಿಶೇಷವಾದ ಕಾರ್ಯವನ್ನೂ ಸೂಚಿಸುತ್ತದೆ; ಯೇಸು ಕ್ರಿಸ್ತನಲ್ಲಿ ನೆಲೆಗೊಂಡವರಾಗಿ, ಒಳ್ಳೆಯ ಫಲವನ್ನು ಕೊಡುವಾಗ ನಾವು ದೇವರಿಗೆ ಮಹಿಮೆ ಸಲ್ಲಿಸುವವರಾಗುತ್ತೇವೆ! ಪೇತ್ರನ ಜೀವಿತದ ಉದಾಹರಣೆಯನ್ನು ನಂತರದಲ್ಲಿ ನೋಡಿಕೊಳ್ಳೋಣ. ನಾನು ಮತ್ತು ನೀವುಗಳು ಇತರರಿಗಾಗಿ ಒಳ್ಳೆಯ ಕಾರ್ಯಗಳ ಮಾಡುವದನ್ನು ಜನರು ನೋಡುವಾಗ ದೇವರು ಒಳ್ಳೆಯವನು ಎಂದು ಹೇಳುತ್ತಾರೆ ಹಾಗೂ ಆತನನ್ನು ಘನಪಡಿಸುತ್ತಾರೆ. ಇದು ಅದ್ಭುತವಾದ ಸಂಗತಿಯಾಗಿದೆ!!! ನಾನು ಮತ್ತು ನೀವು ದೇವರಿಗೆ ಕೃತಜ್ಞತೆ ಸಲ್ಲಿಸಬಹುದು, ಫಲ ಕೊಡಬಹುದು ಮತ್ತು ನಮ್ಮ ನಂಬಿಕೆಯನ್ನು ಕ್ರಿಯೆಯಲ್ಲಿ ತೋರ್ಪಡಿಸಬಹುದು. ನಾವು ಕ್ರಿಯೆ ಮಾಡುವ ಆಯ್ಕೆ ಮಾಡಿಕೊಳ್ಳಬಹುದು!

# ಸರದಿ ಠಾಣೆಗಳು ೪

## ಸಿಲೋ ತರಗತಿ ೪

### ಪ್ರಶ್ನೆಗಳು ಮತ್ತು ಉತ್ತರಗಳು





೧. ಕ್ರೈಸ್ತರಿಗಿಂತ ಕ್ರೈಸ್ತರಲ್ಲದವರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳುವದರಿಂದ ನಿಮ್ಮ ಕ್ರಿಯೆಗಳ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗುತ್ತದೆ? ತನ್ನ ಮಕ್ಕಳು ಇತರೆ ಕ್ರೈಸ್ತರೊಂದಿಗೆ ಬೆರೆಯುವ ಆಲೋಚನೆಯನ್ನು ಖಂಡಿತವಾಗಿಯೂ ದೇವರು ಮೆಚ್ಚುವವಾನಾಗಿದ್ದಾನೆ. ನಿಮ್ಮ ಹಾಗೆಯೇ ಲೋಕವನ್ನು ನೋಡುವ ಇತರರ ಬೆಂಬಲ ನಿಮಗೆ ಅವಶ್ಯಕವಾಗಿದೆ. ಕ್ರೈಸ್ತರಲ್ಲದ ನಮ್ಮ ಸ್ನೇಹಿತರು ಕ್ರೈಸ್ತರ ಹಾಗೆ ಯಾವ ತೀರ್ಮಾನಗಳನ್ನೂ ತೆಗೆದುಕೊಳ್ಳುವದಿಲ್ಲ. ಇದರ ಅರ್ಥ ಕ್ರೈಸ್ತ ಸ್ನೇಹಿತರು ಪರಿಪೂರ್ಣತೆಯುಳ್ಳವರು ಅಥವಾ ಯಾವುದೇ ತಪ್ಪುಗಳನ್ನು ಮಾಡುವದಿಲ್ಲ ಅಥವಾ ನಿಮಗೆ ನಿರಾಸೆ ಮಾಡುವದಿಲ್ಲ ಎಂಬದಾಗಿಯಲ್ಲ. ಆದರೆ ನಿಜವಾಗಿಯೂ ದೇವರನ್ನು ಹಿಂಬಾಲಿಸುವವರು ಸ್ಥಿರತೆಯುಳ್ಳ ಸ್ನೇಹಿತರಾಗಿರುತ್ತಾರೆ ಮತ್ತು ನಿಮಗೆ ಅವಶ್ಯವಿರುವ ಸಮಯದಲ್ಲಿ ದೇವರ ವಾಕ್ಯದನುಸಾರವಾಗಿ ನಿಮಗೆ ಸಲಹೆಗಳನ್ನು ಕೊಡುತ್ತಾರೆ.

೨. ನಿಮ್ಮ ಜೀವಿತದಲ್ಲಿ ಕಡೆಯ ತನಕ ನಿಲ್ಲುವ ಫಲಗಳನ್ನು ಕೊಡುವದೆಂದರೆ ಏನು? ನಾವು ಕಡೆಯ ತನಕ ನಿಲ್ಲುವ ಫಲಗಳನ್ನು ಕೊಡಬೇಕು ಎಂದು ಸತ್ಯವೇದದಲ್ಲಿ ಓದುವಾಗ, ನಾವು ಸುವಾರ್ತೆ ಸಾರಬೇಕು ಮತ್ತು ಜನರು ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಬೇಕು ಎಂಬದಾಗಿ ಊಹಿಸಿಕೊಳ್ಳುತ್ತೇವೆ. ಇದರೊಂದಿಗೆ ನಾವು ಒಳ್ಳೆಯ ಕಾರ್ಯಗಳನ್ನು ಮಾಡಬೇಕು, ನಮ್ಮ ಕ್ರಿಯೆಗಳನ್ನು ಬದಲಾಯಿಸಿಕೊಳ್ಳಬೇಕು, ಕೆಟ್ಟ ಸ್ವಭಾವಗಳನ್ನು

ಬಿಟ್ಟುಬಿಡಬೇಕು, ಇವುಗಳೇ ಫಲ ಕೊಡುವ ಮಾರ್ಗಗಳಾಗಿವೆ. ನಿಮ್ಮ ಅಜ್ಜಿಗೆ ಮನೆ ಕೆಲಸಗಳಲ್ಲಿ ಸಹಾಯ ಮಾಡಬೇಕು, ನಿಮ್ಮ ತಮ್ಮ ಹೋಮ್ ವರ್ಕ್ ಮುಗಿಸಲು ಸಹಾಯ ಮಾಡಬೇಕು ಅಥವಾ ನಿಮ್ಮ ಜೊತೆಯಲ್ಲಿ ಓದುವವನು ಬಡವನಾಗಿದ್ದರೆ ಅವನಿಗೆ ಸಹಾಯ ಮಾಡಬೇಕು.

೩. ನೀವು ಒಳ್ಳೆಯ ನಡತೆಯನ್ನು ಪ್ರದರ್ಶಿಸಿದಾಗ, ಅದರ ಮೂಲಕ ದೇವರು ಹಾಗೂ ಇತರರೊಂದಿಗಿನ ಸಂಬಂಧದ ಮೇಲೆ ಒಳ್ಳೆಯ ಪರಿಣಾಮವಾಗಿರುವ ಘಟನೆ ನಡೆದಿದ್ದರೆ ಅದನ್ನು ಹಂಚಿಕೊಳ್ಳಿರಿ. ಒಳ್ಳೆಯ ನಡತೆಯುಳ್ಳವರಾಗಿ ನಡೆದುಕೊಳ್ಳುವದು ನಾವು ಪ್ರತಿದಿನ ತೆಗೆದುಕೊಳ್ಳುವ ತೀರ್ಮಾನವಾಗಿದೆ, ಉದಾ. ಹಸು ಏನಾದರು ಮಗುವನ್ನು ಗುಮ್ಮಲು ಬಂದರೆ ಓಡಿ ಹೋಗುವ ಅಥವಾ ಬಚ್ಚಿಟ್ಟುಕೊಳ್ಳುವ ಬದಲು ಕಾಪಾಡುವದು. ನಾವು ಸರಿಯಾಗಿ ನಡೆದುಕೊಳ್ಳಲು ದೇವರು ನಮಗೆ ಸಹಾಯ ಮಾಡುತ್ತಾನೆ. ಅನೇಕ ಸಂದರ್ಭದಲ್ಲಿ ನಾವು ನಮ್ಮ ಗರ್ವವನ್ನು ಜಯಿಸಬೇಕಾಗುತ್ತದೆ. ಇದರಿಂದ ನಾವು ಭವಿಷ್ಯದಲ್ಲಿ ತಾಳ್ಮೆಯಿಂದ ಉತ್ತಮ ಹಾಗೂ ಅತ್ಯುತ್ತಮವಾದ ತೀರ್ಮಾನಗಳನ್ನು ತೆಗೆದುಕೊಳ್ಳಲು ನಮಗೆ ಸಹಾಯವಾಗುತ್ತದೆ.








| | | | | | | | | | | |
|---|---|---|---|---|---|---|---|---|---|---|
| ತ್ರಿ | ಥ್ | ಢೇ | ಭ | ಫು | ಲ | ಝು | ಢ | ಇ | ಣ್ | ಕೆ |
| ಜ್ | ಚ | ರ | ಕ್ಷ | ಣ | ಸ್ಥ | ಫ | ಯ | ಠ | ಸ್ಥ | ಪ್ರಾ |
| ಳ್ | ಥೀ | ಟು | ಗ್ | ನ | ಯೌ | ದ | ಶೀ | ಪ | ಗ | ಳು |
| ಬ | ಜ | ಗ | ವ | ಗ | ನಂ | ಝು | ಲ | ಸು | ಚ | ದ |
| ಯ್ | ದ | ಯೌ | ಫ | ಟಿ | ಬಿ | ಐ | ಥ್ | ಗ | ಟು | ಗ |
| ಖ್ | ಶೀ | ವ | ನ | ಫು | ಕೆ | ಕ್ | ಖ | ಳು | ವ | ಳು |
| ವ್ | ಭಾ | ಕ | ತ್ಮ | ತ್ರ | ಠ | ಗ | ಮ್ | ತ್ರಿ | ಟಿ | ಆ |
| ಪ್ರ | ಫು | ತ್ರಿ | ಯ | ರು | ಧ | ಎ | ಳು | ತ | ಳು | ತ್ಮ |
| ಸಂ | ಸಂ | ಟ | ಹ | ಸ | ಪೇ | ತ್ರ | ಷ | ನೆ | ಸ್ಥ | ನು |
| ಗ | ಗ | ಹೃ | ದ | ಯ | ಞ | ಜ | ಥೀ | ಜ | ಪಿಂ | ಕ್ |
| ಲ | ಗ್ | ಮ | ವ | ಖು | ಶ | ಪ್ರಾ | ಳ್ | ಝ್ | ಫ | ಲ |
| ಚ | ಟು | ವ | ಟಿ | ಳು | ಕೆ | ತ್ | ಊ | ಗ | ಐ | ತ್ರಿ |

ಪ್ರತಿಯೊಂದು ಚಿತ್ರ ಮತ್ತು ಪದಗಳಿಗೆ ಸೂಚಿಸಿರುವ ಭಾವನೆಗಳೊಂದಿಗೆ ಬಣ್ಣ ಹಚ್ಚಿರಿ.

ಉದಾಹರಣೆಗಳು: ಈಜುವದರಿಂದ ನನಗೆ ಸಂತೋಷವಾಗುತ್ತದೆ. ನಾನು ಅದಕ್ಕೆ ಹಸಿರು ಬಣ್ಣ ಹಚ್ಚುತ್ತೇನೆ.



| | |
|---|---|
| ನನಗೆ ಹಣ ದೊರೆಯಿತು | ವಾಕ್ಯ ಕಂಠಪಾಠ ಮಾಡಲು ನನ್ನಿಂದ ಆಗಲಿಲ್ಲ |
| ನಾಳೆ ಶಾಲೆ ಇದೆ | ನನ್ನ ಆಪ್ತಮಿತ್ರ ಬೇರೆ ಊರಿಗೆ ಹೋದನು |
| ನಾನು ಅಳುತ್ತಿರುವ ಮಗುವನ್ನು ನೋಡಿದೆನು | ಯಾರೋ ನನ್ನ ಬಗ್ಗೆ ಸುಳ್ಳು ಹೇಳಿದ್ದಾರೆ |
| ಇಂದು ನನ್ನ ಜನ್ಮದಿನ | ಹಾಸ್ಯ ಚಿತ್ರ ವೀಕ್ಷಿಸುತ್ತಿದ್ದೇನೆ |

ನಿಮ್ಮ ಜೀವನದ ಉದಾಹರಣೆಗಳನ್ನು ಬರೆಯಿರಿ ಮತ್ತು ನಿಮ್ಮ ಭಾವನೆಗನುಸಾರ ಬಣ್ಣ ಹಚ್ಚಿರಿ.

| | |
|---|---|
| ನನ್ನ ಬೆಕ್ಕು ಕಳೆದುಕೊಂಡಾಗ | ಜೇಡ |
| ಅವರು ನನ್ನನ್ನು ದೂಷಿಸಿದಾಗ | ಮನೆಯಲ್ಲಿ ಏನೂ ಮಾಡಬೇಡಿ |
| ನಕ್ಷತ್ರಗಳನ್ನು ನೋಡು | ನಾನು ಗಾಜಿನ ಮುರಿದು |

## ಪೇತ್ರನೊಂದಿಗೆ ವನಭೋಜನ ೪

### ಫ್ರೂಟ್ ಸ್ಕೀವರ್ಸ್

ಸಾಮಗ್ರಿಗಳು:

- ಸ್ಕೀವರ್ಸ್ ನಂಥ ಕಡ್ಡಿಗಳು
- ವಿವಿಧ ರೀತಿಯ ಹಣ್ಣುಗಳು



ಸೂಚನೆಗಳು:

- ಹಣ್ಣುಗಳನ್ನು ಚೌಕಾಕಾರದಲ್ಲಿ ಚಿಕ್ಕದಾಗಿ ತುಂಡು ಮಾಡಿರಿ
- ನಿಮ್ಮ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬರಿಗೂ ಕಡ್ಡಿಗಳನ್ನು ಕೊಡಿರಿ
- ನಿಮ್ಮ ಇಷ್ಟದ ಹಣ್ಣುಗಳನ್ನು ತೆಗೆದುಕೊಂಡು ಕಡ್ಡಿಯು ಪೂರ್ತಿಯಾಗುವ ತನಕ ಚುಚ್ಚಬೇಕು ಎಂದು ಹೇಳಿರಿ.
- ತಿನ್ನುತ್ತಾ ಸಂತೋಷಿಸೋಣ!

### ಪೇತ್ರನೊಂದಿಗೆ ನಾಟಕ




ಪೇತ್ರನ ಅಧಿಕಾರದಿಂದ ಪ್ರಸಂಗ ಮಾಡಿದನು (ಅಪೊ ೨:೧೪-೪೧)

ದೃಶ್ಯ: ಈಗ ಪೇತ್ರನಿಗೆ ಮೆಕ್ಸಿಕೋ ಪಟ್ಟಣದಾದ್ಯಂತ ಪಾಡ್ ಕ್ಯಾಸ್ಟ್ (ಇಂಟರ್ನೆಟ್ ಬ್ರಾಡ್ ಕ್ಯಾಸ್ಟ್) ಪ್ರಾರಂಭಿಸುವ ದೊಡ್ಡ ಅವಕಾಶವಿದೆ. (ಮೆಕ್ಸಿಕೊ ಬದಲು ನಿಮ್ಮ ದೇಶದ ಹೆಸರು ಬಳಸಿರಿ) ಅವನು ಕೆಲವೊಮ್ಮೆ ತಾನೇ ಸ್ವಂತವಾಗಿ ವೀಡಿಯೋಗಳನ್ನು ನಿರ್ಮಿಸಿ ಅವುಗಳನ್ನು ಯೂಟ್ಯೂಬ್ ಗೆ ಅಪ್ ಲೋಡ್ ಮಾಡುವನು. ಒಂದುದಿನ ಪೇತ್ರನು ಯೂಟ್ಯೂಬ್ ಗಾಗಿ ವಿಶೇಷವಾದ ವಿಡಿಯೋ ಮಾಡುತ್ತಿದ್ದನು (ಆತನ ವಿಡಿಯೋ ಯೇಸು ಕ್ರಿಸ್ತನ ಪೇಜ್ ನೊಂದಿಗೆ ಲಿಂಕ್ ಹೊಂದಿತ್ತು) ಆ ಸಮಯದಲ್ಲಿ ಪ್ರಸಿದ್ಧ ಸಿಎನ್ ಎನ್ ಪತ್ರಕರ್ತರೊಬ್ಬರು ಆತನ ಕಛೇರಿಯೊಳಗೆ ಬಂದರು. ಆ ಪತ್ರಕರ್ತನು ಪೇತ್ರನಿಗೆ ತನ್ನ ವೀಡಿಯೋವನ್ನು ಅಂತರಾಷ್ಟ್ರೀಯ ವಾತ್ರೆಯಲ್ಲಿ ಪ್ರಸಾರ ಮಾಡುವಂತೆ ಮತ್ತು ಅದೇ ಸಮಯದಲ್ಲಿ ತನ್ನ ವೆಬ್ ಸೈಟ್ ಹಾಗೂ ತಾನು ಮಾಡುವ ಕಾರ್ಯವನ್ನು ತಿಳಿಸುವಂತೆ ಕೇಳಿಕೊಂಡನು. ಪೇತ್ರನು ಪ್ರೋತ್ಸಾಹವುಳ್ಳವನಾಗಿ ದೂರದರ್ಶನ ರೆಕಾರ್ಡಿಂಗ್ ಗಾಗಿ ಹೊರಟನು.

(ನೇರವಾಗಿ ರೆಕಾರ್ಡಿಂಗ್ ಪ್ರಾರಂಭವಾದ ನಂತರ ಪೇತ್ರನು ಟಿವಿಯಲ್ಲಿ ತನ್ನನ್ನು ತೋರ್ಪಡಿಸಿಕೊಳ್ಳುವಾಗ ಒತ್ತಡಕ್ಕೆ ಒಳಗಾಗಿರುವಂತೆ ನಡೆದುಕೊಳ್ಳಬೇಕು)

- ಪ್ರಾರಂಭದಲ್ಲಿ ಪೇತ್ರನು ದೇಶದ ಪ್ರೇಕ್ಷಕರನ್ನು ವಂದಿಸಿದನು ಮತ್ತು ತಕ್ಷಣ ಮೆಕ್ಸಿಕನ್ ಶೈಲಿಯಲ್ಲಿ ಮಿರಾಚಿ ಎಂದು ಕೂಗುತ್ತಾ (ನಿಮ್ಮ ದೇಶದ ಯಾವುದಾದರು ಹೇಳಿಕೆ ಅಥವಾ ಧ್ವನಿಯನ್ನು ಆತನು ಉಪಯೋಗಿಸಬಹುದು) ಎಲ್ಲರನ್ನೂ ವಂದಿಸಿದನು.
- ಆತನು ತನ್ನ ಪ್ರಸಂಗವನ್ನು ಪ್ರವಾದನೆಯ ಮೂಲಕ ಪ್ರಾರಂಭಿಸಿದನು, ಪ್ರಿಯ ಸ್ನೇಹಿತರೇ . . . "ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ

ಮೇಲೆ ನನ್ನ ಆತ್ಮವನ್ನು ಸುರಿಸುವೆನು;
ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು;
ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು;
ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು;
೧೮ ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸದಾಸಿಯರ
ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು;
ಅವರೂ ಪ್ರವಾದಿಸುವರು.
೧೯ ಕರ್ತನ ಆಗಮನದ ಗಂಭೀರವಾದ
ಮಹಾದಿನವು ಬರುವದಕ್ಕೆ ಮುಂದೆ ಮೇಲೆ ಆಕಾಶದಲ್ಲಿ ಅದ್ಭುತಕಾರ್ಯಗಳನ್ನೂ
ಕೆಳಗೆ ಭೂಮಿಯಲ್ಲಿ ಸೂಚಕಕಾರ್ಯಗಳನ್ನೂ ಉಂಟು ಮಾಡುವೆನು.
೨೦ ರಕ್ತ, ಬೆಂಕಿ, ಹಬೆಯಂತೆ ಏರುವ ಹೊಗೆ, ಇವು ಉಂಟಾಗುವವು.
ಸೂರ್ಯನು ಕತ್ತಲಾಗುವನು, ಚಂದ್ರನು ರಕ್ತವಾಗುವನು;
೨೧ ಆದರೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು
ದೇವರು ಹೇಳುತ್ತಾನೆ ಎಂಬದೇ. . ." ಅಪೊ ೨:೧೭-೨೧

- ನಂತರ ಪೇತ್ರನು ಯೇಸು ಕ್ರಿಸ್ತನ ಬಗ್ಗೆ ಮಾತನಾಡಿದನು; ನಾವು ನಮ್ಮ ಪ್ರಾರ್ಥನೆಗಳನ್ನು ಸಲ್ಲಿಸಬೇಕಾಗಿರುವ ಏಕೈಕ ವ್ಯಕ್ತಿಯಾಗಿರುವ ರಾಜಾಧಿರಾಜನು ಸಹ ಅವರಿಗೆ ಅನೇಕ ಮಾತುಗಳಿಂದ ಎಚ್ಚರಿಸುತ್ತಿದ್ದಾನೆ.

ಕಡೆಯಲ್ಲಿ ಪೇತ್ರನು ಫಲಿತಾಂಶಗಳನ್ನು ಹಂಚಿಕೊಳ್ಳುತ್ತಿದ್ದಾನೆ:
ಪೇತ್ರನ ಪ್ರಸಂಗವು ಅಂತರಾಷ್ಟ್ರೀಯ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದಂತೆಯೇ, ಪೇತ್ರನ ಕೆಲವು ಸ್ನೇಹಿತರು ಒಟ್ಟಾಗಿ ಸೇರಿ ಬಂದರು ಮತ್ತು ಇಂಟರ್ನೆಟ್ ಸಹಾಯದಿಂದ ತಮ್ಮ ಕಛೇರಿಯಲ್ಲಿ ಪ್ರಾರ್ಥನಾ ಕೂಟವನ್ನು ನಡೆಸಿದರು. ಪೇತ್ರನ ಪ್ರಸಂಗವನ್ನು ಕೇಳಿದ ನಂತರ ಜನರು ದೂರವಾಣಿ ಕರೆಗಳನ್ನು ಮಾಡಿದರು ಮತ್ತು ಆ ದಿನ ಅವರು ದೂರವಾಣಿಯ ಮೂಲಕವೇ ಅನೇಕ ಜನಗಳಿಗಾಗಿ ಪ್ರಾರ್ಥನೆ ಮಾಡಿದರು; ನಿಜವಾಗಿ ಹೇಳುವದಾದರೆ ಆ ದಿನ ೩೦೦೦ ಜನರು ರಕ್ಷಣೆ ಹೊಂದಿದರು! (ಫಲಿತಾಂಶಗಳನ್ನು ಕಂಡು ಪೇತ್ರನು ಸಂತೋಷದಿಂದ ಮೇಲೆ ಕೆಳಗೆ ಕುಣಿದಾಡಿದನು)

## ಕಣಜದ ಕರಕುಶಲಗಳು ೪



### ದ್ರಾಕ್ಷೆಗಳು

೧. ಅಂತರ್ಜಾಲದಲ್ಲಿ ಕೊಡಲಾಗಿರುವ ವಿಧಾನದ ಉಪಯೋಗದಿಂದ, ಒಬ್ಬ ವಿದ್ಯಾರ್ಥಿಗೆ ಮೂರು ದ್ರಾಕ್ಷೆ ಹಣ್ಣುಗಳನ್ನು ಬಿಳೀ ಹಾಳೆ ಮೇಲೆ ಪ್ರಿಂಟ್ ಮಾಡಿಸಿರಿ.
೨. ಸ್ಟಂಪ್ ಆಗಿ ಉಪಯೋಗಿಸಲು ಕ್ಯಾರೆಟ್ ಕೊಯ್ಯಿರಿ, ಅದನ್ನು ಬಣ್ಣದಲ್ಲಿ ಅದ್ದಿರಿ ಮತ್ತು ಕ್ಯಾರೆಟ್ ಸ್ಟಾಂಪ್ ನಿಂದ ಮೂರು ದ್ರಾಕ್ಷೆಗಳನ್ನು ಅಲಂಕರಿಸಿರಿ.

೩. ಹಸಿರು ಹಾಳೆಯನ್ನು ಅಥವಾ ಟಿಶ್ಯೂ ಹಾಳೆಯನ್ನು ಬೀಸಣಿಗೆಯ ಹಾಗೆ ಮಡಚಿರಿ ಮತ್ತು ಮೇಲ್ಭಾಗದಲ್ಲಿ ಅಂಟಿಸಿರಿ.

೪. ಸುತ್ತಲೂ ಹಸಿರು ಕರ್ಲಿ ರಿಬ್ಬನ್ ಅಂಟಿಸಿರಿ.

೫. ತೋರಿಸಿರುವ ಪ್ರಕಾರ ಮೂರು ದ್ರಾಕ್ಷೀ ಹಣ್ಣುಗಳನ್ನು ಮಡಚಿರಿ ಮತ್ತು ಅಂಟಿಸಿರಿ.

### ಚಲನೆಯೊಂದಿಗೆ ಕೈಕುಲುಕುವುದು

**ದಿನ ೪: ಹಂಚುವಿಕೆ**




ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯ ಹಿಂದೆ ನಿಧಾನವಾಗಿ ತಿರುಗುತ್ತಾ ಬಲಗೈಯನ್ನು ಜೋರಾಗಿ ಮತ್ತು ನಿಧಾನವಾಗಿ ತಟ್ಟಬೇಕು

ಒಬ್ಬನು ಮುಂದಿರುವವನ ಕಡೆಗೆ ಕೈ ಚಾಚುತ್ತಾ ಅಂಗೈ ತೋರಿಸುವಾಗ, ಮತ್ತೊಂದು ಅದಕ್ಕೆ ಸೇರಿಸಿ ಚಪ್ಪಾಳೆ ಹೊಡೆಯಬೇಕು, ಲೋ ೫ ಶೈಲಿ.

## ದ್ರಾಕ್ಷೇತೋಟದ ಆಟಗಳು ೪

### ಕಾರ್ಟೂನ್ ಬೇಸ್ ಬಾಲ್




ಇದು ಬೇಸ್ ಬಾಲ್ ನ ವಿಭಿನ್ನ ಶೈಲಿಯಾಗಿದ್ದು, ಇದರಲ್ಲಿ ಮಕ್ಕಳು ಹೆಚ್ಚು ಸಂತೋಷಿಸುವರು. ನೀವು ಪ್ರಾರಂಭಿಸುವ ಮೊದಲು ಒಂದು ಅಥವಾ ಎರಡು ಬ್ಯಾಟ್ ಮಾಡಿಕೊಳ್ಳಿರಿ, ಎರಡು ಉಪಯೋಗಿಸಿ ಬಿಸಾಡುವ ತಟ್ಟೆಗಳಿಗೆ ಮುಖಾಮುಖಿಯಾಗಿ ಟೇಪ್ ಅಂಟಿಸುವ ಮೂಲಕ, ವಿದ್ಯಾರ್ಥಿಯು ತನ್ನ ಕೈಯನ್ನು ಇಡಲು ಬೇಕಾಗುವಷ್ಟು ಸ್ಥಳಾವಕಾಶವಿರಬೇಕು. ಒಂದುವೇಳೆ ಗಾಳಿ ಹೆಚ್ಚಾದ ಬೀಸುವ ಪ್ರದೇಶವಲ್ಲವಾದರೆ ಚೆಂಡಿಗೆ ಬದಲು ನೀವು ಬಲೂನ್ ಅಥವಾ ಪೇಪರ್ ಚೆಂಡು ಬಳಸಬಹುದು. ನೀವು ಸಹಜವಾದ ಬೇಸ್ ಬಾಲ್ ನಿಯಮಗಳನ್ನೇ ಉಪಯೋಗಿಸಬಹುದು ಅಥವಾ ಬದಲಾಯಿಸಬಹುದು. ಉದಾಹರಣೆಗೆ ಬೇಸ್ ಗಳ ಸಂಖ್ಯೆಯನ್ನು ಬದಲಾಯಿಸಬಹುದು ಅಥವಾ ಹಿಂದಕ್ಕೆ ಓಡುವ ನಿಯಮ ಜಾರಿಗೊಳಿಸಬೇಕು.



## ಸಂಗೀತ ಮತ್ತು ಕೈಗೊಂಬೆ ಆಟದೊಂದಿಗೆ ಮುಗಿಸುವದು ೪



ಹುಂಜ: ಹಲೋ ಗೆಳೆಯರೇ, ನಾವು ಏನನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ನೀವು ನಮ್ಮೊಂದಿಗೆ ಕಲಿಯುತ್ತಿರುವದು ಒಳ್ಳೆಯ ಸಂಗತಿಯಾಗಿದೆ. ನಾನು ನನ್ನ ಸ್ನೇಹಿತನಿಗಾಗಿ ಕಾಯುತ್ತಿದ್ದೇನೆ, ಆತನು ಖಂಡಿತವಾಗಿಯೂ ಗೊಂದಲಕ್ಕೆ ಒಳಗಾಗಿರುತ್ತಾನೆ. (ಒಂದುವೇಳೆ ಕೈಗೊಂಬೆಗಳಿಗೆ ಹೆಚ್ಚಿನ ಪರಿಸರವನ್ನು ಕೊಡಲು ನೀವು ಬಯಸುವದಾದರೆ, ಹಾಲಿವುಡ್ ರೀತಿಯ ಸಂಗೀತವನ್ನು ಉಪಯೋಗಿಸಬಹುದು ಅಥವಾ ಕುದುರೆಯ ಪ್ರವೇಶವನ್ನು ಪ್ರಕಟಪಡಿಸಲು ಪೌಡರ್ ಎಸೆಯಬಹುದು.)

ಕುದುರೆ: ಬೇಕೆಂದರೂ, ಬೇಡವೆಂದರೂ, ಲೂಕ ನಾನೇ ನಿನ್ನ ತಂದೆ! (ಕುದುರೆ ಕಪ್ಪು ಕನ್ನಡಕ ಧರಿಸಿ ಬರುತ್ತದೆ) ಯಾರಿಗಾದರು ಆಟೋಗ್ರಾಫ್ ಬೇಕೇ? ದಯವಿಟ್ಟು ಫೋಟೋ ತೆಗೆಯಬೇಡಿರಿ.

ಹುಂಜ: ಕುದುರೆ, ಇಂದು ನಿನಗೆ ಏನಾಗಿದೆ? ಕಪ್ಪು ಕನ್ನಡಕ ಧರಿಸಿಕೊಂಡಿರುವ ನಿನಗೆ ಖಂಡಿತವಾಗಿ ಏನೂ ಕಾಣಿಸುತ್ತಿಲ್ಲ ಎಂದು ನನಗೆ ಗೊತ್ತು, ನಾವು ಈಗಾಗಲೇ ವಿಬಿಎಸ್ ನಲ್ಲಿದ್ದೇವೆ.

ಕುದುರೆ: ನನಗೆ ಗೊತ್ತು ಹುಂಜ. (ಕಲಾವಿದನು ಮಾತನಾಡಬೇಕು) ನಾನು ನಟನೆ ಮಾಡುವ ಆಯ್ಕೆ ಮಾಡಿಕೊಂಡಿರುವದರಿಂದ, ಇದು ಇಂದಿನ ನಮ್ಮ ಧೇಯವಾಗಿದೆ.

ಹುಂಜ: ಕುದುರೆ ಇದರ ಅರ್ಥ ನೀನು ನಟನಾಗಬೇಕೆಂಬದಲ್ಲ, ಬದಲಾಗಿ ಸತ್ಯವೇದವು ಯೋಹಾನ ೧೫:೧೬ರಲ್ಲಿ ಹೇಳುವದೇನೆಂದರೆ, "ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ; ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು. ನೀವು ಹೊರಟು ಹೋಗಿ ಫಲ ಕೊಡುವವರಾಗಬೇಕೆಂತಲೂ ನೀವು ಕೊಡುವ ಫಲವು ನಿಲ್ಲುವಂಥದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ." ನಾನು ಮತ್ತು ನೀವು ಕ್ರಿಯೆ ಮಾಡುವವರಾಗಬೇಕೆಂದು ದೇವರು ನಮ್ಮನ್ನು ಆರಿಸಿಕೊಂಡಿದ್ದಾನೆ. ಅಂದರೆ ನಮ್ಮ ಕ್ರಿಯೆ ಥಿಯೇಟರ್ ನಲ್ಲಿ ಅಲ್ಲ. ನಮ್ಮ ಕ್ರಿಯೆಗಳು ಒಳ್ಳೇತನ, ಪ್ರೀತಿ, ನಂಬಿಕೆಯನ್ನು ತೋರಿಸುವ ರೀತಿಯಲ್ಲಿ ಹಾಗೂ ಆತನು ನಿಜವಾಗಿಯೂ ನಮ್ಮಲ್ಲಿ ವಾಸಿಸುತ್ತಿದ್ದಾನೆ ಎಂಬದು ಗೊತ್ತಾಗುವ ರೀತಿಯಲ್ಲಿ ನಾವು ಜೀವಿಸಬೇಕೆಂದು ನಮಗೆ ಹೇಳಲಾಗಿದೆ.

ಕುದುರೆ: ಆದ್ದರಿಂದ ನಾನು ದೊಡ್ಡ ಬುಟ್ಟಿ ತೆಗೆದುಕೊಂಡು ಹೋಗಿ ಅದರ ತುಂಬಾ ಹಣ್ಣು ತುಂಬಿಸುವ ಅವಶ್ಯಕತೆಯಿಲ್ಲ.

ಹುಂಜ: ಖಂಡಿತವಾಗಿಯೂ ಇಲ್ಲ, ಕ್ರಿಸ್ತನು ನಮ್ಮನ್ನು ಪ್ರೀತಿಸಿದ ಹಾಗೆ ನಾವು ಇತರರನ್ನು ಪ್ರೀತಿಸಲು ಪ್ರಾರಂಭಿಸುವಾಗ, ನಾವು ಯೇಸು ಕ್ರಿಸ್ತನಂತಾಗುತ್ತೇವೆ ಮತ್ತು ಯೇಸು ಕ್ರಿಸ್ತನು ಮಾಡಿದ ಕ್ರಿಯೆಗಳನ್ನು ಮಾಡುವವರಾಗುತ್ತೇವೆ.

ಕುದುರೆ: ಹಾಗಾದರೆ ನನಗೊಂದು ಸಮಸ್ಯೆ ಇದೆ!

ಹುಂಜ: ಯಾವ ಸಮಸ್ಯೆ?

ಕುದುರೆ: ನಾನು ಆನ್ ಲೈನ್ ನಲ್ಲಿ ಒಂದು ಟನ್ ದ್ರಾಕ್ಷೇ ಹಣ್ಣುಗಳನ್ನು ಆರ್ಡರ್ ಮಾಡಿದ್ದೇನೆ. ನಾನು ಸಭೆಗೆ ತುಂಬಾ ಹಣ್ಣುಗಳನ್ನು ತರಬೇಕೆಂದು ಯೋಚಿಸಿದ್ದೆನು.

ಹುಂಜ: ಅಯ್ಯೋ ಕುದುರೆ! ನೀನು ವಿಶೇಷವಾದವನು. (ಇಬ್ಬರೂ ಹೊರಗೆ ಹೋಗುವರು)

# ಪಾಠ ೫

## ಹೆಸರು ೫

ನಾನು ಆತುಕೊಳ್ಳುವ ಆಯ್ಕೆ ಮಾಡಿಕೊಂಡಿದ್ದೇನೆ


ಪೇತ್ರನು ನೀರಿನ ಮೇಲೆ ನಡೆದನು

ಮತ್ತಾಯ ೧೪:೨೨-೩೩

## ವಚನ ೫

"ನಾನೇ ದ್ರಾಕ್ಷೇಬಳ್ಳಿ ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ." ಯೋಹಾನ ೧೫:೫

## ಉಪಾಯ ೫




ಈ ಉಪಾಯ ಮಾಡಲು ಒಂದು ಉದ್ದದ ಹಾಳೆ ಮತ್ತು ಚೀಲ ಬೇಕಾಗುತ್ತದೆ. ಚಿತ್ರದಲ್ಲಿ ತೋರಿಸಿರುವ ಪ್ರಕಾರ ನೀವು ಮಕ್ಕಳ ಎದುರಿನಲ್ಲಿ ಉದ್ದದ ಹಾಳೆಯನ್ನು ಒಂಭತ್ತು ಚೂರು ಮಾಡಬೇಕು. ೯ ಮಕ್ಕಳನ್ನು ಮುಂದಕ್ಕೆ ಕರೆದು ತಮ್ಮ ಹೆಸರುಗಳನ್ನು ೯ ಚೂರುಗಳ ಮೇಲೆ ಬರೆಯುವಂತೆ ಹೇಳಿರಿ. ನಂತರ ಅವುಗಳನ್ನು ಚೀಲದೊಳಗೆ ಹಾಕಿರಿ. ಈ ಉಪಾಯವು ಸುಲಭವಾಗಿರುತ್ತದೆ ಯಾಕಂದರೆ ೯ ಚೂರುಗಳಲ್ಲಿ, ಒಂದನ್ನು ನಾಲ್ಕು ಮೂಲೆಗಳಲ್ಲಿ ಹರಿಯಲಾಗಿರುತ್ತದೆ. ೪ ಕಡೆಗಳಲ್ಲಿ ಹರಿದಿರುವ ಚೂರನ್ನು ಕೊಡುವ ಮಗುವನ್ನು ನೀವು ಎಚ್ಚರಿಕೆಯಿಂದ ಗಮನಿಸಬೇಕು ಮತ್ತು ನೋಡದೆ ಆ ಮಗುವಿನ ಚೂರನ್ನು ಚೀಲದೊಳಗೆ ಹುಡುಕುವ ಆಯ್ಕೆ ಮಾಡಿಕೊಳ್ಳಬೇಕು. (ಮೂಲೆಗಳು ಹರಿದಿರುವದರಿಂದ ನೋಡದೆ ಸುಲಭವಾಗಿ ಅದನ್ನು ಕಂಡುಹಿಡಿಯಬಹುದು). ಖಂಡಿತವಾಗಿಯೂ ಮಕ್ಕಳು ಕೊಡುವ ಚೂರುಗಳನ್ನು ಚೀಲದೊಳಗೆ ಹಾಕಬೇಕು ಮತ್ತು ನಿಮ್ಮ ಉಪಾಯವು ಅಸಾಧ್ಯವೆಂದು ತೋರುವ ಸಲುವಾಗಿ ಹೆಚ್ಚಾಗಿ ಕುಲುಕಬೇಕು.:)

## ಮುಖ್ಯ ಪಾಠ ೫

"ಹೊಲಕ್ಕೆ ಹೋಗೋಣ!!!" ವಿಬಿಎಸ್ ನ ಕಡೆಯ ದಿವಸಕ್ಕೆ ಸ್ವಾಗತ. ವಾರದ ಪಾಠಗಳು ನಿಮಗೆ ನೆನಪಿದೆಯೇ ಎಂದು ನೋಡೋಣ:

ದ್ರಾಕ್ಷೇಬಳ್ಳಿ ಯಾರು? (ಯೇಸು)

ಕೊಂಬೆಗಳು ಯಾರು? (ನಾವು)

ನಾವೇನು ಮಾಡಬೇಕು? (ನೆಲೆಗೊಂಡಿರಬೇಕು)

ನಾವು ನೆಲೆಗೊಂಡಿದ್ದರೆ ಏನಾಗುತ್ತದೆ? (ಫಲ ಕೊಡುತ್ತೇವೆ)

ಮತ್ತು ಕಡೆಯ ಪ್ರಶ್ನೆ . . . ನಮಗೆ ಬೇರೆ ಆಯ್ಕೆ ಇದೆಯೇ??? (ಇಲ್ಲ, ನಮಗೆ ಬೇರೆ ಆಯ್ಕೆ ಇಲ್ಲ)

ವಚನದ ಕಡೆಯ ಭಾಗ ಇದುವೇ ಆಗಿದೆ . . . "ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ." ಪೂರ್ತಿ ವಚನ ಹೀಗಿದೆ: "ನಾನೇ ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ."



ಯೇಸು ಕ್ರಿಸ್ತನನ್ನು ಬಿಟ್ಟರೆ ನಾವು ಸ್ವಲ್ಪ ಮಾತ್ರ ಸಾಧಿಸಬಹುದು ಎಂದು ಹೇಳುತ್ತಿದ್ದೀರೋ? ಇಲ್ಲ! ನಮಗಾಗಿ ನಾವು ಏನು ಮಾಡಿಕೊಳ್ಳಬಹುದು??? ಏನೂ ಇಲ್ಲ!! ಹೊಲದಲ್ಲಿರುವ ದ್ರಾಕ್ಷೇಬಳ್ಳಿಯ ಗಿಡವನ್ನು ನೋಡುವಾಗ ಇದು ದೃಢವಾಗುತ್ತದೆ. ಒಂದುವೇಳೆ ನೀವು ಬಳ್ಳಿಯಲ್ಲಿರುವ ಕೆಲವು ಕೊಂಬೆಗಳನ್ನು ಕಡಿದು ಹಾಕಿದರೆ ಅವುಗಳು ಒಣಗುವವು ಮತ್ತು ಸಾಯುವವು. ಆ ಕೊಂಬೆಗಳಿಗೆ ಫಲ ಕೊಡಲು ಆಗುವದಿಲ್ಲ ಮತ್ತು ಅವುಗಳಿಂದ ರೈತನಿಗೆ ಯಾವ ಪ್ರಯೋಜನವೂ ಇರುವದಿಲ್ಲ. ಇಂದಿನ ಲೋಕದಲ್ಲಿ, ನೆಲೆಗೊಳ್ಳುವದನ್ನು ತ್ಯಜಿಸುವದು ಮತ್ತು ದುರ್ಬಲರೆಂದು ಭಾವಿಸುವದು ಅತ್ಯಂತ ಸುಲಭವಾಗಿದೆ. ನಾವು ಯೋಗ್ಯರಾಗಿ ನಡೆದುಕೊಳ್ಳಬೇಕು, ನಮ್ಮ ತಂದೆತಾಯಿಗಳಿಗೆ ವಿಧೇಯರಾಗಬೇಕು, ಸಭೆಗೆ ಹೋಗಬೇಕು, ನಮ್ಮ ಹೋಮ್ ವರ್ಕ್ ಮಾಡಬೇಕು ಎಂಬದಾಗಿ ನಿರೀಕ್ಷಿಸುತ್ತಾರೆ ಆದರೆ ಇದು ಬಹಳ ಕಷ್ಟದ ಕೆಲಸವಾಗಿದೆ! ಒಂದುವೇಳೆ ನಾವು ದ್ರಾಕ್ಷೇಬಳ್ಳಿಯಿಂದ ದೂರವಾದರೆ, ಈ ಎಲ್ಲಾ ಕಾರ್ಯಗಳನ್ನು ಸರಿಯಾಗಿ ಮಾಡಲು ನಮಗೆ ಸಾಧ್ಯವಾಗುವದಿಲ್ಲ! ಯೇಸು ಕ್ರಿಸ್ತನು ಕೊಡುವ ಶಕ್ತಿಯ ಮೂಲಕ ಮಾತ್ರವೇ ನಾವು ಒಳ್ಳೆಯ ಜೀವಿತವನ್ನು ಜೀವಿಸಲು ಹಾಗೂ ಫಲ ಕೊಡಲು ಸಾಧ್ಯ. ಯೇಸು ಕ್ರಿಸ್ತನನ್ನು ಆತುಕೊಳ್ಳುವ ಜೀವಿತವನ್ನು ನಾವು ಆಯ್ಕೆ ಮಾಡಿಕೊಳ್ಳಬೇಕು. ನಿಜವಾಗಿ ಹೇಳುವದಾದರೆ ಸದ್ಯಕ್ಕೆ ಪರಿಪೂರ್ಣವಾದ ಕ್ರೈಸ್ತೀಯ ಜೀವಿತವನ್ನು ಜೀವಿಸುವದು ಅಸಾಧ್ಯ . . . ಆದರೆ ದೇವರೊಂದಿಗಿದ್ದರೆ ಎಲ್ಲವೂ ಸಾಧ್ಯ!!! ನಾವು ಆತನಲ್ಲಿ ನೆಲೆಗೊಂಡಿರಬೇಕು ಎಂಬದು ಇಲ್ಲಿ ಸ್ಪಷ್ಟವಾದ ಸಂಗತಿಯಾಗಿದೆ. ಈ ವಾಕ್ಯವು ನಮಗೆ ಹೇಳುವದೇನೆಂದರೆ ನಾವು ಯೇಸು ಕ್ರಿಸ್ತನಲ್ಲಿ ಅಥವಾ ದ್ರಾಕ್ಷೇ ಬಳ್ಳಿ ನೆಲೆಗೊಳ್ಳಬೇಕೇ ಹೊರತು ಒಣಗಿ ಸಾಯುವ ಸ್ಥಿತಿಗೆ ಬರಬಾರದು ಎಂಬದು ಇಲ್ಲಿ ಮುಖ್ಯವಾದ ವಿಷಯವಾಗಿದೆ.

ನಾನೇ ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ" ಯೋಹಾನ ೧೫:೫ ವಾಕ್ಯವನ್ನು ಕಂಠಪಾಠ ಮಾಡೋಣ.

ಇಂದಿನ ಪೇತ್ರನು ತಾನು ನೀರಿನ ಮೇಲೆ ನಡೆದ ಘಟನೆಯನ್ನು ನಮಗೆ ಹೇಳುತ್ತಾನೆ. ಪೇತ್ರನು ದೋಣಿಯಿಂದ ಕೆಳಗಿಳಿದು ನೀರಿನ ಮೇಲೆ ನಡೆದನು!!! ಪೇತ್ರನ ಹಾಗೆ ನೀರಿನ ಮೇಲೆ ನಡೆಯುವ ಸಂದರ್ಭ ನಮಗೆ ಎದುರಾಗುವದಿಲ್ಲ, ಆದರೆ ಪ್ರತೀ ವಾರ ಅನೇಕ ಸವಾಲುಗಳು ನಮಗೆ ಎದುರಾಗುತ್ತವೆ, ಅವುಗಳಲ್ಲಿ ಕೆಲವು ಅಸಾಧ್ಯವಾದವುಗಳೂ ಇರುತ್ತವೆ. ಕೆಲವೊಮ್ಮೆ ಯಾರನ್ನಾದರೂ ಕ್ಷಮಿಸುವಂತೆ, ನಮ್ಮ ಜೇಬಿನಲ್ಲಿರುವ ಹಣವನ್ನು ಕಳೆದುಕೊಂಡವರಿಗೆ ಕೊಡುವಂತೆ ಅಥವಾ ಪರಿಪೂರ್ಣವಾದ ಕ್ರೈಸ್ತಿಯ ಜೀವಿತವನ್ನು ಜೀವಿಸುವಂತೆ ದೇವರು ನಮಗೆ ಹೇಳುತ್ತಾನೆ! ನಾವು ಅಸಾಧ್ಯವಾಗಿರುವ ಕಾರ್ಯಗಳನ್ನು ಮಾಡಬಹುದು ಆದರೆ ಯೇಸು ಕ್ರಿಸ್ತನಿಲ್ಲದೆ ಅದನ್ನು

ಮಾಡಲು ಸಾಧ್ಯವೇ? ಇಲ್ಲ! ದೇವರು ಹೇಳುವ ರೀತಿಯಲ್ಲಿ ನಾವು ಜೀವಿಸಲು ಬಯಸಿದರೆ, ಅದಕ್ಕೆ ಬೇರೆ ಯಾವುದಾದರು ಮಾರ್ಗ ಇದೆಯೇ? ಇಲ್ಲ! ನಾವು ಯೇಸು ಕ್ರಿಸ್ತನಲ್ಲಿ ನೆಲೆಯಾಗಿರಬೇಕು!!!

**(ಉಪಾಯ)**

ಈಗ ನಾನು ನಿಮಗೆ ಅಸಾಧ್ಯವಾದದ್ದನ್ನು ತೋರಿಸುತ್ತೇನೆ. (ನೀವು ಹಾಳೆಯನ್ನು ಹರಿಯುವಾಗ ೯ ಮಕ್ಕಳನ್ನು ಮುಂದಕ್ಕೆ ಕರೆಯಿರಿ ಮತ್ತು ಪ್ರತಿಯೊಂದು ಮಗುವಿಗೆ ಒಂದೊಂದು ಹಾಳೆಯ ಚೂರನ್ನು ಕೊಡಿರಿ. ಅದರಲ್ಲಿ ತಮ್ಮ ಹೆಸರನ್ನು ಬರೆದು ಚೀಲದೊಳಗೆ ಹಾಕಲು ಅವರಿಗೆ ಹೇಳಿರಿ) ನಾನು ಯೋಸೇಫನ ಹಾಳೆಯನ್ನು ______ ಆಯ್ಕೆ ಮಾಡಿಕೊಳ್ಳಬಹುದು (೪ ಮೂಲೆಗಳಲ್ಲಿ ಹರಿದಿರುವ ಚೂರಿನ ಮೇಲೆ ಬರೆದಿರುವ ಮಗು) ಮತ್ತು ಅದು ಅದುವೇ ಆಗಿರುತ್ತದೆ!!! ಹೌದು, ನಾನು ಅಸಾಧ್ಯವಾದ ಕಾರ್ಯಗಳನ್ನು ಮಾಡುವೆನು! ನಾನು ಬಳ್ಳಿಯಾಗಿರುವ ಯೇಸು ಕ್ರಿಸ್ತನಲ್ಲಿ ನೆಲೆಗೊಂಡಿದ್ದೇನೆ!!! ನಾನು ಆತುಕೊಳ್ಳುವ ಆಯ್ಕೆ ಮಾಡಿಕೊಂಡಿದ್ದೇನೆ!
ವಾರದ ಪಾಠಗಳನ್ನು ಕಡೆಯದಾಗಿ ಒಂದು ಸಲ ನೋಡಿಕೊಳ್ಳೋಣ . . .
ದ್ರಾಕ್ಷೇಬಳ್ಳಿ ಯಾರು? (ಯೇಸು) ಕೊಂಬೆಗಳು ಯಾರು? (ನಾವು) ನಾವೇನು ಮಾಡಬೇಕು? (ನೆಲೆಗೊಂಡಿರಬೇಕು) ನಾನು ನೆಲೆಗೊಂಡಿದ್ದರೆ ಏನಾಗುತ್ತದೆ? (ಫಲ ಕೊಡುತ್ತೇವೆ) ನಮಗೆ ಬೇರೆ ಆಯ್ಕೆ ಇದೆಯೇ? (ಇಲ್ಲ)

# ಸರದಿ ಠಾಣೆಗಳು ೫

## ಸಿಲೋ ತರಗತಿ ೫

### ಪ್ರಶ್ನೆಗಳು ಮತ್ತು ಉತ್ತರಗಳು




೧. ಯೌವನಸ್ಥರು ಯಾವುದೇ ದೇಶದಲ್ಲಿದ್ದರೂ, ದೇವರ ಪ್ರಸನ್ನತೆಯಲ್ಲಿ ನೆಲೆಗೊಂಡಿರಲು ಯಾಕೆ ಕಷ್ಟಪಡುತ್ತಾರೆ? ನಾವು ಮಕ್ಕಳ ಕ್ರಿಯೆಗಳ ವಿಷಯದಲ್ಲಿ ತೀರ್ಪು ಮಾಡಲು ಬಂದಿಲ್ಲ ಬದಲಾಗಿ ದೇವರ ವಾಕ್ಯದ ಮೂಲಕ ಪ್ರೀತಿಯಿಂದ ಸಲಹೆ ಕೊಡಲು ಬಂದಿದ್ದೇವೆ ಎಂದು ಅಧ್ಯಾಪಕರು ಮರೆಯಬಾರದು. ಉದಾಹರಣೆಗೆ, ಭಾನುವಾರ ೨ ಅಥವಾ ೩ ತಾಸುಗಳು ಆರಾಧನೆಯಲ್ಲಿ ಭಾಗವಹಿಸುವದು ವಾರದ ೬ ದಿವಸಗಳು ಆತನಲ್ಲಿ ನೆಲೆಗೊಳ್ಳದೆ ಇದ್ದರೆ ಯಾವ ಪ್ರಯೋಜನವೂ ಆಗುವದಿಲ್ಲ. ಸಹಜವಾಗಿ ನಾವು ಬೆಳಗ್ಗೆ ಎದ್ದ ಕೂಡಲೇ ದೇವರೊಂದಿಗೆ ಸಮಯ ಕಳೆಯುವ ಬದಲು ನಮ್ಮ ಫೋನ್ ತೆಗೆದುಕೊಳ್ಳುತ್ತೇವೆ, ಸಾಮಾಜಿಕ ಜಾಲತಾಣಗಳ ಮೇಲೆ ಕಣ್ಣಾಡಿಸುತ್ತೇವೆ, ನಂತರ ಅವುಗಳಲ್ಲಿ ಬರುವ ಚಿತ್ರಗಳು ಅಥವಾ ವಿಷಯಗಳನ್ನು ಓದುತ್ತೇವೆ ಹಾಗೂ ದೇವಾ ಪ್ರಸನ್ನತೆಗೆ ಆದ್ಯತೆ ಕೊಡುವದನ್ನು ಮರೆತುಹೋಗುತ್ತೇವೆ.

೨. ಕಷ್ಟದ ಸಮಯಗಳು ಬರುವಾಗ, ಎಲ್ಲವನ್ನೂ ತ್ಯಜಿಸಿ ದೇವರೊಂದಿಗೆ ನಿಮಗಿರುವ ಸಂಬಂಧವನ್ನು ಕಳೆದುಕೊಳ್ಳುವಾಗ, ನೀವು ದೃಢವಾಗಿ ನಿಲ್ಲಲು ಹೇಗೆ ಸಾಧ್ಯವಾಯಿತು? ಶೋಧನೆಗಳು ಮತ್ತು ಕಷ್ಟದ ಪರಿಸ್ಥಿತಿಗಳು ನಿಮ್ಮ ಜೀವಿತಗಳೊಳಗೆ ಬರುವಾಗ, ನೀವು ಏಕಾಂಗಿಯಲ್ಲ ಮತ್ತು ನಿಮ್ಮ ಜೀವಿತದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನಿಮ್ಮಿಂದ ಆಗುವದಿಲ್ಲ ಎಂಬದನ್ನು ಮರೆಯಬಾರದು. ಪೇತ್ರನು ನೀರಿನ ಮೇಲೆ ನಡೆದನು,


ಅದ್ಭುತವಾದ ವಿಷಯವಾಗಿದೆ ಆದರೆ ಅವನು ಸಂದೇಹಪಟ್ಟನು ಮತ್ತು ಭಯಪಟ್ಟನು ಆದ್ದರಿಂದ ಮುಳುಗಲಾರಂಭಿಸಿದನು. ಉತ್ತಮ ಸಹಾಯಕನಾದ ಯೇಸು ಕ್ರಿಸ್ತನು ಅವನ ಕೈ ಹಿಡಿದು ಅವನನ್ನು ನೀರಿನಿಂದ ಮೇಲಕ್ಕೆತ್ತಿದನು. ನಿಮಗಾಗಿ ಚಾಚಲಾಗಿರುವ ಕರವನ್ನು ಹಿಡಿದುಕೊಳ್ಳಿರಿ.

೩. ದೇವರಿಂದ ಮಾತ್ರವೇ ಕೊಡಲು ಸಾಧ್ಯವಿರುವ ಯಾವ ಕಾರ್ಯಗಳು ನಿಮಗೆ ಬೇಕಾಗಿವೆ? ನಿಮ್ಮ ಯೌವನ ಪ್ರಾಯ, ಬಲ ಮತ್ತು ಸೌಂದರ್ಯದಿಂದ ನಿಮಗೆ ಯಾವುದೇ ತೊಂದರೆಗಳಾಗುವದಿಲ್ಲ ಎಂದು ಯೋಚಿಸಬೇಡಿರಿ. ನಿಜವಾಗಿ ಹೇಳುವದಾದರೆ ದೇವರಲ್ಲಿ ನೆಲೆಗೊಳ್ಳದೆ ಹೋದರೆ ಏನೂ ಮಾಡಲಾಗುವದಿಲ್ಲ. ಕ್ರೈಸ್ತರಲ್ಲದವರ ಬಳಿ ಆಸ್ತಿ, ಕಾರುಗಳು, ಬಟ್ಟೆಗಳು ಇದ್ದು ಯಾವುದಕ್ಕೂ ಕೊರತೆಯಿಲ್ಲದಿರುವದನ್ನು ನೀವು ಗಮನಿಸಿರಬಹುದು, ಆದರೆ ದೇವರ ಮಕ್ಕಳಾಗಿ ನಿಮಗೆ ಬೇಕಾದವುಗಳು ನಿಮಗೆ ಇಲ್ಲದಿರಬಹುದು? ದೇವರನ್ನು ಆತುಕೊಳ್ಳುವದು ಒಳ್ಳೆಯದಲ್ಲ ಎಂದು ನಮಗೆ ಅನ್ನಿಸಬಹುದು, ಆದರೆ ನಾವು ತಿಳಿದುಕೊಳ್ಳಬೇಕಾಗಿರುವ ಸಂಗತಿ ಏನೆಂದರೆ ಇವರಲ್ಲಿ ಅನೇಕರಿಗೆ ಮನಶ್ಯಾಂತಿ ಇರುವದಿಲ್ಲ, ಕೆಲವೊಮ್ಮೆ ಪ್ರೀತಿಸುವವರು ಇರುವದಿಲ್ಲ, ಇವರು ಜನರನ್ನು ಕ್ಷಮಿಸಿರುವದಿಲ್ಲ ಮತ್ತು ಈ ಲೋಕದಲ್ಲಿ ನಿತ್ಯಜೀವ ಪಡೆದುಕೊಳ್ಳುವದೇ ಉತ್ತಮವಾದ ಕಾರ್ಯ ಎಂಬದನ್ನು ಮರೆತವರಾಗಿ ಕೇವಲ ಹಣ ಸಂಪಾದನೆಯ ಮೇಲೆ ಮನಸ್ಸಿಟ್ಟಿರುತ್ತಾರೆ.

| | | | | | | | | |
|---|---|---|---|---|---|---|---|---|
| ನ | ಸ | ಯೊ | ಒ | ದಿ | ಶಿ | ವ | ಜೌ | ರಿ |
| ಲ | ಬ | ಳ್ಳಿ | ಐ | ಕೊ | ಗಿ | ನ | ಡ | ವಿ |
| ಬಿ | ಜೂ | ಮೂ | ಗು | ಶಿ | ಬೆ | ಇ | ಜ್ | ಸಿ |
| ಇ್ | ಯ್ವ | ಯ | ವ | ನ | ಫಾ | ಗ | ಉ | ಯ |
| ಇ | ಡು | ವ | ಡು | ತs | ಬ | ಳ್ಳಿ | ಳು | ಡು |
| ನೆ | ಲೆ | ಗೊ | ಳ್ಳ | ಣೆ | ದಿ | ಶಲ | ವ | ಯೆ |
| ದೇ | ರ | ನ- | ದೋ | ಸಂ | ನೀ | ರು | ಳ | ಮ್ |
| ವ | ಯೇ | ಸು | ಳ್ | ಫ | ದಿ | ವು | ಮೆ | ಸ |
| ರು | ಮಿ | ನ | ದ್ದ | ಳ್ಳ | ಬ್ | ಏ | ಭ | ಯ |
| ಸ್ತ | ಆ | ವು | ಗೊ | ಟಂ | ರಿ | ನೂ | ಕೊ | ಮ್ಮೆ |
| ಕೊ | ಯ್ದ | ಲ | ಸ್ | ಷಿ | ಗ್ಯ | ಇ | ಯೂ | ಡೆ |
| ಅ | ನೆ | ರ್ | ಪೇ | ತ್ರ | ಲಿ | ಲ್ಲ | ಸು | ಳಿ |
| ಝೂ | ಳ್ಳ | ಸ್ವೈ | ನಿ | ಕ | ನು | ಳ್ಳಿ | ಫ | ಲ |
| ಸ | ಟ್ | ಕೊ | ಯಿ | ನ | ಮ | ಗೊ | ವು | ಯೊ |

ನಿಮ್ಮ ಜೀವಿತದ ಯಾವ ಕ್ಷೇತ್ರಗಳಲ್ಲಿ ನೀವು ಬಲಿಷ್ಠರಾಗಿರುವಿರಿ ಮತ್ತು ಯಾವುದರಲ್ಲಿ ಬಲಿಷ್ಠರಾಗಲು ಬಯಸುವಿರಿ ಮತ್ತು ಯಾವ ಕ್ಷೇತ್ರಗಳು ನಿಮಗೆ ಕಷ್ಟಕರವಾಗಿವೆ.

ಇಲ್ಲಿ ನಿಮ್ಮ ಹೆಸರು ಹಾಕಿರಿ



**ನನ್ನಲ್ಲಿರುವ ಒಳ್ಳೆಯ ಅಂಶಗಳು**

ಉದಾಹರಣೆಗೆ: ನಾನು ಪ್ರಾಮಾಣಿಕನು

**ನಾನು ಬೆಳೆಯಲು ಬಯಸುತ್ತೇನೆ**


ಉದಾಹರಣೆಗೆ: ತಾಳ್ಮೆಯುಳ್ಳವನಾಗಬೇಕು

**ನನಗೆ ಬಹಳ ಕಷ್ಟ**

ಉದಾಹರಣೆಗೆ: ವಿಧೇಯತೆ







# ಪೇತ್ರನೊಂದಿಗೆ ವನಭೋಜನ ೫

## ಜೆಲ್-ಓ ಶಿಪ್



ಸಾಮಗ್ರಿಗಳು:

- ಪ್ರತಿಯೊಂದು ಮಗುವಿಗೆ ಒಂದು ಲೋಟ ಅಥವಾ ಸಣ್ಣ ಪಾರದರ್ಶಕ ಪ್ಲಾಸ್ಟಿಕ್ ಬಟ್ಟಲು ಮತ್ತು ಚಮಚ.
- ನೀಲಿ ಜೆಲಟಿನ್, ಆರೆಂಜ್ ಭಾಗ, ಗಮ್ಮಿ ಬಿಯರ್, ಟೂತ್ ಪಿಕ್ ಮತ್ತು ಹಾಳೆ.

ಸೂಚನೆಗಳು:

- ಪ್ರತಿ ಮಗುವಿಗೆ ಒಂದು ಲೋಟ ಜೆಲಟಿನ ಕೊಡಿರಿ.
- ಪ್ರತಿಯೊಬ್ಬ ವಿದ್ಯಾರ್ಥಿಗೆ ನೀವು ಆರೆಂಜ್, ಎರಡು ಗಮ್ಮಿ ಬಿಯರ್ಸ್, ಟೂತ್ ಪಿಕ್ ಮತ್ತು ಹಾಳೆಯನ್ನು ಕೊಡಬೇಕು.
- ಆರೆಂಜ್ ದೋಣಿಯಾಗಿ ಉಪಯೋಗಿಸಿರಿ, ಟೂತ್ ಪಿಕ್ ಮತ್ತು ಹಾಳೆಯನ್ನು ಬಾವುಟ ಮಾಡಿರಿ ಮತ್ತು ಪುಟ್ಟ ಗಮ್ಮಿ ಬಿಯರ್ಸ್ ಪೇತ್ರ ಹಾಗೂ ಯೇಸುವನ್ನು ಪ್ರತಿನಿಧಿಸುತ್ತವೆ.
- ಈಗ ಎಲ್ಲರೂ ಇದನ್ನು ಸವಿಯೋಣ!

## ಪೇತ್ರನೊಂದಿಗೆ ನಾಟಕ




ಪೇತ್ರನು ನೀರಿನ ಮೇಲೆ ನಡೆದನು (ಮತ್ತಾಯ ೧೪:೨೨-೩೩)

ದೃಶ್ಯ: "ಪ್ರಮುಖ ವಿನಾಶಕ" ಎಂಬ ಚಂಡಮಾರುತವು ಸಮುದ್ರದಲ್ಲಿ ರೂಪುಗೊಂಡು ಭೂಮಿಗೆ ಅಪ್ಪಳಿಸಲು ಬರುತ್ತಿದೆ ಎಂಬದಾಗಿ ಪ್ರೇಕ್ಷಕರಿಗೆ ಹೇಳಿರಿ. ಸುತ್ತಮುತ್ತಲ ಪ್ರದೇಶದಲ್ಲಿರುವ ಅನೇಕ ಮನೆಗಳು ಮತ್ತು ಜನರ ಇದರಿಂದ ತೊಂದರೆಗೊಳಗಾಗುತ್ತಾರೆ.

ಯಾರೊಬ್ಬರೂ ಯಾವುದೇ ದೋಣಿಯಲ್ಲಿ ವಿಶೇಷವಾಗಿ ಲೋಗೋಸ್ ಹಡಗಿಯಲ್ಲಿ ಹೋಗಬಾರದೆಂದು ಹೇಳಲಾಗಿದೆ. (ಒಂದುವೇಳೆ ಹಡಗು ಮತ್ತು ಬಿರುಗಾಳಿಯ ಶಬ್ದಗಳನ್ನು ಉಪಯೋಗಿಸುವದಾದರೆ, ಎಲ್ಲರ ಗಮನವನ್ನು ನಿಮ್ಮೆಡೆಗೆ ಸೆಳೆದುಕೊಳ್ಳಲು ಸಹಾಯವಾಗುತ್ತದೆ)

- ಯೇಸು ಕ್ರಿಸ್ತನು ತನ್ನ ಆಲೋಚನೆಗಳನ್ನು ತಿಳಿಸಲು ಪೇತ್ರನು ಮತ್ತು ಕೆಲವು ಯೌವನಸ್ಥರನ್ನು ಆಹ್ವಾನಿಸಿದನು. ಅವರು ಮುಂದಾಗಿ ಹೋಗಬೇಕಾಗಿತ್ತು ನಂತರ ಯೇಸು ಕ್ರಿಸ್ತನು ಅವರನ್ನು ಸೇರಿಕೊಳ್ಳುವವನಾಗಿದ್ದನು, ಆದ್ದರಿಂದ ಮಾರಣೆಯ ದಿನದ ಅವರ ಪ್ರಯಾಣಕ್ಕಾಗಿ ಆತನು ಅವರಿಗೆ ಲೋಗೋಸ್ ಹಡಗಿನ ಟಿಕೆಟ್ ಗಳನ್ನು ಖರೀದಿಸಿದನು.
- ಯೇಸು ಕ್ರಿಸ್ತನು ಅವರಿಗೆ ಹೇಳಿದ್ದೇನೆಂದರೆ ನಾನು ಮೆಕ್ಸಿಕೋದ, ಒಕ್ಸಾಕ (ನಿಮ್ಮ ದೇಶದ ಹೆಸರು ಹಾಕಿರಿ) ಮಾತುಕತೆಗಳನ್ನು ಮುಗಿಸಿ ಮಾರಣೆಯ ದಿನ ಮೆಕ್ಸಿಕೋದ, ಕಾಯಫಾಸ್ಗೆ (ನಿಮ್ಮ ದೇಶದ ಹೆಸರು ಹಾಕಿರಿ) ಬರುವದಾಗಿ ಹೇಳಿದನು. "ಪ್ರಮುಖ ವಿನಾಶಕವಾದ" ಚಂಡಮಾರುತ ಸಂಭವಿಸುತ್ತದೆ ಎಂಬ ಎಚ್ಚರಿಕೆಯ ಹೊರತಾಗಿಯೂ ಅವರು ಪ್ರಯಾಣಕ್ಕೆ ಹೊರಟರು.

- ಯೇಸು ಕ್ರಿಸ್ತನು ವೇದಿಕೆಯ ಮೂಲೆಯಲ್ಲಿ ಪ್ರಾರ್ಥನೆ ಮಾಡಲು ಪ್ರಾರಂಭಿಸಿದನು ಮತ್ತು ದೀರ್ಘಕಾಲದ ಪ್ರಾರ್ಥನೆಗಾಗಿ ಅಲ್ಲಿಯೇ ಉಳಿದನು.
- ಯೇಸು ಕ್ರಿಸ್ತನು ಪ್ರಾರ್ಥನೆ ಮಾಡುವಾಗ ವೇದಿಕೆಯ ಮಧ್ಯಭಾಗದಲ್ಲಿರುವ ಪೇತ್ರನು ಪ್ರಯಾಣಕ್ಕೆ ಸಿದ್ಧತೆ ಮಾಡಿಕೊಂಡನು. ಅವರು ಮುಂದುವರೆದರು ಮತ್ತು ಚಂಡಮಾರುತದ ನಿಮಿತ್ತ ಭಯದ ವಾತಾವರಣ ಸೃಷ್ಟಿಯಾಯಿತು. ಪೇತ್ರನು ಅನೇಕ ಕಾರ್ಯಗಳನ್ನು ಮಾಡಿದನು: ಆಹಾರ ಖರೀದಿಸಿದನು, ಊಟ ಮಾಡಿದನು, ನಂತರ ಹೊಟ್ಟೆ ತೊಳೆಸಿ ತಿಂದದ್ದನ್ನೆಲ್ಲಾ ವಾಂತಿ ಮಾಡಿದನು, ಸ್ವಲ್ಪ ಕಾಲ ನಿದ್ದೆ ಮಾಡಿದ ನಂತರ ಪುನಃ ಆಹಾರ ಖರೀದಿಸಿ ತಿಂದರೆ ಆದರೆ ಸಮುದ್ರದಲ್ಲಿ ಏರಿಳಿತವಾದ್ದರಿಂದ ಪುನಃ ತಿಂದಿದ್ದನ್ನೆಲ್ಲಾ ವಾಂತಿ ಮಾಡಿದನು. (ಅವರು ಯೇಸು ಕ್ರಿಸ್ತನನ್ನು ನೋಡಿ ಐದು ತಾಸುಗಳಾಗಿವೆ ಎಂಬದನ್ನು ಮಕ್ಕಳಿಗೆ ತಿಳಿಸಿರಿ)
- ಪೇತ್ರನು ವಾಂತಿ ಬರುವ ಹಾಗಿದ್ದರಿಂದ ತನ್ನ ಸ್ನೇಹಿತನೊಂದಿಗೆ ಹಿಂಬದಿಗೆ ಹೋದನು, ಅಲ್ಲಿ ಅಲೆಗಳನ್ನು ನೋಡುವಾಗ ನೀರಿನ ಮೇಲೆ ಭೂತ ನಡೆದುಕೊಂಡು ಬರುವ ಹಾಗೆ ಅವನಿಗೆ ಅನ್ನಿಸಿತು.
- ಎಲ್ಲರೂ ಭಯದಿಂದ "ಭೂತ" ಎಂದು ಕೂಗಲು ಆರಂಭಿಸಿದರು. ನಂತರ ಯೇಸು ಕ್ರಿಸ್ತನು ಅವರಿಗೆ "ನಾನು, ಯೇಸು, ಭಯಪಡಬೇಡಿರಿ" ಎಂದು ಹೇಳಿದನು.
- ಪೇತ್ರನು ಯೇಸು ಕ್ರಿಸ್ತನಿಗೆ ನಾನು ನೀರಿನ ಮೇಲೆ ನಡೆದು ಬರಲೇ ಎಂದು ಕೇಳಿದನು . . . ಅದಕ್ಕೆ ಯೇಸು "ಖಂಡಿತವಾಗಿಯೂ ಬರಬಹುದು." "ಬಾ" ಎಂದು ಹೇಳಿದನು.
- ಪೇತ್ರನು ನೀರಿನ ಮೇಲೆ ನಡೆಯಲು ಮೆಟ್ಟಿಲು ಇಳಿಯಲಾರಂಭಿಸಿದನು, ಅವನ ಸ್ನೇಹಿತನಿಗೆ ಭಯವಾಗಿ ಹಡಗಿನ ನಾಯಕನ ಬಳಿ ಮಾತನಾಡಲು ಹೋದನು (ಹತ್ತಲು ಮತ್ತು ಇಳಿಯಲು ಸಹಾಯವಾಗುವಂಥ ಸಣ್ಣ ಮೆಟ್ಟಿಲು ಇರುವದಾದರೆ ಅನುಕೂಲವಾಗುತ್ತದೆ)
- ಪೇತ್ರನು ನೇರವಾಗಿ ನೀರಿಗೆ ಇಳಿದನು ಮತ್ತು ಯೇಸು ಕ್ರಿಸ್ತನನ್ನು ನೋಡುತ್ತಾ ಆತನ ಕಡೆಗೆ ನಡೆದುಕೊಂಡು ಹೋದನು.
- ಆದರೆ ಪೇತ್ರನು ನೀರಿನನ್ನು ಕೆಳಗೆ ನೋಡಿದಾಗ, ಭಯಪಟ್ಟು ಮುಳುಗಲಾರಂಭಿಸಿದನು. ಯೇಸು ಕ್ರಿಸ್ತನು ಅವನ ಕೈಹಿಡಿದು ಮೇಲೆತ್ತಿ ಅವನನ್ನು ಕಾಪಾಡಿದನು.
- ಅವರಿಬ್ಬರೂ ಒಟ್ಟಾಗಿ ನೀರಿನ ಮೇಲೆ ನಡೆದರು ಮತ್ತು ಮೆಟ್ಟಿಲು ಹತ್ತಿ ಲೋಗೋಸ್ ಒಳಗೆ ಬಂದರು. ಈಗ ಇಬ್ಬರೂ ಹಡಗಿನಲ್ಲಿ ಸುರಕ್ಷಿತವಾಗಿದ್ದಾರೆ.
- ಅವರು ಹಡಗಿನೊಳಗೆ ಬಂದ ಕೂಡಲೇ, ಚಂಡಮಾರುತವು ಶಾಂತವಾಯಿತು ಮತ್ತು ಸಮುದ್ರವು ಸಹಜ ಸ್ಥಿತಿಗೆ ಬಂದಿತು.

(ಮುಗಿಸುವ ಸಮಯದಲ್ಲಿ ಕೆಲವು ಅಧ್ಯಾಪಕರು ಮುಂದೆ ಬಂದು "ಇದು ಅದ್ಭುತ, ಯೇಸು ಕ್ರಿಸ್ತನು ನಿಜವಾಗಿಯೂ ದೇವಕುಮಾರನು" ಎಂದು ಹೇಳಬೇಕು)

## ಕಣಜದ ಕರಕುಶಲಗಳು ೫

### ಪೇತ್ರನು ನೀರಿನ ಮೇಲೆ ನಡೆದನು



೧. ಚಿತ್ರಗಳನ್ನು ಡೌನ್ ಲೋಡ್ ಮಾಡಿರಿ. ಮಕ್ಕಳು ಮೂರು ಚಿತ್ರಗಳಿಗೆ ಮತ್ತು ಸಮುದ್ರಕ್ಕೆ ಬಣ್ಣ ಹಚ್ಚಬೇಕು.

೨. ಕೆಳಭಾಗವನ್ನು ಬಿಟ್ಟು ಮೂರು ಚಿತ್ರಗಳನ್ನು ಕತ್ತರಿಸಿರಿ, ಇದರಿಂದ ಟ್ಯಾಬ್ ಇನ್ ಸರ್ಟ್ ಮಾಡಲು ಅಥವಾ ಸಮುದ್ರಕ್ಕೆ ಅಂಟಿಸಲು ಸಾಧ್ಯವಾಗುತ್ತದೆ.

೩. ಹಾಳೆಯನ್ನು ಚುಕ್ಕಿಯಿರುವ ಸಾಲಿಗನುಸಾರ ಉದ್ದವಾಗಿ ಮಡಚಿರಿ.

ಮಕ್ಕಳು ಅಲೆಗಳನ್ನು ಸೃಷ್ಟಿಸಲು ಅಡ್ಡವಾಗಿ ಹಾಳೆಯನ್ನು ಹರಿಯಬೇಕು. ಅವುಗಳ ಮೇಲೆ ಕ್ರಯಾನ್ ಅಥವಾ ಕತ್ತರಿಯನ್ನು ಉರುಳಿಸುವ ಮೂಲಕ ಅಲೆಗಳನ್ನು ಮಾಡಿರಿ.

### ಚಲನಗಳೊಂದಿಗೆ ಕೈಕುಲುಕುವದು




ದಿನ ೫: ಪವರ್ ರೇಂಜರ್

ಕಡೆಯ ಕ್ರಿಯೆಯ ನಂತರ, (ದಿನ ೪) ಬಲಗೈಯನ್ನು ಒಟ್ಟಿಗೆ ಬಿಗಿಮುಷ್ಟಿ ಮಾಡಿಕೊಳ್ಳಿರಿ
ನಿಮ್ಮ ಕೈಗಳನ್ನು ಒಟ್ಟಾಗಿ ಗಾಳಿಯಲ್ಲಿ ಮೇಲಕ್ಕೆ ಎತ್ತಿರಿ
ನಿಮ್ಮ ಮುಷ್ಟಿಯನ್ನು ಎದೆಯ ಮೇಲೆ ಇಟ್ಟುಕೊಳ್ಳಿರಿ
ನಿಮ್ಮ ಮುಷ್ಟಿಯನ್ನು ಬಿಗಿ ಹಿದಿದು ವೇಗವಾಗಿ ಕೈಯನ್ನು ಮುಂದಕ್ಕೆ ತನ್ನಿರಿ

## ದ್ರಾಕ್ಷೇತೋಟದ ಆಟಗಳು ೫

### ಬಾವುಟವನ್ನು ವಶಪಡಿಸಿಕೊಳ್ಳಿರಿ






೨ ತಂಡಗಳನ್ನು ರೂಪಿಸಿರಿ. ತಂಡದ ಸದಸ್ಯರು ತಾವು ಯಾವ ತಂಡಕ್ಕೆ ಸೇರಿದವರೆಂಬದನ್ನು ತೋರಿಸಲು ಕೈಗಳಿಗೆ ಕಲರ್ ಬ್ಯಾಂಡ್ ಕಟ್ಟಿಕೊಳ್ಳಬೇಕು. ಕೋರ್ಟ್ ಮೂಲೆಯಲ್ಲಿ ಪ್ರತಿಯೊಂದು ತಂಡವು ತಮ್ಮ ಬಾವುಟವನ್ನು ಹಾಕಬೇಕು. ಈ ಆಟದಲ್ಲಿ ಪ್ರತಿಯೊಂದು ತಂಡವು ತಮ್ಮ ಎದುರಾಳಿ ತಂಡದ ಬಾವುಟವನ್ನು ವಶಪಡಿಸಿಕೊಂಡು ತಮ್ಮ ಬಳಿಗೆ ತರಲು ತಂತ್ರ ರೂಪಿಸಬೇಕು.
ಮಗು “ತನ್ನ ಸುರಕ್ಷಿತ ಸ್ಥಾನದಲ್ಲಿರುವ” ಬದಲು ಹೊರಗಿರುವಾಗ ಎದುರಾಳಿ ತಂಡದವರು ಮುಟ್ಟಿದರೆ ಆಟದಿಂದ ಹೊರಗೆ ಹೋಗಬೇಕಾಗುತ್ತದೆ. ತಂಡದ ಸದಸ್ಯರು ನಿರಾತಂಕವಾಗಿ ಓಡಾಡಲು ನೀವು ಸುರಕ್ಷಿತ ಸ್ಥಾನವನ್ನು ನಿಗದಿಪಡಿಸಬೇಕು. ಆ ಸ್ಥಳವನ್ನು ಗುರುತಿಸುವದು ಪ್ರಾಮುಖ್ಯವಾಗಿರುತ್ತದೆ. ತಮ್ಮ ಬಾವುಟವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುವ ತಂಡದ ಸದಸ್ಯರು ಬಾವುಟದಿಂದ ಒಂದು ಅಡಿ ದೂರವೇ ಇರಬೇಕು. ಅಧ್ಯಾಪಕ ಮತ್ತು ಇತರೆ ವಯಸ್ಕರು ನಿರ್ಣಾಯಕರಾಗಿರುತ್ತಾರೆ.

## ಸಂಗೀತ ಮತ್ತು ಕೈಗೊಂಬೆ ಆಟದೊಂದಿಗೆ ಮುಗಿಸುವದು ೫



ಕುದುರೆ: ಇದು ಸಫಲವಾಗುವದಿಲ್ಲ!

ಹುಂಜ: ಏನಾಯಿತು? ಇದು ನೀನು ಕೆಲವು ದಿನಗಳ ಹಿಂದೆ ಖರೀದಿಸಿದ ಹೇರ್ ಡ್ರೈಯರ್ ಅಲ್ಲವೇ?

ಕುದುರೆ: ಹೌದು, ನಾವು ಪ್ರಯೋಜನವಿಲ್ಲದ ಕಾರ್ಯಗಳಿಗಾಗಿ ಹಣ ಖರ್ಚು ಮಾಡಬಾರದಾಗಿತ್ತು. ಇದಕ್ಕೂ ಮೊದಲು ಡ್ರೈಯರ್ ಇಲ್ಲದೆ ನನ್ನ ತಲೆ ಕೂದಲು ಒಣಗಿಸಲು ಒಂದೂವರೆ ತಾಸು ಬೇಕಾಗುತ್ತಿತ್ತು. ಆದರೆ ಈಗ ಇದಿರುವಾಗಲೂ ಹೆಚ್ಚು ಸಮಯ ಹಿಡಿಯುತ್ತಿದೆ. ಇದರಿಂದ ಯಾವುದೇ ಪ್ರಯೋಜನವಿಲ್ಲ!

ಹುಂಜ: ಇದು ತುಂಬಾ ಘೋರ! ನನ್ನ ಜುಟ್ಟು ಒಣಗಿಸಿಕೊಳ್ಳಲು ನನ್ನ ಬಳಿ ಇರುವ ಡ್ರೈಯರ್ ನಿಂದ ಐದು ನಿಮಿಷಯದಲ್ಲಿ ಸಾಧ್ಯವಾಯಿತು!

ಕುದುರೆ: ಆದರೆ, ನನ್ನದ್ದರಿಂದ ಪ್ರಯೋಜನವಿಲ್ಲ! ನೋಡು ಕಳೆದ ೮ ತಾಸುಗಳಿಂದ ಇದನ್ನು ನನ್ನ ತಲೆಯ ಮುಂದೆ ಇಟ್ಟುಕೊಂಡಿದ್ದೇನೆ, ಆದರೂ ನನ್ನ ಕೂದಲೇ ಒದ್ದೆಯಾಗಿಯೇ ಇದೆ! (ಗಮನಿಸಿರಿ: ಡ್ರೈಯರ್ ಪ್ಲೆಗ್ ಹಾಕಿಲ್ಲ)

ಹುಂಜ: ನೋಡು ಈಗ ಫ್ಲಗ್ ಹಾಕುತ್ತಿದ್ದೇನೆ. (ಡ್ರೈಯರ್ ಆನ್ ಆಗುತ್ತದೆ)

ಕುದುರೆ: ಏನದು ಶಬ್ದ? ಇದು ಸಿಡಿಯುವ ಹಾಗಿದೆ! ಕಾಪಾಡಿ! ಕಾಪಾಡಿ!

ಹುಂಜ: ಯಾಕೆ ಭಯಪಡುವೆ? ಇದರ ನೀವು ಫ್ಲಗ್ ಹಾಕಿರಲಿಲ್ಲ ಎಂಬದೇ? ನಿನ್ನ ತಲೆ ಕೂದಲು ಒಣಗದಿರುವಲ್ಲಿ ಯಾವ ಅಶ್ಚರ್ಯವೂ ಇಲ್ಲ. ಈಗ ಬಿಸಿ ಗಾಳಿ ಬರುತ್ತಿದೆಯೇ?

ಕುದುರೆ: ಹೌದು! (ತನ್ನ ತಲೆಯ ಹತ್ತಿರ ತರುವನು) ಇದು ಅದ್ಭುತ! ಖಂಡಿತವಾಗಿಯೂ ಇದು ಪ್ರಯೋಜನಕಾರಿಯಾಗಿದೆ.

ಹುಂಜ: ಹೌದು! ಫ್ಲಗ್ ಹಾಕಿದ ಕೂಡಲೇ ಡ್ರಯರ್ ಬಹಳ ಚೆನ್ನಾಗಿ ಕಾರ್ಯಮಾಡುತ್ತಿದೆ, ಆದರೆ ವಿದ್ಯುತ್ ಶಕ್ತಿ ಇಲ್ಲದೆ ಹೋದರೆ ಪ್ರಾಯೋಗಿಕವಾಗಿ ಇದು ಅಪ್ರಯೋಜಕವಾಗಿದೆ. ಯೋಹಾನ ೧೫:೫ ಹೇಳುವದು ಇದರಿಂದ ನನಗೆ ನೆನಪಾಗುತ್ತಿದೆ "ನಾನೇ ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ."

ಹುಂಜ: ಹೌದು, ದ್ರಾಕ್ಷೇಬಳ್ಳಿಯಾಗಿರುವ ಯೇಸು ಕ್ರಿಸ್ತನಲ್ಲಿ ನೆಲೆಗೊಳ್ಳದೆ ಇದ್ದರೆ, ಕಾರ್ಯಗಳನ್ನು ಸರಿಯಾಗಿ ಮಾಡಲು ಆಗುವದಿಲ್ಲ, ಆತನ ಮೂಲಕ ಮಾತ್ರವೇ ನಾವು ಒಳ್ಳೆಯ ಜೀವಿತ ಜೀವಿಸಲು ಮತ್ತು ಫಲ ಕೊಡಲು

**ಸಾಧ್ಯವಾಗುತ್ತದೆ. ಅದ್ಭುತ! ಈಗ ಬೇಗ ನಿನ್ನ ತಲೆ ಕೂದಲನ್ನು ಒಣಗಿಸಿಕೋ, ವಿಬಿಎಸ್ ಮಕ್ಕಳಿಗೆ ಗುಡ್ ಬೈ ಹೇಳೋಣ.**